ಸಂಪುಟ: 04 ಸಂಚಿಕೆ: 342 ಪುಟಗಳು: 08 ಭಾನುವಾರ 23 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನೀವು ನಿಮ್ಮ ಜೀವನದಲ್ಲಿ ಯಶಸ್ವಿಯಾಗಬೇಕೆಂದರೆ ನೀವು ಜ್ಞಾನ ಮತ್ತು ಶಿಸ್ತನ್ನು ಬೆಳೆಸಿಕೊಳ್ಳಲೇಬೇಕು, ಜ್ಞಾನ ಮತ್ತು ಶಿಸ್ತುಗಳು ನಿಮ್ಮನ್ನು ಅನಾವಶ್ಯಕ ಸಮಸ್ಯೆಗಳಿಂದ ರಕ್ಷಿಸುತ್ತವೆ.

## ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಪಿ ಕೇಂದ್ರ ಸ್ಥಾಪನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಪಿ ಆರಂಭಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ವಿಜಯಪುರ ಜಿಲ್ಲಾಸ್ಪತ್ರೆಯಲ್ಲಿ ನಿರ್ಮಿಸಲಾದ ಕಿಮೋಥೆರಪಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ವಿಜಯಪುರ, ರಾಯಚೂರು ಜಿಲ್ಲೆಗಳಲ್ಲಿ ಕಿಮೋಥೆರಪಿ ಕೇಂದ್ರ ಸ್ಥಾಪಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಡೇ ಕೇರ್ ಕಿಮೋಥೆಪಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಕಿಮೋಥೆರಪಿಗಾಗಿ ದೂರದ ಊರುಗಳಿಗೆ ಹೋಗುವುದು ತಪ್ಪಲಿದೆ. ಕ್ಯಾನ್ಸರ್ ರೋಗಿಗಳು ಸ್ಥಳೀಯವಾಗಿ ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸೆ ಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಯಾವುದೇ ರೋಗವನ್ನು ಗುಣಪಡಿಸಲು ಪ್ರಾಥಮಿಕ ಹಂತದಲ್ಲಿ ರೋಗ ಪತ್ತೆ ಹಚ್ಚಿದಲ್ಲಿ ಸಹಾಯಕವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಹಂತದಲ್ಲಿ ರೋಗ ಪತ್ತೆ ಹಚ್ಚಲು ಅವಶ್ಯಕತೆ ಇರುವ ಯಂತ್ರೋಪಕರಣಗಳನ್ನು ಆಸ್ಪತ್ರೆಗಳಲ್ಲಿ ಅಳವಡಿಸಲಾಗಿದೆ. ಜಿಲ್ಲೆಯ ಜನ ಕಿಮೋಥೆರಪಿ ಮತ್ತು ಮೆಮೊಗ್ರಾಫಿ ಕೇಂದ್ರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಕಾರ್ಯಕ್ರಮದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್, ಜವಳಿ ಸಚಿವ ಶಿವಾನಂದ ಪಾಟೀಲ್ ಸೇರಿದಂತೆ ಹಲವರು ಇದ್ದರು

## ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಮಾತು ಬಿಜೆಪಿ ಅಧ್ಯಕ್ಷರಿಗೆ ಯಾಕೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ನಡೆಸಲು ಉದ್ದೇಶಿಸಿರುವ ಜನಾಂದೋಲನ ಕಾರ್ಯಕ್ರಮಕ್ಕೆ ಯತ್ನಾಳ್ ಬಣದ ನಾಯಕ ಕುಮಾರ್ ಬಂಗಾರಪ್ಪ ಕಿಡಿಕಾರಿದ್ದಾರೆ. ಈ ಹಿಂದೆ ಹಲವು ವಿಷಯಗಳ ಬಗ್ಗೆ, ಅಂದೋಲನ ನಡೆಸಲು ಅವಕಾಶವಿತ್ತು.ಆಗ ಯಾವ ಆಂದೋಲನವನ್ನು ಮಾಡಲಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರು ಸುದ್ದಿಗೋಷ್ಠಿ ಕರೆದು ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಮಾಡಿ ಎಂದು ಮಾತನಾಡುತ್ತಾರೆ. ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಮಾತು ಇವರಿಗೆ ಯಾಕೆ ಬೇಕು. ನಾವು ನಿಮ್ಮನ್ನೇ ಬದಲಾವಣೆ ಮಾಡಬೇಕು ಅಂತಿದ್ದೇವ ಎಂದರು. ಆಂದೋಲನ ಪದದ ಅರ್ಥ ಇವರಿಗೆ ಗೊತ್ತಿದೆಯೋ ಇಲ್ಲವೋ. ನಾವ್ಯಾರೂ ಯಡಿಯೂರಪ್ಪ ವಿರುದ್ಧ ಮಾತನಾಡುತ್ತಿಲ್ಲ ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಸರಿಯಾಗಿಲ್ಲ. ತಮಗೆ ಬೇಕಾದವರನ್ನು ಆಯ್ಕೆ ಮಾಡುತ್ತಿದ್ದಾರೆ. ಬಿಜೆಪಿ ಈಗ ಕೆಜೆಪಿ ಟೀಂ ಆಗಿದೆ. ಕೆಜೆಪಿಯವರನ್ನೇ ಎಲ್ಲಾದಕ್ಕೂ ನೇಮಕ ಮಾಡುತ್ತಿದ್ದಾರೆ. ಹಾಗಾಗಿಯೇ ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಎಲ್ಲೆಡೆ ವಿರೋಧ ವ್ಯಕ್ತವಾಗುತ್ತಿದೆ ಎಂದರು.

## ಗ್ರಾಹಕರಿಗೆ ಶಾಕ್: ನಂದಿನಿ ಹಾಲಿನ ದರ 5 ರೂ. ಹೆಚ್ಚಳಕ್ಕೆ ಒತ್ತಡ

• ಉದಯವಾಹಿನಿ, ಬೆಂಗಳೂರು

ನಂದಿನಿ ಹಾಲಿನ ದರ ಹೆಚ್ಚಳದ ಬಗ್ಗೆ ಸರ್ಕಾರ ನಿರ್ಧಾರ ಮಾಡಿಲ್ಲ ಎಂದು ಕೆಎಂಎಫ್ ಅಧ್ಯಕ್ಷ ಭೀಮಾನಾಯ್ ಮಾಹಿತಿ ನೀಡಿದ್ದಾರೆ. ನಂದಿನಿ ಹಾಲಿನ ದರ ಹೆಚ್ಚಳ ಮಾಡುವಂತೆ ಒತ್ತಡವಿದೆ. ಸಂಬಂಧಿಸಿದ ನಿಗಮಗಳ ಸಭೆ ಕರೆದು ಚರ್ಚೆ ಮಾಡಲಾಗಿದೆ. ಐದು ರೂಪಾಯಿ ಹೆಚ್ಚಳ ಮಾಡಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಹೆಚ್ಚಳ ಮಾಡಿದ ದರವನ್ನು ರೈತರಿಗೆ ನೀಡಬೇಕೆಂದು ಚರ್ಚೆ ನಡೆದಿದೆ. ಸಭೆಯಲ್ಲಿ ಚರ್ಚಿಸಿದ ವಿಷಯವನ್ನು ಸರ್ಕಾರಕ್ಕೆ ತಿಳಿಸಿದ್ದೇವೆ. ಆದರೆ, ಸರ್ಕಾರದಿಂದ ಯಾವುದೇ ನಿರ್ಧಾರ ಹೊರ ಬಂದಿಲ್ಲ ಎಂದು ತಿಳಿಸಿದ್ದಾರೆ.

## ಆಸ್ತಿ ಖರೀದಿದಾರರೇ, ಫೆ. 27 ರಿಂದ ಆಸ್ತಿ ನೋಂದಣಿ ಸ್ಥಗಿತ?

• ಉದಯವಾಹಿನಿ, ಬೆಂಗಳೂರು

ರತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆಬ್ರವರಿ 27 ರಿಂದ ರಾಜ್ಯಾದ್ಯಂತ ಆಸ್ತಿ ನೋಂದಣಿ ಸೇರಿ ಎಲ್ಲಾ ಸೇವೆಯನ್ನು ಬಹಿಷ್ಕರಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಉಪ ನೋಂದಣಾಧಿಕಾರಿಗಳು ಮತ್ತು ಸಿಬ್ಬಂದಿ ನಿರ್ಧರಿಸಿದ್ದಾರೆ. ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆ ನೌಕರರ ಸಂಘ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಇಲಾಖೆಯಕಾರ್ಯ ದರ್ಶಿಗಳಿಗೆ ಈ ಸಂಬಂಧ ಪತ್ರ ಸಲ್ಲಿಸಿದ್ದು ಬೇಡಿಕೆಗಳನ್ನು ಈಡೇ ರಿಸದಿದ್ದರೆ ಫೆಬ್ರವರಿ 27ರಿಂದ ರಾಜ್ಯಾದ್ಯಂತ ಆಸ್ತಿ ದಸ್ತಾವೇಜು ನೋಂದಣಿ ಸೇರಿ ಎಲ್ಲಾ ಸೇವೆಗಳನ್ನು ಬಹಿಷ್ಕರಿಸಿ ಮುಷ್ಕರ ಹೂಡಲು ನಿರ್ಧಾರ ಕೈಗೊಂಡಿರುವುದಾಗಿ ಹೇಳಿದ್ದಾರೆ.

ಕಾವೇರಿ-2 ತಂತ್ರಾಂಶದಲ್ಲಿನ ಸಮಸ್ಯೆ. ಇಸಿ, ಸಿಸಿ ವಿತರಿಸಲು ಉಂಟಾಗುತ್ತಿರುವ, ಸರ್ವರ್ ಸಮಸ್ಯೆ, ಐಟಿ ಅಧಿಕಾರಿಗಳು ಮಾಹಿತಿ ಹೆಸರಲ್ಲಿ ಉಪ ನೋಂದಣಾಧಿಕಾರಿಗಳಿಗೆ ನೀಡುತ್ತಿರುವ ಕಿರುಕುಳದ ವಿರುದ್ಧ ಹಾಗೂ ವರ್ಗಾವಣೆಯ ಪ್ರತ್ಯೇಕ ನಿಯಮ ರೂಪಿಸಲು ಮುಷ್ಕರ ಕೈಗೊಳ್ಳಲಾಗಿದೆ.



# ರಾಜ್ಯಪಾಲ vs ಸರ್ಕಾರ ಶೀತಲ ಸಮರ

## ವಿಧೇಯಕ ಅನುಮೋದಿಸದೆ ವಾಪಸ್ಸು ಕಳುಹಿಸಿದ ರಾಜ್ಯಪಾಲರು

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ-2024 ಸೇರಿದಂತೆ ಒಟ್ಟು ಮೂರು ಮಸೂದೆಗಳಿಗೆ ಸಹಿ ಹಾಕದೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸರ್ಕಾರಕ್ಕೆ ವಾಪಸ್ ಕಳಿಸಿದ್ದಾರೆ. ಈ ತಿದ್ದುಪಡಿಯು ದಾರಿ ತಪ್ಪಿಸುವಂತಿದೆ. ಬದಲಾವಣೆ ತರುವ ಉದ್ದೇಶಕ್ಕಿಂತಲೂ ಅಧಿಕಾರ ಕಿತ್ತುಕೊಳ್ಳುವ ಯತ್ನವಾಗಿದೆ ಎಂದಿದ್ದಾರೆ. ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಯನ್ನು ಬೆಳಗಾವಿಯಲ್ಲಿ ನಡೆದಿದ್ದ ರಾಜ್ಯ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗಿತ್ತು.

ಈ ಮಸೂದೆ ಪ್ರಕಾರ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರ ಬದಲು ಮುಖ್ಯಮಂತ್ರಿಗಳು ಕುಲಾಧಿಪತಿಗಳಾಗಲಿದ್ದಾರೆ. ವಿಶ್ವವಿದ್ಯಾಲಯದ ಎಲ್ಲಾ ನೇಮಕಾತಿ, ಆಡಳಿತಾತ್ಮಕ ಅಧಿಕಾರಿಗೆ ಮುಖ್ಯಮಂತ್ರಿಗಳಿಗೆ ಇರಲಿದೆ.

ಈ ಮೂಲಕ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ವಾಪಸ್ ಕಳುಹಿಸಿ ಇತರ ಎರಡು ಮಸೂದೆಗಳೆಂದರೆ ಮೈಸೂರು ಪ್ರಾಧಿಕಾರ ಅಭಿವೃದ್ಧಿ ಮಸೂದೆ-2024 ಮತ್ತು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ರಕ್ಷಣೆ (ತಿದ್ದುಪಡಿ) ಮಸೂದೆ-2024ಕ್ಕೆ ಸಹಿ ಹಾಕದೆ ರಾಜ್ಯಪಾಲರು ವಾಪಸ್ ಕಳುಹಿಸಿದ್ದಾರೆ.

**ಈ ಹಿಂದೆಯೂ ಮಸೂದೆ ವಾಪಸ್ ಕಳುಹಿಸಿದ್ದ ರಾಜ್ಯಪಾಲರು:** ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಯನ್ನು ತಡೆಗಟ್ಟುವ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಗೆ ಅಂಕಿತ ಹಾಕದೆ ಹಲವು ಸ್ಪಷ್ಟನೆ ಕೇಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಾಪಸ್ ಕಳುಹಿಸಿದ್ದರು. ಸುಗ್ರೀವಾಜ್ಞೆಯಲ್ಲಿ ಸಾಲ ಪಡೆದವರ ರಕ್ಷಣೆಗೆ ಮಾತ್ರವೇ ಗಮನ ಹರಿಸಲಾಗಿದೆ. ಸಹಜ ನ್ಯಾಯದ ಅಡಿಯಲ್ಲಿ ಸಾಲ ಕೊಟ್ಟವರಿಗೆ ರಕ್ಷಣೆ ಕಾಣಿಸುತ್ತಿಲ್ಲ. ಸುದೀರ್ಘ ಅವಧಿಯಲ್ಲಿ ಇದು ಮಾರಕವಾಗಲಿದೆ. ಮೈಕ್ರೋ ಫೈನಾನ್ಸ್ 3 ಲಕ್ಷಕ್ಕಿಂತ ಜಾಸ್ತಿ ಸಾಲ ಕೊಡುವುದಿಲ್ಲ. ನೀವು ಐದು ಲಕ್ಷ ದಂಡ ಹೇಗೆ ಹಾಕುತ್ತೀರಾ'' ಎಂಹೇಗೆ ಹಾಕುತ್ತೀರಾ'' ಎಂದು ರಾಜ್ಯಪಾಲರು ಸರ್ಕಾರವನ್ನು ಪ್ರಶ್ನೆ ಮಾಡಿದ್ದರು.

**ಕಾನೂನು ಹೋರಾಟಕ್ಕೆ ಮುಂದಾದ ಸರ್ಕಾರ:** ರಾಜ್ಯಪಾಲರ ನಡೆಯಿಂದ ಆಕ್ರೋಶಗೊಂಡಿರುವ ರಾಜ್ಯ ಸರ್ಕಾರ ಕಾನೂನು ಹೋರಾಟ ನಡೆಸಲು ಮುಂದಾಗಿದೆ. ರಾಜ್ಯಪಾಲರ ನಡೆ ವಿರುದ್ಧ ಕಾನೂನು ಕ್ರಮದ ಮೊರೆ ಹೋಗಲು ರಾಜ್ಯ ಸರ್ಕಾರದ ಚಿಂತನೆ ನಡೆಸಿದೆ.

ಇನ್ನು ನಾಲ್ಕು ಮಸೂದೆಗಳನ್ನು ಅಂಗೀಕರಿಸಲು ರಾಜ್ಯಪಾಲರು ಬಾಕಿ ಉಳಿಸಿಕೊಂಡಿದೆ.

**ರಾಜ್ಯಪಾಲರಿಂದ 11 ಮಸೂದೆ ವಾಪಸ್:** ಈ ಹಿಂದೆ ರಾಜ್ಯಪಾಲರು 11 ಮಸೂದೆಗಳಿಗೆ ಹೆಚ್ಚಿನ ಮಾಹಿತಿ ಕೋರಿ ರಾಜ್ಯ ಸರ್ಕಾರ ಹಿಂತಿರುಗಿಸಿದ್ದರು. ಇದರಿಂದ ಮಸೂದೆಗಳು ಪಾಸಾಗದೆ ಸರ್ಕಾರ ಇಕ್ಕಟ್ಟಿಗೆ ಸಿಲುಕಿಸಿತ್ತು.

2024ರ ಜನವರಿಯಿಂದ 2024ರ ಆಗಸ್ಟ್‌ವರೆಗೆ ರಾಜ್ಯಪಾಲರು ಒಟ್ಟು 11 ಮಸೂದೆಗಳನ್ನು ಹೆಚ್ಚಿನ ಮಾಹಿತಿ ಕೋರಿ ವಾಪಸ್ ಕಳುಹಿಸಿದ್ದರು. ಇದು ಸರ್ಕಾರ ತಲೆನೋವಾಗಿದ್ದರೂ, ರಾಜ್ಯಪಾಲರಿಗೆ ಸ್ಪಷ್ಟನೆ ನೀಡಿತ್ತು. ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಘರ್ಷಣೆ ನಡೆಯುತ್ತಿದ್ದು, ಈ ಮಸೂದೆಗಳನ್ನ ಜಾರಿಗೆ ತರಲು ಸರ್ಕಾರ ಯಾವ ಹೆಜ್ಜೆ ಇಡುತ್ತೆ ಕಾದು ನೋಡಬೇಕಿದೆ.



**ಸರ್ಕಾರದ ನಡುವೆ ಮತ್ತೆ ಸಂಘರ್ಷ**

### ಮುಡಾ ವಿಧೇಯಕ

ಹಾಲಿ ಇರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ರದ್ದುಪಡಿಸಿ ಬಿಡಿಎ ರೀತಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಲು ಬೆಳಗಾವಿ ಅಧಿವೇಶನದಲ್ಲಿ ಅಂಗೀಕೃತಗೊಂಡ ಮುಡಾ ತಿದ್ದುಪಡಿ ಮಸೂದೆಗೂ ರಾಜ್ಯಪಾಲರು ಸ್ಪಷ್ಟನೆ ಕೋರಿದ್ದಾರೆ. ಮುಡಾ ಬಗ್ಗೆ ತನಿಖೆ ನಡೆಯುತ್ತಿದೆ. ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಈ ಹಂತದಲ್ಲಿ ವಿಧೇಯಕ ಜಾರಿಗೆ ತರುವುದು ನೈತಿಕವಾಗಿ ಸಮಂಜಸವೇ... ಎಂದು ರಾಜ್ಯಪಾಲರು ಪ್ರಶ್ನಿಸಿದ್ದಾರೆ ಎಂದು ಗೊತ್ತಾಗಿದೆ. ಜತೆಗೆ ಸಹಕಾರ ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗೆ ಸಂಬಂಧಿಸಿದ ಮಸೂದೆಗೂ ಸ್ಪಷ್ಟನೆ ಕೋರಿದ್ದಾರೆ.

### ಯಾವ ಮಸೂದೆಗಳು ವಾಪಸ್...

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿ.ವಿ. ತಿದ್ದುಪಡಿ ಮಸೂದೆ
- ಬಿಡಿಎ ಮಾದರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆ ತಿದ್ದುಪಡಿ ಮಸೂದೆ
- ಸಹಕಾರ ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ರಕ್ಷಣೆ ವಿಧೇಯಕಕ್ಕೆ ಸ್ಪಷ್ಟನೆ ಕೋರಿಕೆ

1 ಸುಗ್ರೀವಾಜ್ಞೆಯಲ್ಲಿ ಸಾಲ ಪಡೆದವರ ರಕ್ಷಣೆಗೆ ಮಾತ್ರವೇ ಗಮನ ಹರಿಸಲಾಗಿದೆ.

2 ರಾಜ್ಯಪಾಲರ ನಡೆ ವಿರುದ್ಧ ಕಾನೂನು ಕ್ರಮದ ಮೊರೆ ಹೋಗಲು ರಾಜ್ಯ ಸರ್ಕಾರದ ಚಿಂತನೆ

3 ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಘರ್ಷಣೆ

### ಅನಂತ ಸಮಸ್ಯೆಗಳೇ ಸಿ.ಎಂ.ಗೆ ಹೊರೆ

'ರಾಜ್ಯದ ಆಡಳಿತ ಅಭಿವೃದ್ಧಿ ಕಾರ್ಯಗಳು ಮತ್ತು ಅನಂತ ಸಮಸ್ಯೆಗಳು ಮುಖ್ಯಮಂತ್ರಿಗೆ ಈಗಾಗಲೇ ಹೊರೆಯಾಗಿ ಕುಳಿತಿವೆ' ಎಂದು ಪತ್ರದಲ್ಲಿ ಉಲ್ಲೇಖಿಸಿರುವ ರಾಜ್ಯಪಾಲರು ತಿದ್ದುಪಡಿ ಮಸೂದೆ ಮುಖ್ಯಮಂತ್ರಿಯವರ ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹೀಗಿರುವಾಗ ಮಸೂದೆಯ ಉದ್ದೇಶವನ್ನು ಈಡೇರಿಸಲು ಅವರಿಂದ ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

### ಬೆಂಕಿಯ ಜೊತೆ ಸರಸವಾಡಬೇಡಿ

ಈ ಹಿಂದೆ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳು ಮಾತ್ರ ಅಲ್ಲಿನ ಸರ್ಕಾರ ಹಾಗೂ ರಾಜಭವನದ ನಡುವೆ ಕಿತ್ತಾಟ ನಡೆಯುತ್ತಲೇ ಇತ್ತು. ಅದರಲ್ಲೂ ಹಾಲಿ ಉಪರಾಷ್ಟ್ರಪತಿಯೂ ಆಗಿರುವ ಜಗದೀಶ್ ಧನ್ಕರ್, ತಮಿಳುನಾಡಿನ ರವಿ, ಕೇರಳದ ಆರೀಫ್ ಮೊಹಮ್ಮದ್ ಖಾನ್ ಸೇರಿದಂತೆ ಕೆಲವು ರಾಜ್ಯಪಾಲರಂತೂ ತಾವು ಕಾರ್ಯಾಂಗದ ಮುಖ್ಯಸ್ಥರೆಂಬುದನ್ನು ಮರೆತು ಪಕ್ಷದ ಮುಖವಾಣಿಯಂತೆ ವರ್ತನೆ ಮಾಡಿರುವ



ನಿದರ್ಶನವೂ ಇದೆ. ಅದರಲ್ಲೂ ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಸರ್ಕಾರ ಕಳುಹಿಸಿದ್ದ ಅನೇಕ ಮಸೂದೆಗಳನ್ನು ಸಹಿ ಹಾಕಲು ನಿರಾಕರಿಸಿ ಹಿಂತಿರುಗಿಸಿದ್ದರು. ಕೊನೆಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸರ್ಕಾರ ಸುಪ್ರೀಂಕೋರ್ಟ್ ಕದ ತಟ್ಟಿತ್ತು. ವಾದ ಆಲಿಸಿದ್ದ ನ್ಯಾಯಾಲಯ ಬೆಂಕಿಯ ಜೊತೆ ಸರಸವಾಡಬೇಡಿ ಎಂದು ರಾಜ್ಯಪಾಲರಿಗೆ ಪರೋಕ್ಷವಾಗಿ ಸಾಲಿಸಿಟರ್ ಜನರಲ್ ಮೂಲಕ ಎಚ್ಚರಿಕೆಯನ್ನು ಕೊಟ್ಟಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ರಾಜ್ಯಪಾಲರು ಇತರರಿಗೆ ಮಾದರಿಯಾಗುವಂತಹ ಆಡಳಿತ ನಡೆಸಿರುವ ನಿದರ್ಶನಗಳು ಸಾಕಷ್ಟಿವೆ.

## ಲಂಚ ಪಡೆದ ಮಹಿಳಾ ಇನ್ಸ್‌ಪೆಕ್ಟರ್ ಲೋಕಾಯುಕ್ತ ಬಲೆಗೆ

• ಉದಯವಾಹಿನಿ, ಬೆಂಗಳೂರು

ಜಾತಿ ಪ್ರಮಾಣ ಪತ್ರದ ನೈಜತೆ ಪರಿಶೀಲಿಸಲು ಫೋನ್ ಪೇ ಮೂಲಕ ಲಂಚ ಪಡೆದ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಸೇರಿ ಇಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ(ಡಿಸಿಆರ್‌ಇ) ಇನ್ಸ್‌ಪೆಕ್ಟರ್ ಗೀತಾ ಮತ್ತು ಖಾಸಗಿ ವ್ಯಕ್ತಿ ರಿಚರ್ಡ್ ಬಂಧಿತ ಆರೋಪಿಗಳು.





**ಜಾತಿ ಪ್ರಮಾಣ ಪತ್ರಕ್ಕೆ ಮನವಿ**

ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಮನೆಯ ಹಕ್ಕು ಪಡೆಯಲು ಜಾತಿ ಪ್ರಮಾಣ ಪತ್ರ ಸಲ್ಲಿಸಬೇಕಿದ್ದ ಹಿನ್ನೆಲೆಯಲ್ಲಿ ದಾಖಲೆ ನೀಡುವಂತೆ ದೂರುದಾರ ಲೋಕೇಶ್ ಮನವಿ ಸಲ್ಲಿಸಿದ್ದರು. ಇದಕ್ಕಾಗಿ 25 ಸಾವಿರ ರೂ. ನೀಡುವಂತೆ ಆರೋಪಿಗಳು ಕೇಳಿದ್ದರು. ಫೋನ್ ಪೇ ಮೂಲಕ 10 ಸಾವಿರ ರೂ. ಹಾಕಿಸಿಕೊಂಡಿದ್ದರು. ದೂರುದಾರ ಲೋಕೇಶ್ ಈ ಕುರಿತಾಗಿ ಲೋಕಾಯುಕ್ತಕ್ಕೆ ದೂರು ನೀಡಿದ್ದು, ಕಾರ್ಯಾಚರಣೆ ನಡೆಸಿ ಲಂಚ ಪಡೆದಿದ್ದ ಇಬ್ಬರನ್ನು ಬಂಧಿಸಲಾಗಿದೆ.

## ಅಪಾಯ ಭತ್ಯೆ ನೀಡಲು ಸರ್ಕಾರ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಅರಣ್ಯ ಇಲಾಖೆ ಸಿಬ್ಬಂದಿಗೆ ಅಪಾಯ ಭತ್ಯೆ ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಅರಣ್ಯ ಭವನದಲ್ಲಿ ಅರಣ್ಯ ಪಡೆಯ ಮುಖ್ಯಸ್ಥ ಮೀನಾಕ್ಷಿ ನೇಗಿ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರನ್ನು ಅಭಿನಂದಿಸಿ ಸಚಿವರು ಮಾತನಾಡಿದರು.



ವನ್ಯಜೀವಿ ದಾಳಿ, ಕಳ್ಳ ಬೇಟೆಗಾರರ ದಾಳಿಯ ಭೀತಿಯ ನಡುವೆಯೂ ಅರಣ್ಯ, ವನ್ಯಜೀವಿ ಸಂರಕ್ಷಣೆಗೆ ಶ್ರಮಿಸುತ್ತಿರುವ ಸಿಬ್ಬಂದಿಗೆ ಅಪಾಯ ಭತ್ಯೆ ನೀಡಲಾಗುವುದು ಎಂದು ಹೇಳಿದ್ದಾರೆ. ಅರಣ್ಯ ಸಿಬ್ಬಂದಿಯ ಬಹುದಿನಗಳ ಬೇಡಿಕೆಯಾಗಿರುವ ಪೊಲೀಸ್ ಕ್ಯಾಂಟೀನ್ ಮಾದರಿ ಕ್ಯಾಂಟೀನ್ ವ್ಯವಸ್ಥೆ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ರಾಜ್ಯ ಸರ್ಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಆದೇಶ...!

• ಉದಯವಾಹಿನಿ, ಬೆಂಗಳೂರು

ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಏರ್ಪಡಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ.

2024-25ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2023-24 ಹಾಗೂ 2024-25ನೇ ಸಾಲಿನ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಸರ್ಕಾರದಿಂದ ಬಿಡುಗಡೆಯಾದ ರೂ.200.00 ಲಕ್ಷಗಳನ್ನು ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಈಗಾಗಲೇ ಬಿಡುಗಡೆ 17-08-2025 80 19-08-2025 0 2023-24 2024-25 ನೇ ಸಾಲಿನ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಬೆಂಗಳೂರಿನಲ್ಲಿ ಜರುಗಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 03-02-2025ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ 2024-25ನೇ ಸಾಲಿನ ಸರ್ಕಾರಿ ನೌಕರರ ಕ್ರೀಡಾಕೂಟವನ್ನು



**ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆ**

ಜಿಲ್ಲಾ ಮಟ್ಟದಲ್ಲಿ ಆಯೋಜಿಸುವ ಸಂಬಂಧ ರಾಜಾಧಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಹಾಗೂ ಸಂಘದ ಪದಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಗಿದ್ದು ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಸಂಘಟಿಸುವಂತೆ ಮನವಿ ಮಾಡಿರುತ್ತಾರೆ. ' 2024-25 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವಲಯದಲ್ಲಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಕೆಲವು ಜಿಲ್ಲೆಗಳಲ್ಲಿ ಅನುದಾನವನ್ನು ಮೀಸಲಿಟ್ಟಿರುವುದನ್ನು ಕೆಲವು ಸಹಾಯಕ ನಿರ್ದೇಶಕರು ಆಯುಕ್ತಾಲಯದ ಗಮನಕ್ಕೆ ತಂದಿರುತ್ತಾರೆ. ಈ ಹಿನ್ನಲೆಯಲ್ಲಿ ಎಲ್ಲಾ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರುಗಳು ಜಿಲ್ಲಾ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗಳೊಂದಿಗೆ ಸದರಿ ವಿಷಯದ ಕುರಿತು ಚರ್ಚಿಸಿದರು.

# ನರೇಂದ್ರ ಮೋದಿ ಅವರ ಪ್ರಧಾನ ಕಾರ್ಯದರ್ಶಿ-2 ಆಗಿ ಶಕ್ತಿಕಾಂತ್ ದಾಸ್ ನೇಮಕ

♥ ಆರ್‌ಬಿಐನ ಮಾಜಿ ಗವರ್ನರ್‌ಗೆ ಮತ್ತೊಂದು ಪ್ರಮುಖ ಜವಾಬ್ದಾರಿ ನೀಡಿದ ಕೇಂದ್ರ ಸರ್ಕಾರ ♥ ಪ್ರಧಾನಿ ಅವಧಿಯೊಂದಿಗೆ ಇವರ ಅವಧಿಯೂ ಅಂತ್ಯ

• ಉದಯವಾಹಿನಿ, ನವದೆಹಲಿ

ಇತ್ತೀಚೆಗಷ್ಟೇ ಆರ್‌ಬಿಐ ಗವರ್ನರ್ ಸ್ಥಾನದಿಂದ ಕೆಳಗಿಳಿದಿದ್ದ ಶಕ್ತಿಕಾಂತ ದಾಸ್ ಅವರಿಗೆ ಕೇಂದ್ರ ಸರ್ಕಾರ ಪ್ರಮುಖ ಹುದ್ದೆ ನೀಡಿದೆ. ಅವರನ್ನು ಶನಿವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಎರಡನೇ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ದಾಸ್ ನೇಮ ಕಕ್ಕೆ ಕ್ಯಾಬಿನೆಟ್ ನೇಮಕಾತಿ ಸಮಿತಿಯೂ ಅನುಮೋದನೆ ನೀಡಿದೆ.

ಗುಜರಾತ್ ಕೇಡರ್‌ನ ನಿವೃತ್ತ ಐಎಎಸ್ ಅಧಿಕಾರಿ ಪಿ.ಕೆ. ಮಿಶ್ರಾ ಅವರು ಪ್ರಸ್ತುತ ಪ್ರಧಾನಮಂತ್ರಿಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಇದೀಗ ತಮಿಳುನಾಡು ಕೇಡರ್‌ನ ನಿವೃತ್ತ ಐಎಎಸ್ ಅಧಿಕಾರಿ ಶಕ್ತಿಕಾಂತ್ ದಾಸ್ ಅವರನ್ನು ಎರಡನೇ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಪ್ರಧಾನಮಂತ್ರಿಯ ಅವಧಿಯೊಂದಿಗೆ ಇವರ ಅವಧಿ ಅಂತ್ಯವಾಗಲಿದೆ ಅಥವಾ ಮುಂದಿನ ಆದೇಶದವರೆಗೆ ಇವರು ಈ ಹುದ್ದೆಯಲ್ಲಿ ಇರಲಿದ್ದಾರೆ.

ಈ ಸಂಬಂಧ ಶನಿವಾರ ಹೊರಡಿಸಲಾದ ಆದೇಶದಲ್ಲಿ, ಕ್ಯಾಬಿನೆಟ್ ನೇಮಕಾತಿ ಸಮಿತಿಯು ಶಕ್ತಿಕಾಂತ ದಾಸ್, ಐಎಎಸ್ (ನಿವೃತ್ತ) ಅವರನ್ನು ಪ್ರಧಾನಮಂತ್ರಿಗಳ ಪ್ರಧಾನ ಕಾರ್ಯದರ್ಶಿ-2 ಆಗಿ ನೇಮಕ ಮಾಡಲು ಅನುಮೋದನೆ ನೀಡಿದ್ದು, ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಇದು ಅನ್ವಯವಾಗಲಿದೆ. ಪ್ರಧಾನಮಂತ್ರಿಯ ಅವಧಿಯೊಂದಿಗೆ ಅವರ ಅವಧಿಯೂ ಅಂತ್ಯವಾಗುತ್ತದೆ ಅಥವಾ ಮುಂದಿನ ಆದೇಶಗಳವರೆಗೆ ಅವರು ಹುದ್ದೆಯಲ್ಲಿರುತ್ತಾರೆ. ಇದರಲ್ಲಿ ಯಾವುದು ಮೊದಲು ಸಂಭವಿಸುತ್ತದೆ ಎಂಬುದರ ಮೇಲೆ ಅವರ ಅವಧಿ ಅವಲಂಬಿಸಿರುತ್ತದೆ, ಎಂದು ಹೇಳಲಾಗಿದೆ.





**ಕ್ಯಾಬಿನೆಟ್ ನೇಮಕಾತಿ ಸಮಿತಿಯೂ ಅನುಮೋದನೆ**

### ಶಕ್ತಿಕಾಂತ್ ದಾಸ್‌ಗೆ ಮತ್ತೆ ಪ್ರಮುಖ ಹುದ್ದೆ

2018ರಿಂದ 2024ರವರೆಗೆ ಶಕ್ತಿಕಾಂತ್ ದಾಸ್ ಅವರು ಆರು ವರ್ಷಗಳ ಕಾಲ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ಆಗಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಕೋವಿಡ್ ಮುಂತಾದ ಸಂಕಷ್ಟದ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅನ್ನು ಯಶಸ್ವಿಯಾಗಿ ನಿಭಾಯಿಸಿದ್ದರು. ಆಡಳಿತದಲ್ಲಿ ಸುಮಾರು ನಾಲ್ಕು ದಶಕಗಳ ಅಗಾಧ ಅನುಭವವನ್ನು ಶಕ್ತಿಕಾಂತ್ ದಾಸ್ ಹೊಂದಿದ್ದು, ಇದಕ್ಕೂ ಮೊದಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಹಲವು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಹಣಕಾಸು, ತೆರಿಗೆ, ಕೈಗಾರಿಕೆಗಳು, ಮೂಲಸೌಕರ್ಯ ಇಲಾಖೆಗಳಲ್ಲಿ ಕೆಲಸ ಮಾಡಿದ್ದು, ಈ ವಿಷಯಗಳಲ್ಲಿ ಅಪಾರ ಜ್ಞಾನ ಹೊಂದಿದ್ದಾರೆ. ಕೆಲ ಸಮಯದ ಹಿಂದೆ ಆರ್‌ಬಿಐ ಗವರ್ನರ್ ಆಗಿ ಮೂರನೇ ಅವಧಿಗೆ ಮುಂದುವರಿಸದೇ ಅವರ ಜಾಗಕ್ಕೆ ಸಂಜಯ್ ಮಲ್ಹೋತ್ರಾ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿತ್ತು. ಇದೀಗ ಅದೇ ಶಕ್ತಿಕಾಂತ್ ದಾಸ್ ಅವರಿಗೆ ಪ್ರಧಾನಿ ಕಾರ್ಯಾಲಯದಲ್ಲಿ ಪ್ರಮುಖ ಜವಾಬ್ದಾರಿ ನೀಡಿದ್ದು, ಹಿರಿಯ ಅಧಿಕಾರಿಯ ಅನುಭವ ಪಡೆದುಕೊಳ್ಳಲು ಮುಂದಾಗಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,777 /Gram24ct ₹8,045/Gram22ct | ಬೆಳ್ಳಿ: ₹100.40/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಈಶ್ವರಃ ಸರ್ವಭೂತಾನಾಂ

ಹೃದ್ದೇಶೇರ್ಜುನ ತಿಷ್ಠತಿ.
ಭ್ರಾಮಯನ್ ಸರ್ವಭೂತಾನಿ
ಯಂತ್ರಾರೂಢಾನಿ ಮಾಯಯಾ.

ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದ ಅರವತ್ತೊಂದನೆಯ ಶ್ಲೋಕ. ಕೃಷ್ಣ ಅರ್ಜುನನಿಗೆ ಹೇಳಿದ ಮಾತು. ಎಲ್ಲೆಡೆ ವ್ಯಾಪಿಸಿರುವ ಏಕ ಪರಮಾತ್ಮನು ಎಲ್ಲಾ ಜೀವರಾಶಿಗಳ ಹೃದಯದಲ್ಲಿ ನೆಲೆಸಿದ್ದಾನೆ. ಹಣತೆ ಬಂಗಾರದ್ದಿರಲಿ ಬೆಳ್ಳಿಯದ್ದಿರಲಿ ಕಂಚು ತಾಮ್ರ ಮಣ್ಣು ಮಂತೊಂದರದಿರಲಿ ಹಣತೆ ಒಂದೋ ಲಕ್ಷವೋ ಆ ಹಣತೆಯ ದೀಪ ಬೆಳಕು ಮಾತ್ರ ಒಂದೇ, ಬೇರೆಯಲ್ಲ. ಹಾಗೆ ಜೀವರಾಶಿಗಳು ಬಗೆ ಬಗೆಯಾದರೂ ಅವುಗಳಲ್ಲಡಗಿದ ಪರಮಾತ್ಮ ಒಬ್ಬನೇ. ಯಂತ್ರದಲ್ಲಿನ ಗೊಂಬೆಗಳನ್ನೆಲ್ಲಾ ಯಂತ್ರವು ಕುಣಿಸುವಂತೆ ಆಡಿಸುವಂತೆ, ಅಂತರ್ಗತ ಜೀವ ಪರಮಾತ್ಮನು ಎಲ್ಲಾ ಜೀವರಾಶಿಗಳನ್ನು ಆಡಿಸುತ್ತಾನೆ ಕುಣಿಸುತ್ತಾನೆ ಸುತ್ತಿಸುತ್ತಾನೆ. ಅಲ್ಲಿಯವರೆಗೆ ನಮ್ಮಾಟ. ಆಟ ಮುಗಿದರೆ ಇನ್ನಿಲ್ಲ ನಾವು ನಮ್ಮಾಟ. ಆಟ ಮುಗಿಯುವುದರೊಳಗಾಗಿ ಇದು ಆಟ ಎಂದು ಅರಿತರೆ ಜೀವನಾನಂದ. ಇದೇ ನಿಜ ಎಂದಿದ್ದರೆ ಏನು ಎಷ್ಟಿದ್ದರೂ ಸಾಲದು, ಜೀವನ ದುಃಖ.

## ಮೆಟ್ರೋ ದರ ದುಬಾರಿ: ದೂರ ಉಳಿದ ಲಕ್ಷಾಂತರ ಪ್ರಯಾಣಿಕರು



• ಉದಯವಾಹಿನಿ, ಬೆಂಗಳೂರು,

ರಾಜಧಾನಿ ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ಏರಿಕೆಯಿಂದಾಗಿ ಪ್ರಯಾಣಿಕರು ತತ್ತರಿಸಿ ಹೋಗಿದ್ದು, ಇದೀಗ ಬೆಲೆ ಏರಿಕೆಯಿಂದಾಗಿ ಬರೋಬ್ಬರಿ 6.26 ಲಕ್ಷ ಜನ ಮೆಟ್ರೋದಿಂದ ದೂರು ಉಳಿದಿದ್ದಾರೆ.ಇದೀಗ ಮೆಟ್ರೋ ಪ್ರಯಾಣದ ಅಂಕಿ ಅಂಶವನ್ನು ಬಿಡುಗಡೆ ಮಾಡಿದ್ದು, ಫೆ.10 ರಿಂದ ಫೆ.14ರ ವರೆಗೆ ಪ್ರಯಾಣಿಕರ ಸಂಖ್ಯೆ 7.72 ಲಕ್ಷಕ್ಕೆ ಕುಸಿದಿದೆ. ಬೆಲೆ ಏರಿಕೆಯಿಂದ ಕಂಗೆಟ್ಟ 6.26 ಲಕ್ಷ ಮಂದಿ ಸ್ವಂತ ವಾಹನ, ಅಥವಾ ಇತರ ವಾಹನವನ್ನು ಅವಲಂಬಿಸಿದ್ದಾರೆ. ಫೆಬ್ರವರಿ 9ರಿಂದ ಜಾರಿಗೆ ಬರುವಂತೆ ಬಿಎಂಆರ್ ಸಿಎಲ್ ನಮ್ಮ ಮೆಟ್ರೋ ಪ್ರಯಾಣದರವನ್ನು ಏರಿಕೆ ಮಾಡಲಾಗಿತ್ತು. ದುಪ್ಪಟ್ಟು ಪ್ರಯಾಣ ದರ ಹೆಚ್ಚಳದ ವಿರುದ್ಧ ಪ್ರಯಾಣಿಕರು ಆಕ್ರೋಶ ಹೊರಹಾಕಿದ್ದರು. ಅಲ್ಲದೇ ಮೆಟ್ರೋ ಪ್ರಯಾಣವನ್ನು ಬಾಯ್ ಕಾಟ್ ಮಾಡುವುದಾಗಿ ಘೋಷಿಸಿದ್ದರು. ಈ ಬೆನ್ನಲ್ಲೇ ಕೆಲ ಸ್ಟೇಜ್ ಗಳಲ್ಲಿ ವ್ಯತ್ಯಾಸವಾಗಿದ್ದಂತ ದರವನ್ನು ಬಿಎಂಆರ್ ಸಿಎಲ್ ಸರಿ ಪಡಿಸಿತ್ತು. ಆದರೂ ಶೇ.47ರಷ್ಟು ಪ್ರಯಾಣ ದರ ಹೆಚ್ಚಳ ಹಾಗೆಯೇ ಮುಂದುವರಿದಿತ್ತು. ಈ ಹಿನ್ನಲೆಯಲ್ಲಿ ಸುಮಾರು 6.26 ಲಕ್ಷ ಪ್ರಯಾಣಿಕರು ಮೆಟ್ರೋವನ್ನು ತ್ಯಜಿಸಿದ್ದಾರೆ.

## ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕುಮಾರ್ ಬಂಗಾರಪ್ಪ ಡಿಮ್ಯಾಂಡ್

• ಉದಯವಾಹಿನಿ, ಬೆಂಗಳೂರು,

ತಮ್ಮ ಮನೆಯಲ್ಲಿ ಭಿನ್ನರ ಮೀಟಿಂಗ್ ನಡೆದಿರುವುದಕ್ಕೆ ಸಂಬಂಧಿಸಿದಂತೆ ಸುದ್ದಿಗೋಷ್ಠಿ ನಡೆಸಿ ಮಾತಾಡಿದ ಮಾಜಿ ಶಾಸಕ ಕುಮಾರ ಬಂಗಾರಪ್ಪ ಹಲವಾರು ವಿಷಯಗಳನ್ನು ಹೇಳಿದರು. ರಮೇಶ್ ಜಾರಕಿಹೊಳಿಯನ್ನು ವಿಜಯೇಂದ್ರ ಬಣದಿಂದ ಸೆಳೆಯುವ ಪ್ರಯತ್ನ ನಡೆದಿದೆ ಅನ್ನೋದು ಸುಳ್ಳು, ಯಡಿಯೂರಪ್ಪ ತನ್ನೊಂದಿಗೆ ಮಾತಾಡಿದ್ದಾರೆನ್ನುವುದು ಸುಳ್ಳು ಮತ್ತು ನಿನ್ನೆ ಬಸನಗೌಡ ಪಾಟೀಲ್ ಯತ್ನಾಳ್ ಅವರು ತಮಗೆ ನೀಡಿದ ನೋಟೀಸನ್ನು ಮೈಸೂರು ಚಾಮುಂಡೇಶ್ವರಿ ಸನ್ನಿಧಿಯಲ್ಲಿಟ್ಟು ಪೂಜೆ ಮಾಡಿಸಿದರು ಅಂತ ವರದಿಯಾಗಿದ್ದು ಸಹ ಸುಳ್ಳು, ಅಸಲಿಗೆ ಅವರು ತಮ್ಮ ಸಕ್ಕರೆ ಕಾರ್ಖಾನೆಯ ಪುನರಾರಂಭಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ದೇವಸ್ಥಾನಕ್ಕೆ ಒಯ್ದು ಪೂಜೆ ಮಾಡಿಸಿದರು, ಎಲ್ಲರೂ ಹೋದರೆ ಕತೆ ಕಟ್ಟುತ್ತಾರೆ ಅಂತ ಅವರೊಬ್ಬರೇ ಹೋಗಿದ್ದು, ಪರಿಸರ ಮಂಡಳಿಗೆ ಅಧ್ಯಕ್ಷರಾಗಿ ಬಂದಿರುವ ಪಿಎಂ ನರೇಂದ್ರ ಸ್ವಾಮಿಯವರಿಂದ ಯತ್ನಾಳ್ ಅವರಿಗೆ ನೆರವಾಗಿದೆ ಎಂದು ಕುಮಾರ್ ಬಂಗಾರಪ್ಪ ಹೇಳಿದರು.

## ಬಾಡಿಗೆದಾರರ ಬಳಿಯೇ ಹಣ ಪಡೆದು ನಾಪತ್ತೆ ಸಿಸಿಬಿಯಿಂದ ಓರ್ವ ಅರೆಸ್ಟ್, ಓರ್ವ ಪರಾರಿ

• ಉದಯವಾಹಿನಿ, ಬೆಂಗಳೂರು,

ಸಿಲಿಕಾನ್ ಸಿಟಿಯಲ್ಲಿ ಮನೆ ಬಾಡಿಗೆ ಮತ್ತು ಲೀಸ್ ಪಡೆಯಲು ಹುಡುಕಾಡುತ್ತಿದ್ದೀರಾ ಹಾಗಾದರೆ ಬಹಳಷ್ಟು ಎಚ್ಚರವಾಗಿರಿ. ಮನೆ ಮಾಲೀಕನ ಬಳಿ ಬಾಡಿಗೆ ಎಂದು ಹೇಳಿ ಬಾಡಿಗೆದಾರರ ಬಳಿ ಲೀಸ್‌ಗೆ ಹಣ ಪಡೆದು ವಂಚನೆ ಎಸಗಿದ ಪ್ರಕರಣಗಳು ಈಗ ಬೆಳಕಿಗೆ ಬಂದಿದೆ. ಕೋಟ್ಯಂತರ ರೂ. ವಂಚನೆ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಒಬ್ಬನನ್ನು ಬಂಧಿಸಿದ್ದು ಮತ್ತೊಬ್ಬ ಪರಾರಿಯಾಗಿದ್ದಾನೆ. ಆರೋಪಿಯಾದ ಖಲೀಲ್ ಷರೀಫ್ ಬಂಧನವಾಗಿದ್ದರೆ ಸೈಯದ್ ಅಹಮದ್ ಪರಾರಿಯಾಗಿದ್ದಾನೆ. ಮಾಧ್ಯಮಗಳಲ್ಲಿ ಈ ಸುದ್ದಿ ಪ್ರಕಟವಾದ ಬೆನ್ನಲ್ಲೇ ಸುಮಾರು 50ಕ್ಕೂ ಹೆಚ್ಚು ಮಂದಿ ಈಗ ಸಿಸಿಬಿ ಆಗಮಿಸಿ ತಮಗೂ ವಂಚನೆಯಾಗಿದೆ ಎಂದು ದೂರು ನೀಡುತ್ತಿದ್ದಾರೆ. **ವಂಚನೆ ಹೇಗೆ:** ಬೆಂಗಳೂರಿಗೆ ಬೇರೆ ಬೇರೆ ಕಡೆಯಿಂದ ಬರುವವರು ಸೇರಿದಂತೆ ಜನ ಮನೆ ಬಾಡಿಗೆ ಮತ್ತು ಲೀಸ್‌ಗೆ ಮನೆ ಬೇಕಾಗಿದೆ ಎಂದು ಒಎಲ್‌ಎಕ್ಸ್, ನೋ ಬ್ರೋಕರ್ ಸೇರಿದಂತೆ ಹಲವು ಆಪ್‌ಗಳಲ್ಲಿ ಹುಡುಕಾಟ ನಡೆಸುವುದು ಸಾಮಾನ್ಯ. ಈ ರೀತಿ ಹುಡುಕಾಟ ನಡೆಸುವವರನ್ನೇ ಖಲೀಲ್ ಷರೀಫ್ ಮತ್ತು ಸೈಯದ್ ಅಹಮದ್ ಸಂಪರ್ಕಿಸುತ್ತಿದ್ದರು. ತಮ್ಮ ಅಕ್ರಮ ವ್ಯವಹಾರಕ್ಕೆ ಟ್ಯಾಂಜನೈಟ್ ರಿಯಾಲಿಟಿ ಇಂಡಿಯ ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನು ಸಹ ಸ್ಥಾಪಿಸಿದ್ದರು. ಜನರನ್ನು ಸಂಪರ್ಕಿಸುತ್ತಿದ್ದ ಇವರು ಮನೆ ಬಾಡಿಗೆ ಬೇಕಾ ಲೀಸ್‌ಗೆ ಬೇಕಾ ನೀವು ಕೇಳಿದ ಜಾಗದಲ್ಲೇ ಕಡಿಮೆ ಬೆಲೆಗೆ ಮನೆ ಕೊಡಿಸುತ್ತೇವೆ ಎಂದು ಹೇಳಿ ನಂಬಿಸುತ್ತಿದ್ದರು. ಮನೆಯನ್ನು ತೋರಿಸುತ್ತಿದ್ದ ಈ ವಂಚಕರು ಮೂಲ ಮನೆ ಮಾಲೀಕರ ಬಳಿ ಬಾಡಿಗೆಗೆ ಎಂದು ಮಾತಾಡುತ್ತಿದ್ದರು. ಆದರೆ ಬಾಡಿಗೆದಾರರ ಬಳಿ, ಈ ಮನೆ ನಮ್ಮದು ನಾವು ಲೀಸ್‌ಗೆ ಬಿಡುತ್ತಿದ್ದೇವೆ ಎಂದು ಹೇಳಿ 5 ಲಕ್ಷದಿಂದ 30 ಲಕ್ಷ ರೂ.ವರೆಗೆ ಹಣ ಪಡೆದು ನಕಲಿ ದಾಖಲೆ ನೀಡುತ್ತಿದ್ದರು. ಒಂದು ತಿಂಗಳು, ಎರಡು ತಿಂಗಳು ಬಾಡಿಗೆ ಹಣ ಬಾರದೇ ಇದ್ದಾಗ ಮೂಲ ಮಾಲೀಕ ಬಾಡಿಗೆ ಹಣಕ್ಕಾಗಿ ಮನೆ ಹತ್ತಿರ ಬರುತ್ತಿದ್ದ. ಮಾಲೀಕ ಮನೆ ಹತ್ತಿರ ಬಂದಾಗಲೇ ಬಾಡಿಗೆಯಲ್ಲಿದ್ದ ಕುಟುಂಬಕ್ಕೆ ನಾವು ಮೋಸ ಹೋಗಿರುವ ವಿಚಾರ ಗೊತ್ತಾಗುತ್ತದೆ. ಈ ವೇಳೆ ಮಧ್ಯವರ್ತಿಗಳಾದ ಖಲೀಲ್ ಷರೀಫ್ ಮತ್ತು ಸೈಯದ್ ಅಹಮದ್ ಅವರನ್ನು ಸಂಪರ್ಕಿಸಿದರೆ ಅವರಿಂದ ಯಾವುದೇ ಪ್ರತಿಕ್ರಿಯೆ ಬರುತ್ತಿರಲಿಲ್ಲ.

ಇವರಿಬ್ಬರೂ ರಾಮಮೂರ್ತಿ ನಗರ, ರಾಜಾನುಗುಂಟೆ, ದೇವನಹಳ್ಳಿ, ಕೊತ್ತನೂರು, ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಐವತ್ತಕ್ಕೂ ಹೆಚ್ಚು ಜನರಿಗೆ ಕೋಟ್ಯಂತರ ರೂ. ವಂಚನೆ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಹಲವು ಕಡೆ ಪ್ರಕರಣ ದಾಖಲಾಗುತ್ತಿದ್ದಂತೆ ಈಗ ಈ ಎಲ್ಲಾ ದೂರುಗಳು ಸಿಸಿಬಿಗೆ ವರ್ಗಾವಣೆಯಾಗಿದೆ.

# ರಾಜ್ಯ ಸರ್ಕಾರ, ನಿಗಮ-ಮಂಡಳಿ ಮುಖ್ಯಸ್ಥರಿಗೆ ನೋಟೀಸ್ ಜಾರಿ ಮಾಡಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು,

ರಾಜ್ಯ ಸರ್ಕಾರ, ವಿವಿಧ ನಿಗಮ-ಮಂಡಳಿಗಳು, ರಾಜಕೀಯ ಕಾರ್ಯದರ್ಶಿಗಳು ಮತ್ತು ಸಲಹೆಗಾರರ ನೇಮಕಾತಿಯಿಂದಾಗಿ 'ಲಾಭದಾಯಕ ಹುದ್ದೆ' ಹೊಂದಿರುವ ಎಲ್ಲಾ ಸಂಸ್ಥೆಗಳಿಂದ ಪ್ರತಿಕ್ರಿಯೆ ಕೇಳಿ ಹೈಕೋರ್ಟ್ ನೋಟೀಸ್ ಜಾರಿ ಮಾಡಿದೆ. ಸಂವಿಧಾನದ ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಮತ್ತು ಪ್ರಜಾಸತ್ತಾತ್ಮಕ ಮಹತ್ವ ಎರಡರಲ್ಲೂ ಈ ವಿಷಯವು ಮಹತ್ವದ್ದಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಎಂ.ಐ. ಅರುಣ್ ಅವರನ್ನೊಳಗೊಂಡ ವಿಭಾಗೀಯ ಪೀಠವು ರಾಜ್ಯ ಸರ್ಕಾರ ಮತ್ತು ಇತರ ಪ್ರತಿವಾದಿಗಳು ನೇಮಕಗೊಂಡ ನಿಗಮ-ಮಂಡಳಿಗಳ ಮುಖ್ಯಸ್ಥರು ಮತ್ತು ಸಲಹೆಗಾರರಿಗೆ ನೋಟಿಸ್ ಜಾರಿಗೊಳಿಸಿ, ಪ್ರತಿಕ್ರಿಯೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಅರ್ಜಿಯಲ್ಲಿರುವ ವಿಷಯಗಳು ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಮಹತ್ವವನ್ನು ಹೊಂದಿವೆ. ರಾಜ್ಯ ಸರ್ಕಾರ ಮತ್ತು ಇತರ ಪ್ರತಿವಾದಿಗಳಿಂದ ನಿರ್ದಿಷ್ಟ ಪ್ರತಿಕ್ರಿಯೆಯ ಅಗತ್ಯವಿರುತ್ತದೆ ಎಂದು ಹೇಳಿರುವ ಕೋರ್ಟ್ ಮಾರ್ಚ್ 18 ರ ಮೊದಲು ಉತ್ತರ ಸಲ್ಲಿಸುವಂತೆ ಸೂಚಿಸಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮುಖ್ಯ ಎಂಜಿನಿಯರ್ ಮಟ್ಟದ ಅಧಿಕಾರಿ ಸೂರಿ ಪಾಯಲ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಮಾರ್ಚ್ 27 ಕ್ಕೆ ಮುಂದೂಡಿತು. ಅರ್ಜಿದಾರರನ್ನು ಪ್ರತಿನಿಧಿಸುವ ಹಿರಿಯ ವಕೀಲ ಸಾಯಿ ದೀಪಕ್, ರಾಜ್ಯ ಸರ್ಕಾರವು ಜೂನ್ 1, 2023 ರಿಂದ ಜನವರಿ 26, 2024 ರ ನಡುವೆ 42 ಶಾಸಕರು ಮತ್ತು ಎಂಎಲ್‌ಸಿಗಳನ್ನು ನಿಗಮ ಮಂಡಳಿಗಳ ಮುಖ್ಯಸ್ಥ ಹುದ್ದೆಗಳಿಗೆ ನೇಮಕ ಮಾಡಿದೆ, ಅವರಿಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳ ಸೌಲಭ್ಯ ಮತ್ತು ಎಲ್ಲಾ ಆರ್ಥಿಕ ಪ್ರಯೋಜನಗಳನ್ನು ನೀಡಲಾಗಿದೆ. ಇದು ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ನೀಡಿದಂತಾಗುತ್ತದೆ, ಇದು ಸಂವಿಧಾನದ 164(1)(ಎ) ವಿಧಿಗೆ ವಿರುದ್ಧವಾಗಿದೆ, ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಸಚಿವರುಗಳ ಸಂಖ್ಯೆಯನ್ನು ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 15 ಕ್ಕೆ ಮಿತಿಗೊಳಿಸುತ್ತದೆ.



ಆದಾಗ್ಯೂ, 48 ನೇಮಕಾತಿಗಳು ವಿಧಾನಸಭೆಯ ಸದಸ್ಯರ ಶೇಕಡಾ 15 ಕ್ಕಿಂತ ಹೆಚ್ಚು. ಇದು ಸಾರ್ವಜನಿಕ ಖಜಾನೆಗೆ ಹೊರೆಯಾಗುವುದರಿಂದ ಇದು ಗಂಭೀರ ಸಾರ್ವಜನಿಕ ಸಮಸ್ಯೆಯಾಗಿದೆ ಎಂದು ಅವರು ವಾದಿಸಿದರು. ಉಮಾಪತಿ ಸ್ಟೇಟ್ ಆಫ್ ಕರ್ನಾಟಕ ಪ್ರಕರಣದಲ್ಲಿ ನ್ಯಾಯಾಲಯದ ಸಮನ್ವಯ ಪೀಠದ ಮುಂದೆ ಇದೇ ರೀತಿಯ ವಿಷಯ ಬಂದಿದೆ ಎಂದು ಅಡ್ವೊಕೇಟ್ ಜನರಲ್ (ಎಜಿ) ಕೆ. ಶಶಿಕಿರಣ್ ಶೆಟ್ಟಿ ವಾದಿಸಿದರು. 164 ಮತ್ತು 161 ನೇ ವಿಧಿಗಳ ಉಲ್ಲಂಘನೆಯನ್ನು ನಕಾರಾತ್ಮಕವಾಗಿ ಪರಿಗಣಿಸಲಾಗಿದೆ ಎಂಬುದಾಗಿ ಆಗ ವಾದಿಸಲಾಯಿತು. ಈ ನೇಮಕಾತಿಗಳು ಕರ್ನಾಟಕ ಶಾಸಕಾಂಗ (ಅನರ್ಹತೆ ತಡೆಗಟ್ಟುವಿಕೆ) ಕಾಯ್ದೆ, 1956 ರ ನಿಬಂಧನೆಗಳೊಂದಿಗೆ ಸಂವಿಧಾನದ 191 ನೇ ವಿಧಿಯ ನೇರ ಉಲ್ಲಂಘನೆಯಾಗಿದೆ ಎಂದು ಸಾಯಿ ದೀಪಕ್ ವಾದಿಸಿದರು.

# ಗ್ರೇಟರ್ ಬೆಂಗಳೂರು ಮೂಲಕ ಪಾಲಿಕೆ ವಿಭಜನೆಗೆ ಬಿಬಿಎಂಪಿ ಸಜ್ಜು

## ಬಿಬಿಎಂಪಿ ವಿಚಾರವಾಗಿ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಸಮಿತಿ ಮಾಡಿ ಅಭಿಪ್ರಾಯ

• ಉದಯವಾಹಿನಿ, ಬೆಂಗಳೂರು,

ಕಳೆದ ಬಾರಿಯ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಿಂತ ಮುನ್ನವೇ ಬಿಬಿಎಂಪಿ ಚುನಾವಣೆ ನಡೆಯಬೇಕಿತ್ತು. ಆದರೆ ಪಾಲಿಕೆ ಚುನಾವಣೆ ವಿವಾದ ವಿಚಾರ ಕೋರ್ಟ್‌ನಲ್ಲಿದೆ. ಸದ್ಯದ ಬೆಳವಣಿಗೆಗಳನ್ನ ಗಮನಿಸಿದರೆ, ಮುಂದಿನ ಎರಡು, ಮೂರು ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಘೋಷಣೆ ನಿರೀಕ್ಷೆ ಇದೆ. ಮೀಸಲಾತಿ, ಕ್ಷೇತ್ರ ಪುನರ್ ವಿಂಗಡಣೆ ಕೆಲಸ ಸೇರಿದಂತೆ ಹಲವು ವಿಚಾರಗಳಿಂದ ಬಿಬಿಎಂಪಿ ಚುನಾವಣೆಗೆ ಹಿನ್ನಡೆಯಾಗುತ್ತಿದೆ. ಗ್ರೇಟರ್ ಬೆಂಗಳೂರು ಯೋಜನೆಯಡಿ ಬೆಂಗಳೂರು ನಗರವನ್ನು 5 ಭಾಗಗಳಾಗಿ ವಿಂಗಡಿಸಲು ಸರ್ಕಾರ ಮುಂದಾಗಿದೆ. ಬಿಬಿಎಂಪಿ ವಿಚಾರವಾಗಿ ಶಾಸಕ ರಿಜ್ವಾನ್



ಅರ್ಷದ್ ನೇತೃತ್ವದಲ್ಲಿ ಸಮಿತಿ ಮಾಡಿ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ. ಸದ್ಯ ಬಿಬಿಎಂಪಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜಾಗಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ಕರೆ ಕೊಟ್ಟಿದ್ದಾರೆ. ಮಹಿಳೆಯರಿಗೆ ಶೇ 50 ಮೀಸಲಾತಿ ನೀಡಲಾಗುವ ವಿಚಾರ ಪ್ರಸ್ತಾಪಿಸಿದ್ದಾರೆ. ನಾವು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ನ್ಯಾಯಾಲಯಕ್ಕೆ ನಾವು ಅಫಿಡವಿಟ್ ಸಲ್ಲಿಕೆ ಮಾಡಿದ್ದೇವೆ ಎಂದಿದ್ದಾರೆ.



ಬಿಜೆಪಿ ತೀವ್ರ ವಿರೋಧ

ಈ ಮಧ್ಯೆ, ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯ ಸಾಧಕ ಬಾಧಕಗಳನ್ನು ಚರ್ಚಿಸಲು ಮಲ್ಲೇಶ್ವರಂನ ರಾಜ್ಯ ಬಿಜೆಪಿ ಕಚೇರಿಯಲ್ಲಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್ ಅಶೋಕ್ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಸಭೆಯಲ್ಲಿ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬೆಂಗಳೂರು ಡಾ.ಸಿ.ಎನ್ ಅಶ್ವಥ್ ನಾರಾಯಣ, ಶಾಸಕ ಮುನಿರತ್ನ ಸೇರಿದಂತೆ ಮಾಜಿ ಪಾಲಿಕೆ ಸದಸ್ಯರು ಭಾಗಿಯಾಗಿದ್ದರು.

ಈ ಮಸೂದೆ ವಿರೋಧಿಸಿ ಹೋರಾಟ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

### ಬಿಜೆಪಿ ವಿರೋಧಕ್ಕೆ ಕಾರಣವೇನು?

- ಈಗಿರುವ ವ್ಯಾಪ್ತಿಗಿಂತ ಬೆಂಗಳೂರಿನ ಗಾತ್ರ ಮತ್ತಷ್ಟು ಹಿಗ್ಗಿದಾಗ ನಿರ್ವಹಣೆ ಕಷ್ಟಸಾಧ್ಯ.
- ಅಧಿಕಾರದಲ್ಲಿರುವ ಕಾಂಗ್ರೆಸ್ ಎಲ್ಲಾ ಭಾಗದಲ್ಲೂ ಮೇಯರ್ ಗಾದಿ ಹಿಡಿಯಬಹುದೆಂಬ ಆತಂಕ.
- ತ್ಯಾಜ್ಯ ವಿಲೇವಾರಿ, ನೀರು ಪೂರೈಕೆ, ವಿದ್ಯುತ್ ಸರಬರಾಜು ಸೇವೆಗಳು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿವೆ.
- ಜನರಿಗೂ ಮೂಲಭೂತ ಸೌಕರ್ಯ ಒದಗಿಸುವುದು ಕಷ್ಟಸಾಧ್ಯ.
- ಕೆಂಪೇಗೌಡ ನಿರ್ಮಿಸಿದ ಮೂಲ ಬೆಂಗಳೂರಿನ ಇತಿಹಾಸಕ್ಕೆ ಧಕ್ಕೆ, ಅಪಮಾನ.
- ಆಡಳಿತ ವ್ಯವಸ್ಥೆ ಹಳಿ ತಪ್ಪುವ ಸಾಧ್ಯತೆ. ಅಭಿವೃದ್ಧಿ ಮತ್ತು ಆರ್ಥಿಕತೆ ಮೇಲೆ ಪ್ರಭಾವ.
- ಗ್ರೇಟರ್ ಬೆಂಗಳೂರು ಪ್ರಾಧಿಕಾರದಂತಹ ಪರಿಕಲ್ಪನೆಯು ದೇಶದ ಇತರ ಕಾಸ್ಮೋಪಾಲಿಟನ್ ನಗರಗಳಲ್ಲಿ ವಿಫಲವಾಗಿದೆ.

ಯಾವುದೇ ಕಾರಣಕ್ಕೂ ಬೆಂಗಳೂರು ವಿಭಜನೆ ಬೇಡ ಅಂತ ವಿಪಕ್ಷ ನಾಯಕರು ಆಗ್ರಹಿಸಿದ್ದಾರೆ. ಹಲವು ಕಾರಣಗಳಿಂದ ವಿಪಕ್ಷ ಬಿಜೆಪಿ ಗ್ರೇಟರ್ ಬೆಂಗಳೂರು ಯೋಜನೆಯನ್ನ ವಿರೋಧ ಮಾಡುತ್ತಿದೆ. ಗ್ರೇಟರ್ ಬೆಂಗಳೂರು ಮೂಲಕ ಬೆಂಗಳೂರು ನಗರವನ್ನ ವಿಭಜಿಸುವುದರ ಜೊತೆಗೆ ಬೆಂಗಳೂರಿನ ಆಸುಪಾಸಿನ ವಲಯಗೂ ಬೆಂಗಳೂರು ವ್ಯಾಪ್ತಿಗೆ ಬರಲಿದೆ. ಸದ್ಯ ಕಾಂಗ್ರೆಸ್ ಅಧಿಕಾರದಲ್ಲಿರುವ ಕಾರಣ, ಎಲ್ಲಾ ವಲಯಗಳಲ್ಲೂ ಅವರೇ ಗೆಲುವು ಸಾಧಿಸಬಹುದೆಂಬ ಕಾರಣದಿಂದ ಬಿಜೆಪಿ ವಿರೋಧ ಮಾಡುತ್ತಿದೆ ಎಂಬ ಮಾತು ಹೆಚ್ಚಾಗಿ ಚರ್ಚೆ ಆಗುತ್ತಿದೆ.

# ಅಡುಗೆ ಎಣ್ಣೆ 10 -20 ರೂ. ತುಟ್ಟಿ

• ಉದಯವಾಹಿನಿ, ಬೆಂಗಳೂರು,

ಬಸ್, ಮೆಟ್ರೊ, ಹಾಲು ದರ ಏರಿಕೆ ನಂತರ ಇದೀಗ ಶ್ರೀಸಾಮಾನ್ಯನ ಜೇಬಿಗೆ ಮತ್ತಷ್ಟು ಕತ್ತರಿ ಬಿದ್ದಿದೆ. ಅಡುಗೆ ಎಣ್ಣೆ ಬೆಲೆ ಏರಿಕೆಯ ಬಿಸಿ ಗ್ರಾಹಕರಿಗೆ ತಟ್ಟಿದೆ. ತೆಂಗಿನಕಾಯಿ ಎಣ್ಣೆ ದರವು ಲೀಟರ್‌ಗೆ 300 ರೂ. ಗಡಿ ದಾಟಿದೆ.

ದಿನ ನಿತ್ಯದ ಅಡುಗೆ, ತಿಂಡಿ ಮಾಡಲು ಅಡುಗೆ ಎಣ್ಣೆ ಅವಶ್ಯಕ, ಆದರೆ, ಖಾದ್ಯ ತೈಲಗಳ ಬೆಲೆ ಕಳೆದ ಒಂದು ತಿಂಗಳಿನಿಂದ ಗಣನೀಯ ಪ್ರಮಾಣದಲ್ಲಿ ದುಬಾರಿಯಾಗುತ್ತಿದೆ. ಒಂದು ತಿಂಗಳ ಹಿಂದಿನ ಬೆಲೆಗೂ ಈಗಿನ ದರಕ್ಕೂ 10 ರಿಂದ 20 ರೂ. ಹೆಚ್ಚಳವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೂರೈಕೆ ಕಡಿಮೆಯಾಗುತ್ತಿರುವುದೇ ಅಡುಗೆ ಎಣ್ಣೆ ದರ ಏರಿಕೆಯಾಗಲು ಕಾರಣವಾಗಿದೆ. ಮಾರ್ಚ್ ಮಧ್ಯ ಭಾಗದಿಂದ ರಾಜ್ಯದಲ್ಲಿ ಬಿಸಿಲಿನ ಪ್ರಮಾಣ ಏರಿಕೆಯಾಗುತ್ತದೆ. ಈ ಬಾರಿ ಜನವರಿ ಕೊನೆಯಿಂದಲೇ ಉಷ್ಣಾಂಶ ಹೆಚ್ಚಳವಾಗಿದ್ದು, ಎಳನೀರಿನ ದರವೂ ದುಬಾರಿಯಾಗಿದೆ. ಇದರ ಜತೆಗೆ ಕೊಬ್ಬರಿಯ ದರ ಗಗನಕ್ಕೇರಿದೆ. ಒಂದು ವರ್ಷದಿಂದ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 8 ರಿಂದ 8,500 ರೂ. ಇತ್ತು. ಈಗ 14,500 ರೂ.ನಿಂದ 15 ರೂ.ಗಳಿಗೆ ಏರಿಕೆಯಾಗಿದೆ.




ಉದಯವಾಹಿನಿ ಚಿತ್ರ

**ಸೂರ್ಯಕಾಂತಿ ಎಣ್ಣೆ ದರವೂ ಹೆಚ್ಚಳವಾಗಿದ್ದು, ಅದರಲ್ಲೂ ಸನ್‌ಫ್ಲವರ್, ಪಾಮಾಯಿಲ್, ಕಡಲೆಕಾಯಿ ಎಣ್ಣೆ, ಹರಳೆ ಎಣ್ಣೆ ಮತ್ತು ಸಾಸಿವೆ ಎಣ್ಣೆಗಳ ದರದಲ್ಲಿ 10 ರಿಂದ 20 ರೂ. ಹೆಚ್ಚಳವಾಗಿದೆ ಎಂದು ಖಾದ್ಯತೈಲ ವ್ಯಾಪಾರಿಗಳು ಮಾಹಿತಿ ನೀಡಿದ್ದಾರೆ.**

ಎಳನೀರು ಭಾರಿ ಪ್ರಮಾಣದಲ್ಲಿ ಮಾರಾಟವಾಗುತ್ತಿದ್ದು, ಕೊಬ್ಬರಿ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗುತ್ತಿಲ್ಲ. ಇದರ ನೇರ ಪರಿಣಾಮ ತೆಂಗಿನ ಎಣ್ಣೆಗೆ ತಟ್ಟಿದೆ. ಹೀಗಾಗಿ 1 ಲೀಟರ್ ತೆಂಗಿನ ಎಣ್ಣೆ 50 ರೂ. ಹೆಚ್ಚಳವಾಗಿದೆ.

# ಬೆಂಗಳೂರು ಭುವನೇಶ್ವರ ವಿಶೇಷ ರೈಲು ಟ್ರಿಪ್ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು,

ಭುವನೇಶ್ವರ, ಬೆಂಗಳೂರಿನ ಯಶವಂತಪುರ ನಡುವಿನ ವೀಕ್ಲಿ ಸ್ಪೆಷಲ್ ಟ್ರೈನನ್ನು ರೈಲ್ವೆ ಒಂಬತ್ತು ಟ್ರಿಪ್‌ಗಳಿಗೆ ವಿಸ್ತರಿಸಿದೆ. ರೈಲು ಸಂಖ್ಯೆ 02811 ಭುವನೇಶ್ವರ ಯಶವಂತಪುರ ಸಾಪ್ತಾಹಿಕ ವಿಶೇಷ ರೈಲು ಮಾರ್ಚ್ 1, 8, 15, 22, 29, ಏಪ್ರಿಲ್ 5, 12, 19 ಮತ್ತು 26 ರಂದು ಸಂಜೆ 7.15 ಕ್ಕೆ ಭುವನೇಶ್ವರದಿಂದ ಹೊರಟು ಮೂರನೇ ದಿನ ಬೆಳಿಗ್ಗೆ 12.15 ಕ್ಕೆ ಯಶವಂತಪುರ ತಲುಪಲಿದೆ. ರೈಲು ಸಂಖ್ಯೆ 02812 ಯಶವಂತಪುರ-ಭುವನೇಶ್ವರ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲು ಮಾರ್ಚ್ 3, 10, 17, 24, 31, ಏಪ್ರಿಲ್ 7, 14, 21 ಮತ್ತು 28 ರಂದು ಬೆಳಿಗ್ಗೆ 4.30 ಕ್ಕೆ ಯಶವಂತಪುರದಿಂದ ಹೊರಟು ಮರುದಿನ ಬೆಳಿಗ್ಗೆ 6 ಗಂಟೆಗೆ ಭುವನೇಶ್ವರ ತಲುಪಲಿದೆ ಎಂದು ರೈಲ್ವೆ ತಿಳಿಸಿದೆ.



ಉದಯವಾಹಿನಿ ಚಿತ್ರ

ರೈಲು ಸಂಖ್ಯೆ 16227/16228 ಮೈಸೂರು-ತಾಳಗುಪ್ಪ-ಮೈಸೂರು ಡೈಲಿ ಎಕ್ಸ್ ಪ್ರೆಸ್ ರೈಲು ಈ ಹಿಂದೆ ಅರಸಾಳು ನಿಲ್ದಾಣದಲ್ಲಿ ಒಂದು ನಿಮಿಷ ತಾತ್ಕಾಲಿಕ ನಿಲುಗಡೆಯನ್ನು ಒದಗಿಸಲಾಗಿತ್ತು, ಈ ಸೌಲಭ್ಯವನ್ನು 24.02.2025 ರಿಂದ 23.08.2025 ರವರೆಗೆ ಜಾರಿಯಾಗುವಂತೆ ಮುಂದುವರಿಸಲಾಗಿದೆ ಎಂದು ನೈಋತ್ಯ ರೈಲ್ವೆ ತಿಳಿಸಿದೆ. ರೈಲು ಸಂಖ್ಯೆ 16206/16205 ಮೈಸೂರು-ತಾಳಗುಪ್ಪ-ಮೈಸೂರು ಡೈಲಿ ಎಕ್ಸ್ ಪ್ರೆಸ್ ರೈಲು ಈ ಹಿಂದೆ ಅರಸಾಳು ಮತ್ತು ಕುಂಸಿ ನಿಲ್ದಾಣದಲ್ಲಿ ಒಂದು ನಿಮಿಷ ತಾತ್ಕಾಲಿಕ ನಿಲುಗಡೆಯನ್ನು ಒದಗಿಸಲಾಗಿತ್ತು, ಈ ಸೌಲಭ್ಯವನ್ನು 24.02.2025 ರಿಂದ 23.08.2025 ಜಾರಿಯಾಗುವಂತೆ ಮುಂದುವರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಮೈಸೂರು-ತಾಳಗುಪ್ಪ ರೈಲಿಗೆ ಇನ್ನೆರಡು ನಿಲುಗಡೆ

**ಮೈಸೂರು-ತಾಳಗುಪ್ಪ ಮಾರ್ಗದ ಪ್ರಯಾಣಿಕರ ಅನುಕೂಲಕ್ಕಾಗಿ, ಕೆಲವು ರೈಲುಗಳಿಗೆ ಅರಸಾಳು ಮತ್ತು ಕುಂಸಿ ನಿಲ್ದಾಣಗಳಲ್ಲಿ ತಾತ್ಕಾಲಿಕ ನಿಲುಗಡೆಯ ಅವಕಾಶವನ್ನು ಮುಂದುವರಿಸಲಾಗಿದೆ ಎಂದು ನೈಋತ್ಯ ರೈಲ್ವೆ ತಿಳಿಸಿದೆ. ಜತೆಗೆ ರೈಲುಗಳ ವಿವರವನ್ನು ಟ್ವೀಟ್ ಮೂಲಕ ತಿಳಿಸಿದೆ.**

# ಬೆಂಗಳೂರು ಅಭಿವೃದ್ಧಿ ಮಾಡೋಕೆ ಆಗಲ್ಲ ಅಂದ್ರೆ, ರಾಜೀನಾಮೆ ಕೊಡಿ ಎಂದು ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು,

ಕಾಂಗ್ರೆಸ್ ಸರ್ಕಾರದ ಗ್ರೇಟರ್ ಬೆಂಗಳೂರು ಪ್ರಸ್ತಾಪಕ್ಕೆ ಬಜೆಪಿ ವಿರೋಧ ಮಾಡಿದೆ. ಈ ಸಂಬಂಧ ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸರ್ಕಾರದ ನಡೆ ಖಂಡಿಸಿದರು.



ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಬಿಬಿಎಂಪಿ ಚುನಾವಣೆ ಆಗಬೇಕಿತ್ತು. ಹೀಗೆ ಚುನಾವಣೆ ಮುಂದೂಡೋದ್ರಿಂದ ಪ್ರಜಾಪ್ರಭುತ್ವಕ್ಕೆ ಚ್ಯುತಿ ಬರುತ್ತದೆ. ಬ್ರ್ಯಾಂಡ್ ಬೆಂಗಳೂರು ಅಂದೋರು ಈಗ ಯಾಕೆ ಗ್ರೇಟರ್ ಬೆಂಗಳೂರು ಅಂತಿದ್ದೀರಾ. ಬ್ರ್ಯಾಂಡ್ ಬೆಂಗಳೂರು ಮಾಡಲು ಆಗದವರು ಗ್ರೇಟರ್ ಬೆಂಗಳೂರು ಮಾಡ್ತಾರಾ ಎಂದು ಪ್ರಶ್ನಿಸಿದರು.

ಇದು ಸರಿಯಾದ ಕ್ರಮ ಅಲ್ಲ. ಗ್ರೇಟರ್ ಬೆಂಗಳೂರು ಮಾಡಿ ಕೆಂಪೇಗೌಡ ಕಟ್ಟಿದ ಬೆಂಗಳೂರನ್ನ ಛಿದ್ರ ಮಾಡೋಕೆ ಕಾಂಗ್ರೆಸ್ ಹೊರಟಿದೆ. ಬೆಂಗಳೂರನ್ನ ಒಗ್ಗಟ್ಟಾಗಿ ಇಡೋ ಕೆಲಸ ಆಗಬೇಕು. ವಿಚಿತ್ರಕಾರಿ ಜನ ಬೆಂಗಳೂರಿಗೆ ಬಂದು ಹಾಳು ಮಾಡಿದ್ದು ಆಯ್ತು. ಬೆಂಗಳೂರನ್ನ ಸುಭದ್ರಗೊಳಿಸಬೇಕು. ಅದು ಬಿಟ್ಟು 6, 7 ಭಾಗ ಮಾಡ್ತೀವಿ. 6 ಮೇಯರ್ ಮಾಡ್ತೀವಿ ಅನ್ನೋದು ಸರಿಯಲ್ಲ. ಗ್ರೇಟರ್ ಬೆಂಗಳೂರಿಗೆ ನಮ್ಮ ವಿರೋಧ ಇದೆ ಎಂದರು. ದೇವರೇ ಬಂದರು ಬೆಂಗಳೂರು ಅಭಿವೃದ್ಧಿ ಮಾಡೋಕೆ ಆಗಲ್ಲ ಎಂಬ ಡಿಕೆಶಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕೈಲಾಗದವರು ಮೈ ಪರಚಿಕೊಂಡ ರೀತಿ ಇವರದ್ದು ಆಗಿದೆ. ಬೆಂಗಳೂರನ್ನ ಹಾಗೆ ಮಾಡ್ತೀವಿ ಹೀಗೆ ಮಾಡ್ತೀವಿ ಅಂತ ಸುಳ್ಳು ಹೇಳಿ ಅಧಿಕಾರಕ್ಕೆ ಬಂದವರು ಇವರು.ಅವರು ಕೊಟ್ಟ ಗ್ಯಾರಂಟಿಗೆ ವಾರಂಟಿ ಇಲ್ಲದ ಹಾಗೇ ಆಗಿದೆ.ಇವರು ನಮ್ಮನ್ನ ಗ್ಯಾರಂಟಿ ಒಂದೇ ಕಾಪಾಡುತ್ತೆ ಅಂತ ಅಂದುಕೊಂಡಿದ್ದಾರೆ. ದೇವರು ಬಂದರೂ ಅಭಿವೃದ್ಧಿ ಮಾಡೋಕೆ ಆಗಲ್ಲ ಅಂದರೆ ನೀವು ಯಾಕೆ ಅಧಿಕಾರದಲ್ಲಿ ಇದ್ದೀರಾ ಅಧಿಕಾರ ಬಿಟ್ಟು ತೊಲಗಿ ಹೋಗಿ. ರಾಜೀನಾಮೆ ಕೊಟ್ಟುಬಿಡಿ. ಇಷ್ಟು ದಿನ ಬೆಂಗಳೂರನ್ನ ನೀವೇ ಕಾಪಾಡಿರೋದಾ ನಿಮ್ಮಿಂದ ಆಗಿಲ್ಲ ಅಂದರೆ ಅಧಿಕಾರ ಬಿಟ್ಟು ಹೋಗಿ ಅಂತ ಕಾಂಗ್ರೆಸ್ ವಿರುದ್ಧ, ಡಿಕೆಶಿ ವಿರುದ್ಧ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು

## ಅಗ್ನಿ ಅನಾಹುತದ ಮುಂಜಾಗ್ರತೆ ಕುರಿತಂತೆ ಪ್ರಾತ್ಯಕ್ಷಿಕೆ ಪ್ರದರ್ಶಿಸಿದ ಡಿಎಫ್‌ಒ ಪ್ರದೀಪ್

• ಉದಯವಾಹಿನಿ, ಬೆಂಗಳೂರು,

ಆಕಸ್ಮಿಕ ಅಗ್ನಿ ಅವಘಡವಾದರೆ ಹೀಗೆ ಮಾಡಿ ಅಗ್ನಿ ಅನಾಹುತದ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಮುಂಜಾಗ್ರತೆ ಕುರಿತಂತೆ ಅಗ್ನಿಶಾಮಕ ದಳದ ಅಧಿಕಾರಿಗಳು ಅಭಿಮಾನಿ ಸಮೂಹ ಸಂಸ್ಥೆಯ ಸಿಬ್ಬಂದಿಗಳಿಗೆ ಅರಿವು ಮೂಡಿಸಿದರು. ರಾಜಾಜಿನಗರದ ಡಾ.ರಾಜ್ ಕುಮಾರ್ ರಸ್ತೆಯಲ್ಲಿರುವ ಅಭಿಮಾನಿ ಪ್ರಕಾಶನದ ಅರಗಿಣಿ ಭವನದ ಮೇಲ್ಛಾವಣಿಯಲ್ಲಿ ಡಿಎಫ್ ಒ ಪ್ರದೀಪ್ ಜೆ.ಸಿ. ಮತ್ತವರ ಸಿಬ್ಬಂದಿಗಳು ಪ್ರಾತ್ಯಕ್ಷಿಕೆ ಪ್ರದರ್ಶಿಸುವ ಮೂಲಕ ಅಗ್ನಿ ಅನಾಹುತದಿಂದ ಪಾರಾಗುವುದರ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅರಗಿಣಿ ಭವನದಲ್ಲಿರುವ ವಿವಿಧ ಕಂಪೆನಿಗಳ ಉದ್ಯೋಗಿಗಳು ಹಾಜರಿದ್ದರು.

# ಹೊಸ ಎಲೆಕ್ಟ್ರಿಕ್ ಬಸ್‌ಗಳಿಗೆ ಶಾಕ್! ಸಂಚಾರವೇ ಸ್ಥಗಿತ

## ಖಾಸಗಿ ಏಜೆನ್ಸಿಗಳ ಮೂಲಕ ಎಸಿ ಎಲೆಕ್ಟ್ರಿಕ್ ಬಸ್‌ಗಳಿಗೆ ಚಾಲಕರ ನೇಮಕ ಮಾಡಿಕೊಳ್ಳಲು ಬಿಎಂಟಿಸಿ ಮುಂದಾಗಿತ್ತು

• ಉದಯವಾಹಿನಿ, ಬೆಂಗಳೂರು,

ಬೆಂಗಳೂರು, ಬಿಎಂಟಿಸಿ ಗುತ್ತಿಗೆ ಆಧಾರದಲ್ಲಿ ಅಶೋಕ್ ಲೇಲ್ಯಾಂಡ್ ಬಸ್ಸುಗಳನ್ನು ತೆಗೆದುಕೊಳ್ಳುತ್ತಿದೆ. ಆದರೆ ಆ 320 ಬಸ್‌ಗಳಿಗೆ ಚಾಲಕರು ಸಿಗುತ್ತಿಲ್ಲ ಎಂಬ ಮಾಹಿತಿ ತಿಳಿದುಬಂದಿದೆ. ಫೆಬ್ರವರಿ 1 ರಿಂದಲೇ 320 ಎಸಿ ಎಲೆಕ್ಟ್ರಿಕ್ ಬಸ್ಸುಗಳು ರಸ್ತೆಗಿಳಿಯಬೇಕಿತ್ತು. ಆದರೆ ಡ್ರೈವರ್‌ಗಳಿಲ್ಲದೆ ಬಸ್‌ಗಳು ರೋಡಿಗಿಳಿತ್ತಿಲ್ಲ.

**ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ವಾಯುಮಾಲಿನ್ಯದ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಇದಕ್ಕೆ ಬ್ರೇಕ್ ಹಾಕಲು ಬಿಎಂಟಿಸಿ ಬರೋಬ್ಬರಿ 320 ಎಸಿ ಎಲೆಕ್ಟ್ರಿಕ್ ಬಸ್‌ಗಳ ಮೊರೆ ಹೋಗಿತ್ತು. ಟ್ರಯಲ್ ರನ್ ಕೂಡ ಯಶಸ್ವಿಯಾಗಿ ನಡೆದಿತ್ತು. ಆದರೆ ಇದೀಗ ಹೊಸ ಬಸ್‌ಗಳು ಸಂಚಾರ ಮಾಡುತ್ತಿಲ್ಲ.**




ಈಗಾಗಲೇ ಬೆಂಗಳೂರಿನಲ್ಲಿ ಎಸಿ ಎಲೆಕ್ಟ್ರಿಕ್ ಬಸ್‌ಗಳ ಟ್ರಯಲ್ ರನ್ ಯಶಸ್ವಿಯಾಗಿದೆ .ಖಾಸಗಿ ಏಜೆನ್ಸಿಗಳ ಮೂಲಕ ಎಸಿ ಎಲೆಕ್ಟ್ರಿಕ್ ಬಸ್‌ಗಳಿಗೆ ಚಾಲಕರ ನೇಮಕ ಮಾಡಿಕೊಳ್ಳಲು ಬಿಎಂಟಿಸಿ ಮುಂದಾಗಿತ್ತು. ಆದರೆ ಏಜೆನ್ಸಿಗಳ ಮೂಲಕ ಕೆಲಸಕ್ಕೆ ಬರಲು ಚಾಲಕರು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ಬಿಎಂಟಿಸಿ ಚಾಲಕರಿಗೆ 35 ರಿಂದ 40 ಸಾವಿರ ರೂ. ಸಂಬಳ ಕೊಡಲಾಗುತ್ತಿದೆ. ಆದರೆ ಏಜೆನ್ಸಿ ಮೂಲಕ ಬರುವ ಚಾಲಕರಿಗೆ ಕೇವಲ 18 ಸಾವಿರ ರೂ. ಸಂಬಳ ನೀಡಲಾಗುತ್ತಿದೆ. ಅದಕ್ಕೆ ಚಾಲಕರು ಎಲೆಕ್ಟ್ರಿಕ್ ಬಸ್ ಚಲಾಯಿಸುವ ಕೆಲಸಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಎಸಿ ಎಲೆಕ್ಟ್ರಿಕ್ ಬಸ್‌ಗಳಿಗೆ ಸಿಗುತ್ತಿಲ್ಲ ಚಾಲಕರು

ಈ ಹೊಸ ಎಸಿ ಎಲೆಕ್ಟ್ರಿಕ್ ಬಸ್‌ಗಳಿಗೆ ಚಾಲಕರನ್ನು ಗುತ್ತಿಗೆ ಪಡೆದ ಬಸ್ ಕಂಪನಿಗಳಿಂದಲೇ ನೇಮಕ ಮಾಡಲಾಗುತ್ತಿದೆ. ಕಂಡಕ್ಟರ್ ಮಾತ್ರ ಬಿಎಂಟಿಸಿಯಿಂದ ನೇಮಕವಾಗುತ್ತಾರೆ. ಹನ್ನೆರಡು ವರ್ಷಗಳಿಗೆ ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಒಂದು ಕಿಮೀಗೆ ಈ ಬಸ್‌ಗೆ ಬಿಎಂಟಿಸಿ 68 ರುಪಾಯಿ ನೀಡಲಿದೆ. ಮೊದಲ ಬಾರಿಗೆ ರಾಜಧಾನಿಯಲ್ಲಿ ಸಂಚರಿಸಬೇಕಿದ್ದ ಐದು ಎಸಿ ಎಲೆಕ್ಟ್ರಿಕ್ ಬಸ್‌ಗಳ ಟ್ರಯಲ್ ರನ್ ಮೆಜೆಸ್ಟಿಕ್‌ನಿಂದ ಕಾಡುಗೋಡಿವರೆಗೆ ನಡೆಸಲಾಗಿತ್ತು.

### ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದೇನು

**ಈ ಎಸಿ ಎಲೆಕ್ಟ್ರಿಕ್ ಬಸ್‌ಗಳಿಗೆ ಕಂಡಕ್ಟರ್‌ಗಳನ್ನು ಮಾತ್ರ ನಾವು ಕೊಡುತ್ತೇವೆ. ಕೇಂದ್ರ ಸರ್ಕಾರ ಬಸ್ ಕಂಪನಿಗಳಿಗೆ ಸಬ್ಸಿಡಿ ನೀಡುತ್ತದೆ. ಸಬ್ಸಿಡಿ ಪಡೆದ ಕಂಪನಿ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತದೆ. ನಮಗೆ ಸಬ್ಸಿಡಿ ನೀಡಿದ್ದರೆ ತುಂಬಾ ಸಹಾಯ ಆಗುತ್ತದೆ. ಈ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಕೇಳಬೇಕಿದ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.**

ಸಚಿವ ರಾಮಲಿಂಗಾ ರೆಡ್ಡಿ ಹೇಳಿಕೆ

ಸರ್ಕಾರದಿಂದ ಇವುಗಳಿಗೆ 150 ಕೋಟಿ ರೂಪಾಯಿ ಸಹಾಯಧನ ನೀಡಲಾಗಿದೆ. ಫೆಬ್ರವರಿಯಲ್ಲಿ ಸಿಎಂ ಸಿದ್ದರಾಮಯ್ಯರಿಂದ ಎಲೆಕ್ಟ್ರಿಕ್ ಎಸಿ ಬಸ್‌ಗಳಿಗೆ ಚಾಲನೆ ನೀಡಬೇಕಿತ್ತು. ಆದರೆ ಚಾಲಕರು ಸಿಗದೆ ಎಲ್ಲವೂ ನಿಂತುಹೋಗಿದೆ. ವಿಮಾನ ನಿಲ್ದಾಣ, ಮೆಜೆಸ್ಟಿಕ್, ಕತ್ರಿಗುಪ್ಪೆ, ಐಟಿಪಿಎಲ್, ಎಚ್‌ಎಸ್‌ಆರ್ ಡಿಪೋದಿಂದ ಬಸ್ ಹೊರಡಿಸಲು ಚಿಂತನೆ ನಡೆಸಲಾಗಿತ್ತು. ಒಟ್ಟಿನಲ್ಲಿ ಇತ್ತ ನಮ್ಮ ಮೆಟ್ರೋದಲ್ಲಿ ಟಿಕೆಟ್ ದರ ಏರಿಕೆ ಆಗಿದೆ. ಬಿಎಂಟಿಸಿಯ ಎಸಿ ಎಲೆಕ್ಟ್ರಿಕ್ ಬಸ್‌ನಲ್ಲಿ ಸಂಚಾರ ಮಾಡೋಣ, ಎಲೆಕ್ಟ್ರಿಕ್ ಬಸ್‌ನಿಂದ ವಾಯುಮಾಲಿನ್ಯ ಕಡಿಮೆ ಆಗುತ್ತದೆ, ಜನರು ನೆಮ್ಮದಿಯಿಂದ ಉಸಿರಾಡಬಹುದು ಎಂದುಕೊಂಡಿದ್ದ ಪ್ರಯಾಣಿಕರ ಆಸೆಗೆ ಬಿಎಂಟಿಸಿ ತಣ್ಣೀರು ಹಾಕಿದ್ದಂತೂ ಸುಳ್ಳಲ್ಲ.

# ಅಕ್ರಮವೆಸಗಿದ ಒಬ್ಬರನ್ನೂ ಬಿಡುವ ಪ್ರಶ್ನೆಯಿಲ್ಲ

## ಅಕ್ರಮ ಮಾಡಿದ ಒಬ್ಬರನ್ನೂ ಬಿಡುವ ಪ್ರಶ್ನೆಯೇ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

• **ಉದಯವಾಹಿನಿ ಮೈಸೂರು**

50:50 ಅನುಪಾತದ ನಿವೇಶನ ಹಂಚಿಕೆಯಲ್ಲಿ ಆಗಿರುವ ಅಕ್ರಮದ ಬಗ್ಗೆ ಪಿ.ಎನ್.ದೇಸಾಯಿ ಆಯೋಗ ತನಿಖೆ ನಡೆಸುತ್ತಿದ್ದು, ತನಿಖೆ ಮುಗಿದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅಕ್ರಮ ಮಾಡಿದ ಒಬ್ಬರನ್ನೂ ಬಿಡುವ ಪ್ರಶ್ನೆಯೇ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾದಲ್ಲಿ 50:50 ಅನುಪಾತದಲ್ಲಿ ಪರಿಹಾರ ನೀಡುವ ಕಾನೂನಿದೆ. ಅದರ ಅನ್ವಯ ಪರಿಹಾರ ನೀಡಲಾಗಿದೆ. ಆ ಕಾನೂನು ಇಲ್ಲದೇ ಪರಿಹಾರ ನೀಡಲು ಸಾಧ್ಯವಿಲ್ಲ. ಬಿಜೆಪಿಯವರ ಕಾಲದಲ್ಲೇ ಹೆಚ್ಚು ಪರಿಹಾರ ನೀಡಲಾಗಿದೆ. ಪಾರ್ವತಮ್ಮ ಅವರಿಗೂ ಬಸವರಾಜ ಬೊಮ್ಮಾಯಿ ಅವರೇ ಪರಿಹಾರ ನೀಡಿದ್ದರು ಎಂದರು.

**ಬಿಜೆಪಿಯವರಿಗೆ ಮಾನ-ಮರ್ಯಾದೆ ಇಲ್ಲ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಕ್ಲೀನ್‌ಚಿಟ್ ನೀಡಿ ಸಲ್ಲಿಸಿರುವ ವರದಿಯನ್ನು ಟೀಕಿಸುತ್ತಿರುವ ಹಾಗೂ ಆಕ್ಷೇಪ ವ್ಯಕ್ತಪಡಿಸುತ್ತಿರುವ ಬಿಜೆಪಿಯವರಿಗೆ ಮಾನ ಮರ್ಯಾದೆ ಇಲ್ಲ. ಮಾನ- ಮರ್ಯಾದೆ ಇಲ್ಲದವರು ಮಾತ್ರ ಲೋಕಾಯುಕ್ತ ವರದಿ ಟೀಕಿಸಬೇಕು ಎಂದು ಕಿಡಿ ಕಾರಿದರು.

ನಾವು ಯಾವ ತಪ್ಪನ್ನೂ ಮಾಡಿಲ್ಲ. ಚಾಮುಂಡೇಶ್ವರಿ ಬಳಿ ಪ್ರಮಾಣ ಮಾಡೋಣ ಬನ್ನಿ ಎಂದು ಆಹ್ವಾನಿಸಿದ್ದೆ. ಆದರೆ, ಯಾರೂ ಆಣೆ-ಪ್ರಮಾಣಕ್ಕೆ ಬರಲಿಲ್ಲ. ಈಗ ಲೋಕಾಯುಕ್ತ ವರದಿ ಬಂದಿದೆ. ರಾಜ್ಯದ ಜನರಿಗೆ ಸತ್ಯ ಗೊತ್ತಾಗಿದೆ. ಸಿದ್ದರಾಮಯ್ಯ ಎಂದು ಅಕ್ರಮ ಅಥವಾ ತಪ್ಪು ಮಾಡಿಲ್ಲ. ಬಿಜೆಪಿಯವರು ಸುಳ್ಳು ಹೇಳಿಕೊಂಡು ಮೈಸೂರು ಚಲೋ ಪಾದಯಾತ್ರೆ ಮಾಡಿದರು ಎಂದರು.

ಮುಖ್ಯಮಂತ್ರಿ, ಮಂತ್ರಿಗಳು ತಪ್ಪು ಮಾಡಿದಾಗ ಲೋಕಾಯುಕ್ತದವರು ಜೈಲಿಗೆ ಕಳುಹಿಸಿದ ಉದಾಹರಣೆ ಇದೆ. ಈಗ ಪೂರ್ವಾಗ್ರಹಪೀಡಿತರಾಗಿ ತನಿಖೆ ನಡೆಸಿಲ್ಲ. ವಾಸ್ತವ ಸ್ಥಿತಿಯನ್ನು ತನಿಖೆ ಮಾಡಿ ವರದಿ ನೀಡಿದ್ದಾರೆ ಎಂದರು.

**ಮೈಸೂರಿನ ಅಭಿವೃದ್ಧಿ:** ಸಿಎಂ ಮೈಸೂರು ಅಭಿವೃದ್ಧಿ ಬಗ್ಗೆ ಸೂಚನೆ ನೀಡಿದ್ದಾರೆ. ವಿವಿಧ ಕಾಮಗಾರಿಗಳ ಅಭಿವೃದ್ಧಿಗೆ 750 ಕೋಟಿ ಡಿಪಿಆರ್ ಕೆಲಸವಾಗಿದೆ. ಮೈಸೂರಿನ ಎರಡು ಕೆರೆ, ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ವೈಟ್ ಟಾಪಿಂಗ್, ರಿಂಗ್ ರಸ್ತೆ, ಯುಜಿಡಿ ಕೆಲಸ ಮಾಡಬೇಕಿತ್ತು. ಈ ಬಗ್ಗೆ ಪಾಲಿಕೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇವೆ.

ಬೆಂಗಳೂರು ಮಾದರಿ ವೈಟ್ ಟಾಪಿಂಗ್ ಕೆಲಸ ಮಾಡಬೇಕಿದೆ. ಮೈಸೂರಿನ ಕೆಲವು ಕಟ್ಟಡಗಳ ಶಿಥಿಲಾವಸ್ಥೆಯ ಬಗ್ಗೆ ರಿಪೊ?ರ್ಟ್ ಸಲ್ಲಿಸಿದ್ದೇವೆ.

ಕೆಲವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಕಟ್ಟಡ ನಿರ್ಮಾಣದ ಬಳಿಕ ಯಾರು ಮೊದಲು ವ್ಯಾಪಾರ ಮಾಡುತ್ತಿದ್ದರೋ ಅವರಿಗೆ ಮೊದಲ ಆದ್ಯತೆ ನೀಡುತ್ತೇವೆ. ಲಾನ್ಸ್‌ಡೌನ್ ಕಟ್ಟಡ, ನಿರ್ಮಾಣಕ್ಕೆ ಸುಮಾರು 100 ಕೋಟಿ ರೂಪಾಯಿ ಮಿಸಲಿರಿಸಿದ್ದೇವೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ಸಿಎಂ ಅಭಿವೃದ್ಧಿ ಬಗ್ಗೆ ಸೂಚನೆ**

### ದಾಖಲೆಗಳು ಕಡ್ಲೆಪುರಿಯಲ್ಲ

**ಮುಡಾ ದಾಖಲೆಗಳನ್ನು ತೆಗೆದುಕೊಂಡು ಹೋಗಲು ಅದೇನು ಕಡ್ಲೆಪುರಿಯಲ್ಲ. ದಾಖಲೆಗಳು ಕಾಣೆಯಾಗಿವೆ ಎಂದು ಯಾವ ವರದಿಯಲ್ಲಿ ಹೇಳಲಾಗಿದೆ. ದಾಖಲೆಗಳನ್ನು ಎತ್ತಿಕೊಂಡು ಹೋಗುವುದು ಅಷ್ಟೊಂದು ಸುಲಭವೆ ಕ್ಯಾಮೆರಾ ಸೇರಿ ಎಲ್ಲರ ಮುಂದೆ ಹೇಗೆ ತೆಗೆದುಕೊಂಡು ಹೋಗಲು ಸಾಧ್ಯ ಅದರಲ್ಲೂ 141 ದಾಖಲೆ ಒಯ್ದಿದ್ದಾರೆ ಎಂದು ಕೆಲವರು ಹೇಳಿದ್ದಾರೆ. ಅವರಿಗೆ ಆ ನಂಬರ್ ನೀಡಿದವರು ಯಾರು ಬಹುಶಃ ಈ ಆರೋಪ ಮಾಡಿದವರೇ ತೆಗೆದುಕೊಂಡು ಹೋಗಿರಬೇಕು ಎಂದರು.**

# ಮುಸ್ಲಿಮರ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ

• **ಉದಯವಾಹಿನಿ ಮೈಸೂರು**

ಮೈಸೂರಿನಲ್ಲಿ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಮುಸ್ಲಿಂ ವಿರೋಧಿ ಹೇಳಿಕೆ ನೀಡಿದ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ. ಯೂತ್ ಕಾಂಗ್ರೆಸ್ ನಾಯಕ ಸೈಯದ್ ಅಬ್ರಾರ್ ಅವರ ದೂರಿನ ಆಧಾರದ ಮೇಲೆ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾನೂನು ಕ್ರಮ ಜರುಗಿಸುವಂತೆ ಮನವಿ ಮಾಡಲಾಗಿದೆ.

ಮೈಸೂರು, ಮುಸ್ಲಿಮರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪ ಮೇಲೆ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಯೂತ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್ ನೀಡಿದ್ದ ದೂರು ಆಧರಿಸಿ ಮೈಸೂರು ಉದಯಗಿರಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

**ದೂರಿನಲ್ಲೇನಿದೆ:** ಮಾಜಿ ಸಂಸದ ಪ್ರತಾಪ್ ಸಿಂಹ ಫೆಬ್ರವರಿ 20 ರಂದು ಉದಯಗಿರಿ ವ್ಯಾಪ್ತಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುವಾಗ ಮುಸ್ಲಿಂ ಸಮುದಾಯದ ವಿರುದ್ಧ ಅವಹೇಳನಕಾರಿಯಾಗಿ ಪ್ರತಿಕ್ರಿಯಿಸಿದ್ದಾರೆ. ಮುಸ್ಲಿಂ ಸಮುದಾಯದವರು ಈ ದೇಶದ ಪ್ರಜೆಗಳೇ ಅಲ್ಲ ಎಂಬ ರೀತಿಯಲ್ಲಿ ಹೇಳಿದ್ದಾರೆ. ಮುಸ್ಲಿಂ ಸಮುದಾಯದ ಜನ ಸಂಖ್ಯೆ ಜಾಸ್ತಿ ಮಾಡಿಕೊಂಡು ಹೆಚ್ಚು ಮಕ್ಕಳು ಹುಟ್ಟಿಸುತ್ತಿದ್ದಾರೆ ಎಂಬ ಹೇಳಿಕೆಯನ್ನು ನೀಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮುಸ್ಲಿಂ ಮತ್ತು ಹಿಂದೂ ಸಮುದಾಯದ ನಡುವೆ ಕೋಮು ಘರ್ಷಣೆ ಉಂಟುಮಾಡುವ ರೀತಿಯಲ್ಲಿ ಹೇಳಿಕೆಯನ್ನು ನೀಡಿದ್ದಾರೆ. ಮುಸ್ಲಿಂ ಸಮುದಾಯದ ಜನರನ್ನು ನಿಂದಿಸುವ ರೀತಿಯಲ್ಲಿ ಪ್ರಚೋದನಾ ಭಾಷಣವನ್ನು ಮಾಡಿದ್ದಾರೆ. ಆದ್ದರಿಂದ ಪ್ರತಾಪ್ ಸಿಂಹರವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಯೂತ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್ ದೂರು ನೀಡಿದ್ದಾರೆ.



**ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲು**

### ಪ್ರತಾಪ್ ಸಿಂಹ ಹೇಳಿದ್ದೇನು

**ಮೈಸೂರಿನ ಉದಯಗಿರಿ ಠಾಣೆ ಮೇಲಿನ ಕಲ್ಲು ತೂರಾಟ ಪ್ರಕರಣ ವಿಚಾರವಾಗಿ ಇತ್ತೀಚೆಗೆ ಮಾಧ್ಯಮದವರೊಂದಿಗೆ ಮಾತನಾಡಿದ್ದ ಪ್ರತಾಪ್ ಸಿಂಹ, ದೇಶ ಇಬ್ಭಾಗ ಆದಾಗಲೇ ಮುಸ್ಲಿಂರು ಈ ದೇಶವನ್ನು ಬಿಟ್ಟು ತೊಲಗಬೇಕಿತ್ತು. ಆದರೆ ಇಲ್ಲಿ ಉಳಿದಕೊಂಡು ಮಕ್ಕಳನ್ನು ಹುಟ್ಟಿಸುವುದು ಬಿಟ್ಟು ಬೇರೇನು ಮಾಡುತ್ತಿದ್ದಾರೆ ಹೇಳಿ ಎಂದಿದ್ದರು. ಸದ್ಯ ಪ್ರತಾಪ್ ಸಿಂಹರ ಈ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗುತ್ತಿದೆ.**

# ಫೆ. 26: ಲೋಕ ಕಲ್ಯಾಣಾರ್ಥ ಸಹಸ್ರ ಲಿಂಗಾರ್ಚನೆ

• **ಉದಯವಾಹಿನಿ ಸಿರಾ,**

ಶಿವಲಿಂಗ ಪೂಜೆಯಿಂದ ಅಸಾಧ್ಯವಾದದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಶ್ರೀ ಶಂಕರ ಲಿಂಗಾರ್ಚನೆ ಸಮಿತಿಯ ಪಿ ಸುರೇಶ್ ಶಾಸ್ತ್ರಿ ತಿಳಿಸಿದರು. ನಗರದ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀ ಭಾರತಿತೀರ್ಥ ಮಹಾ ಸನ್ನಿಧನಂಗಳವರು ತತ್ವರಕಮಲಸಂಜಾತರಾದ ಶ್ರೀವಿಧುಶೇಖರ ಭಾರತಿ ಸನ್ನಿಧಾನದ ಆಶೀರ್ವಾದದೊಂದಿಗೆ ಮಹಾಶಿವರಾತ್ರಿಯಂದು ಲೋಕಕಲ್ಯಾಣಾರ್ಥವಾಗಿ ಸಹಸ್ರ ಲಿಂಗಾರ್ಚನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಅಂದು ಬೆಳಿಗ್ಗೆ ಗುರು ಗಣಪತಿ ಪ್ರಾರ್ಥನೆ ಪುಣ್ಯಾಹದೊಂದಿಗೆ ದೇವತಾ ಕಾರ್ಯಕ್ರಮ ಪ್ರಾರಂಭವಾಗಲಿದ್ದು, ಅಂದು ರಾತ್ರಿ 5.30ಕ್ಕೆ ಪಂಚಾಮೃತ ಅಭಿಷೇಕ ಹಾಗೂ ಮಂಗಳದ್ರವ್ಯ ಸಮೇತ ಸಾಮೂಹಿಕವಾಗಿ ಭಕ್ತಾದಿಗಳಿಂದ ಸಂಕಲ್ಪ ಮತ್ತು ಏಕವಾರ ರುದ್ರಾಭಿಷೇಕ , ಸಂಜೆ 6.30 ಕ್ಕೆ ದಂಪತಿಗಳು ಮತ್ತು ಯುವಕ-ಯುವತಿಯರಿಂದ ಸಹಸ್ರ ಲಿಂಗಾರ್ಚನೆ ಮತ್ತು ರಾತ್ರಿ 9 ಗಂಟೆಗೆ ಮಹಾ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗವನ್ನು ಹಮ್ಮಿಕೊಳ್ಳಲಾಗಿದೆ. ಲಿಂಗಾರ್ಚನೆಗೆ ಬೇಕಾದ ಶಿವಲಿಂಗಗಳನ್ನು ಪಾವಗಡದ ಭಕ್ತಾದಿಗಳಾದ ಶ್ರೀಮತಿ ರಾಧಮ್ಮನವರು ನೀಡಲಿದ್ದು, ಪೂಜೆ ಮಾಡಿದ ಲಿಂಗಗಳನ್ನು ತಲಕಾಡಿನಲ್ಲಿ ವಿಸರ್ಜನೆ ಮಾಡಲಾಗುವುದು ಎಂದು ತಿಳಿಸಿದರು.

ದೈವಾನುಗ್ರಹದ ಉದ್ದೇಶ ನೆಡೆಯಲಿರುವ ಈ ದೇವತಾ ಕಾರ್ಯದಲ್ಲಿ 400 ಜನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಪೂಜೆಗೆ ಭಾಗವಹಿಸುವವರು ಮುಂಚಿತವಾಗಿ ತಮ್ಮ ತಮ್ಮ ಹೆಸರುಗಳನ್ನು ತಿಳಿಸತಕ್ಕದ್ದು ಹಾಗೂ ಪೂಜಾ ದ್ರವ್ಯಗಳೊಂದಿಗೆ ಆಸೀನರಾಗಿರಬೇಕು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

# ಬಿ ಖಾತಾ ನಿವೇಶನಗಳಿಗೆ ಬ್ಯಾಂಕ್ ಸಾಲ ಸೌಲಭ್ಯ ದೊರೆಯುವಂತಾಗಲಿ

• **ಉದಯವಾಹಿನಿ ಮಧುಗಿರಿ,**

ಸರ್ಕಾರ ಎಲ್ಲಾ ಸೌಲಭ್ಯಗಳು ಮತ್ತು ಬ್ಯಾಂಕಿನ ಸಾಲ ಸೌಲಭ್ಯಗಳು ಬಿ ಖಾತಾ ನಿವೇಶನಗಳಿಗೂ ದೊರೆಯುವಂತಾಗಬೇಕು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಪುರಸಭೆ ಕಚೇರಿಯಲ್ಲಿ ನಡೆದ ಪುರಸಭೆ ವ್ಯಾಪ್ತಿಯ ಆಸ್ತಿಗಳಿಗೆ ನಮೂನೆ ಇ ಖಾತಾ ನಮೂನೆ, ನಮೂನೆ 3 ಎ ನಕಲನ್ನು ಸೃಜಿಸಿ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದೊಂದು ಜನಪರ ತೀರ್ಮಾನವಾಗಿದ್ದು, ಯಾವುದೇ ಸಮಸ್ಯೆಗಳಿದ್ದರೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಸರ್ಕಾರದ ಉದ್ದೇಶ. ಇದರಿಂದ ಅನಧಿಕೃತ ನಿವೇಶನಗಳಿಗೂ ಮಾನ್ಯತೆ ನೀಡಿ ಖಾತೆ ನೀಡಿದಂತಾಗುತ್ತದೆ. ಇದರಿಂದ ಮನೆ ಕಟ್ಟಿಕೊಳ್ಳಲು ಹಾಗೂ ಬ್ಯಾಂಕ್‌ನ ಸಾಲ ಸೌಕರ್ಯಕ್ಕಾಗಿ 3ಎ ಖಾತಾ ನಮೂನೆಯಿಂದ ಅನುಕೂಲವಾಗುತ್ತದೆ.

ಸರ್ಕಾರ ಜನತೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 3/3ಎ ಖಾತಾ ಆಂದೋಲನ ಜಾರಿಗೆ ತಂದಿದ್ದು, ಅರ್ಹ ಫಲಾನುಭವಿಗಳು ಖಾತೆ ಮಾಡಿಸಿಕೊಳ್ಳಲು ಮೂರು ತಿಂಗಳ ಕಾಲಾವಕಾಶ ನೀಡಿದೆ ಎಂದರು.

2024ರ ಸೆಪ್ಟೆಂಬರ್ 10 ರವರೆಗೆ ರಿಜಿಸ್ಟ್ರಾರ್ ಆಗಿರುವ ಖಾತೆಗಳಿಗೆ 3/3ಎ ನಕಲು ವಿತರಿಸಲು ಉದ್ದೇಶಿಸಿದ್ದು, ಪುರಸಭೆ ಅಧಿಕಾರಿಗಳೇ ವಾರ್ಡ್‌ಗಳಿಗೆ ಬೇಟಿ ನೀಡಿ ಸರ್ಕಾರ ನೀಡಿರುವ ಗಡುವಿಗೂ ಮುಂಚಿತವಾಗಿ ಸಮಸ್ಯೆ ಬಗೆಹರಿಸಿ ಎಂದು ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ಜಿಲ್ಲಾ ನಾಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಯೋಗಾನಂದ, ಪುರಸಭಾಧ್ಯಕ್ಷ ಲಾಲಾಪೇಟೆ ಮಂಜುನಾಥ್, ಉಪಾಧ್ಯಕ್ಷೆ ಸುಜಾತಾ ಶಂಕರನಾರಾಯಣ್, ಪುರಸಭೆ ಮುಖ್ಯಾಧಿಕಾರಿ ಸುರೇಶ್ ಸೇರಿದಂತೆ ಪುರಸಭಾ ಸದಸ್ಯರುಗಳು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಈಗಾಗಲೇ ಬೇಸಿಗೆ ಪ್ರಾರಂಭವಾಗಿದ್ದು, ಎಲ್ಲಾ ಬೋರ್‌ವೆಲ್‌ಗಳಲ್ಲೂ ನೀರಿದ್ದು, ಸಾರ್ವಜನಿಕರಿಗೆ ನೀರಿಗೆ ಹಾಹಾಕಾರ ಉಂಟಾಗದಂತೆ ನೋಡಿಕೊಂಡು, ಜನತೆಗೆ ಅನಾನುಕೂಲವಾಗದ ರೀತಿ ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.**

# ಅಶಕ್ತರ ಬದುಕು ಸಶಕ್ತಗೊಳಿಸಲು ಶಿಕ್ಷಣ ಅವಶ್ಯ

• **ಉದಯವಾಹಿನಿ ತುರುವೇಕೆರೆ,**

ನಾವು ಕಲಿತ ಅಕ್ಷರ ನಮ್ಮ ಹಸಿವನ್ನು ನೀಗಿಸಿದರೆ ಸಾಲದು, ಅಶಕ್ತರ ಬದುಕನ್ನು ಸಶಕ್ತಗೊಳಿಸಲು ಬಳಕೆಯಾದಾಗ ಮಾತ್ರ ವಿದ್ಯೆಗೆ ಗೌರವ ಹಾಗೂ ವಿದ್ಯಾವಂತರಾದ ನಮ್ಮ ಬದುಕು ಸಾರ್ಥಕ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಶೇಖರ್ ಹೇಳಿದರು.

ಪಟ್ಟಣದ ಪ್ರಿಯಾ ಆಂಗ್ಲ ಪ್ರೌಢಶಾಲೆಯ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಾಲಾ-ಕಾಲೇಜಿಗೆ ಹೋಗಬೇಕು, ಚೆನ್ನಾಗಿ ಅಧ್ಯಯನ ಮಾಡಿ ಉತ್ತಮ ಅಂಕ ಗಳಿಸಬೇಕು, ನಂತರ ಒಳ್ಳೆಯ ಉದ್ಯೋಗ ಪಡೆದು ಹೆಚ್ಚು ಹಣ ಸಂಪಾದನೆ ಮಾಡಿ ನೆಮ್ಮದಿಯ ಜೀವನ ಸಾಗಿಸಬೇಕೆನ್ನುವುದು ಎಲ್ಲರ ಆಶಯವಾಗಿರುತ್ತದೆ. ಆದರೆ ಇದು ಕೇವಲ ನಮ್ಮ ಬದುಕನ್ನು ಮಾತ್ರ ನೋಡಿಕೊಳ್ಳುವ ಸ್ವಾರ್ಥವಾಗಿರಲಿದೆಯೇ ಹೊರತು ಸಾರ್ಥಕತೆ ಇರುವುದಿಲ್ಲ. ಅದೇ ನಾವು ಕಲಿತ ವಿದ್ಯೆಯಿಂದ ಮತ್ತೊಬ್ಬರ ಬದುಕನ್ನು ಉತ್ತಮಪಡಿಸಲು ಸಾಧ್ಯ. ಅಂತಹ ಕೆಲಸವನ್ನು ನಾವು ಮಾಡಿದಾಗ ಕಲಿತ ವಿದ್ಯೆ ಸಾರ್ಥಕವಾಗುತ್ತದೆ ಎಂದರು.

ನಾಲ್ಕು ಗೋಡೆಗಳ ಮಧ್ಯೆ ಮಕ್ಕಳ ಭವಿಷ್ಯ ರೂಪಿತವಾಗುತ್ತಿರುವ ಸಂದರ್ಭದಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ಶಿಕ್ಷಕರು ಹೆಚ್ಚು ಕಾಳಜಿ ವಹಿಸಬೇಕು. ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ ಶಿಕ್ಷಣ ವ್ಯವಸ್ಥೆಯಲ್ಲಿಯೂ ಹೊಸ ಹೊಸ ಬೋಧನಾ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ಮಕ್ಕಳಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ಬೋಧನೆಯಲ್ಲಿ ಹಳೆಯ ಪದ್ಧತಿಯ ಜೊತೆ ಜೊತೆಗೆ ಹೊಸ ಕ್ರಮಗಳನ್ನು ಅಳವಡಿಸಿಕೊಂಡು ಮಕ್ಕಳನ್ನು ಹೆಚ್ಚು ಜ್ಞಾನವಂತರನ್ನಾಗಿ ಮಾಡುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದ ಅವರು, ಪೋಷಕರು ತಮ್ಮ ಮಕ್ಕಳ ಆಸಕ್ತಿಯ ಬಗ್ಗೆ ಹೆಚ್ಚು ಗಮನಹರಿಸಬೇಕು.



ಉದಯವಾಹಿನಿ ಚಿತ್ರ

**ಆಂಗ್ಲಪ್ರೌಢ ಶಾಲೆಯ ವಾರ್ಷಿಕೋತ್ಸವ**

**ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಅದನ್ನೂ ಪ್ರೋತ್ಸಾಹಿಸುವ ಮೂಲಕ ಪಠ್ಯ, ಪಠ್ಯೇತರ ಚಟುವಟಿಕೆಯಲ್ಲೂ ಯಶಸ್ಸು ಸಾಧಿಸಲು ನೆರವಾಗಬೇಕು. ಸಮಗ್ರ ಕಲಿಕೆ ಶಿಕ್ಷಣದ ಮೂಲ ಆಶಯವಾಗಿರುವ ಕಾರಣ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಅಕ್ಷರ ಜ್ಞಾನದ ಜೊತೆಗೆ ಕಲೆ, ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆ ಸೇರಿದಂತೆ ವಿವಿಧ ಪಠ್ಯೇತರ ಚಟುವಟಿಕೆಗಳ ಕಲಿಕೆ, ಕ್ರೀಡಾ ಆಸಕ್ತಿಯೂ ಪ್ರಮುಖವಾಗಲಿದೆ ಎಂದರು.**

# ಐಟಿ ಹಬ್ ನಿರ್ಮಾಣ: ಬಜೆಟ್‌ನಲ್ಲಿ ಘೋಷಣೆಗೆ ಮನವಿ

• **ಉದಯವಾಹಿನಿ ತುಮಕೂರು**

ಶೈಕ್ಷಣಿಕ ನಗರ ಎಂದು ಪ್ರಸಿದ್ಧಿಯಾಗಿರುವ ತುಮಕೂರು ಜಿಲ್ಲೆಯಲ್ಲಿ ಏಳು ಇಂಜಿನಿಯರಿಂಗ್ ಕಾಲೇಜು, ಮೂರು ಮೆಡಿಕಲ್ ಕಾಲೇಜುಗಳು, ಸುಮಾರು ಐಟಿಐ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು, ತುಮಕೂರು ಯೂನಿವರ್ಸಿಟಿ ಇದ್ದು, ಸುಮಾರು 50 ರಿಂದ 60 ಸಾವಿರ ಜನರು ತುಮಕೂರಿನಿಂದ ಬೆಂಗಳೂರಿಗೆ ವಿವಿಧ ಐಟಿ ಕಂಪೆನಿಗಳಿಗೆ ಕೆಲಸಕ್ಕೆ ಹೋಗುತ್ತಿರುವುದರಿಂದ ತುಮಕೂರಿನಲ್ಲೇ ಐಟಿ ಹಬ್ ನಿರ್ಮಾಣ ಮಾಡುವ ಸಂಬಂಧ ಈ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು ಎಂದು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನಿಕಟಪೂರ್ವ ಅಧ್ಯಕ್ಷ ಟಿ.ಜೆ. ಗಿರೀಶ್ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ತುಮಕೂರು ಪ್ರಮುಖ ಇಪ್ಪತ್ತು ಜಿಲ್ಲೆಗಳಿಗೆ ಹಾದುಹೋಗುವ ಹೆಬ್ಬಾಗಿಲಾಗಿದ್ದು, ಏಷ್ಯಾ ಖಂಡದಲ್ಲಿಯೆ ಅತಿ ದೊಡ್ಡ ಕೈಗಾರಿಕಾ ಪ್ರದೇಶವನ್ನು ಹೊಂದಿರುವ ತುಮಕೂರು ಜಿಲ್ಲೆಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸಬೇಕು ಎಂದು ಕೋರಿದ್ದಾರೆ. ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಕೈಗಾರಿಕಾ ಪ್ರದೇಶಗಳ ಆಸ್ತಿ ತೆರಿಗೆಯನ್ನು ಪ್ರತ್ಯೇಕ ಕೈಗಾರಿಕಾ ವರ್ಗ ಮಾಡಿ ಕಮರ್ಷಿಯಲ್ ಹಾಗೂ ರೆಸಿಡೆನ್ಷಿಯಲ್ ಸ್ಲಾಬ್ ಗಿಂತ ಕಡಿಮೆ ಮಾಡುವ ಬೇಡಿಕೆಯು ಸರ್ಕಾರದ ಮುಂದಿದ್ದು, ಕೆಐಎಡಿಬಿಯಿಂದ ಮಹಾನಗರ ಪಾಲಿಕೆಗೆ ವರ್ಗಾವಣೆ ಮಾಡಿಕೊಂಡು ನಂತರ ಪ್ರತ್ಯೇಕ ಕೈಗಾರಿಕಾ ವರ್ಗ ಮಾಡಿ ಕಮರ್ಷಿಯಲ್ ಹಾಗೂ ರೆಸಿಡೆನ್ಷಿಯಲ್ ಸ್ಲಾಬ್ ಗಿಂತ ಆಸ್ತಿ ತೆರಿಗೆಯನ್ನು ಕಡಿಮೆ ಮಾಡಿ ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಪ್ರದೇಶಗಳ ಆಸ್ತಿಗಳಿಗೆ ನಿಗದಿಪಡಿಸಿರುವ ಆಸ್ತಿ ತೆರಿಗೆಯಂತೆ ನಗರ ಕೈಗಾರಿಕಾ ಪ್ರದೇಶಗಳ ಆಸ್ತಿಗಳಿಗೆ ತೆರಿಗೆಯನ್ನು ನಿಗದಿಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೈಗಾರಿಕಾ ಪ್ರದೇಶಗಳಿಗೆ ಅನುಕೂಲವಾಗುವಂತೆ ಪ್ರಮುಖವಾಗಿ ಕೈಗಾರಿಕಾ ಪ್ರದೇಶಗಳಲ್ಲಿ ಪ್ರತ್ಯೇಕವಾದ ಕೆಐಎಡಿಬಿ ಕಚೇರಿ, ಇಎಸ್‌ಐ ಆಸ್ಪತ್ರೆಯ ನಿರ್ಮಾಣ, ಅಗ್ನಿಶಾಮಕ ಠಾಣೆ, ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿ, ಬೆಸ್ಕಾಂ ಮುಖ್ಯ ಕಚೇರಿ, ಬ್ಯಾಂಕ್‌ಗಳ ಸ್ಥಾಪನೆ ಸೇರಿದಂತೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು ಎಂದು ಮನವಿ ಮಾಡಿದ್ದಾರೆ.



# ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ 8 ಗಂಟೆ ಕಾಲ ಧಗ ಧಗಿಸಿದ ಬೆಂಕಿ

## ಅರಣ್ಯ ಇಲಾಖೆ ವಿಶೇಷ ತಂಡ ಮತ್ತು ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿ ಜಂಟಿ ಸಹಯೋಗದೊಂದಿಗೆ ಕಾರ್ಯಾಚರಣೆ ಆರಂಭ

• **ಉದಯವಾಹಿನಿ ಮೈಸೂರು**

ಚಾಮುಂಡಿಬೆಟ್ಟ ಅರಣ್ಯ ಪ್ರದೇಶದ ಉತ್ತನಹಳ್ಳಿ ಮತ್ತು ಲಲಿತಾದ್ರಿಪುರ ಬಳಿ ಮೂರು ಕಡೆ ಬೆಂಕಿ ಕಾಣಿಸಿಕೊಂಡು ಸುಮಾರು 30 ಎಕರೆ ಪ್ರದೇಶಕ್ಕೆ ವ್ಯಾಪಿಸಿತ್ತು. ಅರಣ್ಯ ಇಲಾಖೆ ಹಾಗೂ ಅಗ್ನಿ ಶಾಮಕ ಸಿಬ್ಬಂದಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಸಂಜೆ ವೇಳೆಗೆ ಬೆಂಕಿಯನ್ನು ನಿಯಂತ್ರಿಸಿದರು.

ಮಧ್ಯಾಹ್ನ 12.30ರ ವೇಳೆಗೆ ದುಷ್ಕರ್ಮಿಗಳು ಉತ್ತನಹಳ್ಳಿ ದೇವಾಲಯಕ್ಕೆ ಹೋಗುವ ರಸ್ತೆ ಬಳಿ ಸೇರಿದಂತೆ ಮೂರು ಕಡೆ ಬೆಂಕಿ ಹೊತ್ತಿಸಿದ್ದಾರೆ. ಬಿಸಿಲಿನ ತಾಪಕ್ಕೆ ಒಣಗಿದ್ದ ಬೆಟ್ಟದ ತಪ್ಪಲಿನ ಕುರುಚಲು ಹುಲ್ಲು, ಗಿಡಗಂಟಿಗಳಿಗೆ ಬೆಂಕಿ ವ್ಯಾಪಿಸಿತು. ಅರಣ್ಯ ಪ್ರದೇಶಕ್ಕೆ ಬೆಂಕಿ ಹೊತ್ತಿಕೊಂಡ ವಿಷಯ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ವಿಶೇಷ ತಂಡ ಮತ್ತು ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿ ಜಂಟಿ ಸಹಯೋಗದೊಂದಿಗೆ ಕಾರ್ಯಾಚರಣೆ ಆರಂಭಿಸಿದರು. 4 ಕ್ಯೂಆರ್‌ವಿ ವಾಹನ, 5 ಟೆಂಡರ್ ವಾಹನ ಸೇರಿದಂತೆ ಒಟ್ಟು 9 ಫೈಯರ್ ಎಂಜಿನ್‌ಗಳನ್ನು ಬೆಂಕಿ ನಂದಿಸುವ ಕಾರ್ಯಕ್ಕೆ ಬಳಸಿಕೊಳ್ಳಲಾಯಿತು. ಒಣಹುಲ್ಲು, ಕಳೆಗಳಲ್ಲಿ ಕಾಣಿಸಿಕೊಂಡು ನೆಲದಲ್ಲಿಯೇ ವಿಸ್ತರಣೆಯಾಗುತ್ತಿದ್ದ ಬೆಂಕಿಯನ್ನು ನಿಯಂತ್ರಿಸಲು ಸಿಬ್ಬಂದಿ ಶ್ರಮಿಸಿದರು. ರಾತ್ರಿ 8ರವರೆಗೂ ನಂದಿಸುವ ಕಾರ್ಯ ಮುಂದುವರಿಯಿತು. ಅಂತಿಮವಾಗಿ ಯಶಸ್ವಿಯಾಗಿ ಬೆಂಕಿಯನ್ನು ಸಂಪೂರ್ಣ ನಿಯಂತ್ರಿಸಲಾಯಿತು. ಮುಂಜಾಗ್ರತಾ ಕ್ರಮವಾಗಿ ಬೆಂಕಿ ಕಾಣಿಸಿಕೊಂಡ ಜಾಗದ ಸುತ್ತಲೂ ನೆಲವನ್ನು ತೇವಾಂಶಗೊಳಿಸಲಾಯಿತು.

ಬೆಂಕಿ ನಿಯಂತ್ರಣ ಕಾರ್ಯ ಯಶಸ್ವಿಯಾಗಿ ನೆರವೇರಿದೆ.

ರಾತ್ರಿ ಕೂಡ ನಿಗಾವಹಿಸಲಾಗುವುದು. ಈ ಬಾರಿ ಬೇಸಿಗೆ ಹೆಚ್ಚು ತೀವ್ರವಾಗಿದೆ.

ಹೀಗಾಗಿ ಸಾರ್ವಜನಿಕರು ಬೆಟ್ಟದ ವ್ಯಾಪ್ತಿಯಲ್ಲಿ ಧೂಮಪಾನ ಮಾಡಿ ಬಿಸಾಡುವುದು ಹಾಗೂ ಇನ್ನಿತರ ಬೆಂಕಿಗೆ ಕಾರಣವಾದ ಚಟುವಟಿಕೆ ಮಾಡಬಾರದು ಎಂದು ಡಿಸಿಎಫ್ ಕೆ.ಎನ್. ಬಸವ ರಾಜು ಮನವಿ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ಕಾಡ್ಗಿಚ್ಚಿಗೆ 30 ಎಕರೆ ಅರಣ್ಯ ನಾಶ**



- ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಬೆಂಕಿ
- ಸುಮಾರು 30 ಎಕರೆ ಅರಣ್ಯ ಪ್ರದೇಶಕ್ಕೆ ವ್ಯಾಪಿಸಿದ ಜ್ವಾಲೆ
- ಏಳು ಗಂಟೆಗೂ ಹೆಚ್ಚು ಕಾಲ ನಡೆದ ನಂದಿಸುವ ಕಾರ್ಯ
- ಅರಣ್ಯ ಇಲಾಖೆ, ಅಗ್ನಿಶಾಮಕ ದಳ ಸಹಯೋಗದಲ್ಲಿ ಯಶಸ್ವಿ ಕಾರ್ಯಾಚರಣೆ

### ಅರಣ್ಯ ಇಲಾಖೆಗೆ ತಂತ್ರಜ್ಞಾನದ ನೆರವು

**ಕಾಡ್ಗಿಚ್ಚು ಬಗ್ಗೆ ತಕ್ಷಣ ಮಾಹಿತಿ ಸಿಕ್ಕರೆ ಬೆಂಕಿ ನಂದಿಸಲು ಹಾಗೂ ಕಾಡು ರಕ್ಷಣೆ ಮಾಡಲು ಸಾಧ್ಯ. ಹೀಗಾಗಿ ಇದೀಗ ಅರಣ್ಯ ಇಲಾಖೆ ತಂತ್ರಜ್ಞಾನದ ನೆರವನ್ನೂ ಪಡೆದುಕೊಳ್ಳುತ್ತಿದೆ. ಉಪಗ್ರಹಗಳ ಮೂಲಕ ಕಾಡ್ಗಿಚ್ಚಿನ ಮೇಲೆ ನಿಗಾ ವಹಿಸುತ್ತಿವೆ. ಅರಣ್ಯ ಪ್ರದೇಶದಲ್ಲಿ ಬೆಂಕಿ ಬಿದ್ದಿರುವುದು ಪತ್ತೆಯಾದ ತಕ್ಷಣ, ಸ್ಥಳದ ನಿಖರ ಮಾಹಿತಿ, ಜಿಪಿಎಸ್ ಲೊಕೇಶನ್ ಅನ್ನು ಇವು ಹೈದರಾಬಾದ್‌ನಲ್ಲಿನ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್‌ಗೆ ಕಳುಹಿಸುತ್ತವೆ. ಅಲ್ಲಿಂದ ಮಾಹಿತಿ ಫಾರೆಸ್ಟ್ ಸರ್ವೆ ಆಫ್ ಇಂಡಿಯಾ (ಎಫ್‌ಎಸ್‌ಐ) ಹಾಗೂ ರಾಜ್ಯದ ದೂರ ಸಂವೇದಿ ಅನ್ವಯಿಕ ಕೇಂದ್ರ (ಕಾರ್‌ಸಾಕ್)ಕ್ಕೆ ತಲುಪುತ್ತದೆ. ಈ ಮಾಹಿತಿಯನ್ನು ಸ್ಥಳೀಯ ಅರಣ್ಯ ಇಲಾಖೆ ಕಚೇರಿಗೆ ನೀಡಿ ಕಾಡ್ಗಿಚ್ಚನ್ನು ನಿಯಂತ್ರಿಸುವ ಜತೆಗೆ, ಇತರೆಡೆಗೆ ಹಬ್ಬುವುದನ್ನು ತಡೆಯುವ ಕೆಲಸ ಮಾಡಲಾಗುತ್ತದೆ.**

# ಮಿನಿ ನ್ಯೂಸ್

## ತುಮಕೂರು 10ನೇ ತರಗತಿ ವಿದ್ಯಾರ್ಥಿ ಹೃದಯಾಘಾತಕ್ಕೆ ಬಲಿ

• **ಉದಯವಾಹಿನಿ ತುಮಕೂರು**

10ನೇ ತರಗತಿ ವಿದ್ಯಾರ್ಥಿಯೋರ್ವ ಹೃದಯಾಘಾತಕ್ಕೆ ಬಲಿಯಾದ ಘಟನೆ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಭೈರಾಪುರ ಗ್ರಾಮದಲ್ಲಿ ನಡೆದಿದೆ. ರಾಹುಲ್ (16) ಮೃತ ವಿದ್ಯಾರ್ಥಿ. ಭೈರಾಪುರ ಗ್ರಾಮದ ಜಯರಾಂ ಪುತ್ರ ರಾಹುಲ್ ಚಿಕ್ಕನಾಯಕನಹಳ್ಳಿ ಪಟ್ಟಣದ ಜಿಎಚ್‌ಎಸ್‌ನಲ್ಲಿ ಹತ್ತನೇ ತರಗತಿ ಓದುತ್ತಿದ್ದ. ಶಾಲೆಗೆ ಹೋಗಿ ಮನೆಗೆ ವಾಪಸ್ ಬಂದಿದ್ದ ರಾಹುಲ್‌ಗೆ ರಾತ್ರಿ 9:30ರ ಸುಮಾರಿಗೆ ಎದೆನೋವು ಕಾಣಿಸಿಕೊಂಡಿದೆ

## ಸರ್ಕಾರಿ ನೌಕರಿ ಕೊಡಿಸುತ್ತೇನೆಂದು ಕೋಟಿ ಕೋಟಿ ವಂಚನೆ

• **ಉದಯವಾಹಿನಿ ಮಂಡ್ಯ**

ಸರ್ಕಾರಿ ಕೆಲಸ ಪಡೆಯಬೇಕು ಎಂದರೆ ಅರ್ಹತೆ ಜೊತೆಗೆ ಪರೀಕ್ಷೆಯಲ್ಲಿ ಪಾಸ್ ಆಗಬೇಕು. ಆದರೆ ಇಲ್ಲೊಬ್ಬ ನೀವು ಲಕ್ಷ ಲಕ್ಷ ಹಣ ಕೊಡಿ ಸಾಕು, ನಿಮ್ಮ ಮಕ್ಕಳಿಗೆ ಸರ್ಕಾರಿ ಕೆಲಸ ಕೊಡಿಸುತ್ತೇನೆ ಎಂದು ಕೋಟಿ ಕೋಟಿ ರೂ. ವಂಚನೆ ಮಾಡಿರೋದು ಮಂಡ್ಯದಲ್ಲಿ) ಬೆಳಕಿಗೆ ಬಂದಿದೆ. ಮಂಡ್ಯ ನಗರದ ತಾವರೆಗೆರೆ ನಿವಾಸಿ ಹೆಚ್.ಸಿ.ವೆಂಕಟೇಶ್ ವಂಚಿಸಿದ ವ್ಯಕ್ತಿ. ತಾನೊಬ್ಬ ದೊಡ್ಡ ಅಧಿಕಾರಿ ಎಂದು ಬಿಂಬಿಸಿಕೊಂಡು ನಿಮ್ಮ ಮಕ್ಕಳಿಗೆ, ನಿಮ್ಮ ಹೆಂಡತಿಗೆ ಸರ್ಕಾರಿ ಕೆಲಸ ಕೊಡಿಸುತ್ತೇನೆ ಎಂದು ಲಕ್ಷ ಲಕ್ಷ ಪೀಕಿ ವಂಚಿಸೋದು ಈತನ ಕೆಲಸ. ವಿಧಾನಸೌಧದಲ್ಲಿ ಅಧಿಕಾರಿಯಾಗಿದ್ದೇನೆ ಎಂದು ಬಿಲ್ಡಪ್ ಕೊಟ್ಟು ಈ ಭೂಪ ಮಂಡ್ಯದ ಹಲವರಿಗೆ ವಂಚಿಸಿದ್ದಾನೆ. ವೆಂಕಟೇಶ್ ತಾವರಗೆರೆಯ ಗಾಯತ್ರಿ ಎಂಬವರಿಗೆ ನಿಮ್ಮ ಮೂವರು ಮಕ್ಕಳಿಗೆ ಅಬಕಾರಿ ಇಲಾಖೆಯಲ್ಲಿ ಡ್ರೈವರ್ ಕೆಲಸ ಕೊಡಿಸುತ್ತೇನೆ. ತಲಾ ಒಬ್ಬರಿಗೆ 6 ಲಕ್ಷದಂತೆ 18 ಲಕ್ಷ ಕೊಡಿ ಎಂದಿದ್ದ. ಇದನ್ನು ನಂಬಿದ್ದ ಗಾಯತ್ರಿ 14 ಲಕ್ಷ ಹಣವನ್ನ ಹಂತ-ಹಂತವಾಗಿ ನೀಡಿದ್ದರು. ಆದರೆ ಹಣ ಕೊಟ್ಟು ಒಂದೂವರೆ ವರ್ಷ ಕಳೆದರೂ ಕೆಲಸ ಸಿಕ್ಕಿಲ್ಲ. ಕೊಟ್ಟಿದ್ದ ಹಣವೂ ವಾಪಸ್ ಸಿಗಲಿಲ್ಲ. ಇದರಿಂದ ಕಂಗಾಲಾದ ಗಾಯತ್ರಿ, ಹಣ ಕೊಟ್ಟ ದಾಖಲೆ ಸಮೇತ ಮಂಡ್ಯ ಪೂರ್ವ ಠಾಣೆಗೆ ದೂರು ನೀಡಿದ್ದರು. ಅದರ ಬೆನ್ನಲ್ಲೇ ಮಲ್ಲೇಶ್ ಎಂಬವರಿಂದ ಹೆಂಡತಿಗೆ ಕೆಲಸ ಕೊಡಿಸುವುದಾಗಿ 19 ಲಕ್ಷ ಹಾಗೂ ನೇತ್ರಾವತಿ ಎಂಬವರ ಪುತ್ರನಿಗೆ ನೌಕರಿ ಕೊಡಿಸುವುದಾಗಿ 18 ಲಕ್ಷ ಹಣ ಪಡೆದು ವಂಚಿಸಿರುವ ಬಗ್ಗೆ ದೂರು ದಾಖಲಾಗಿದೆ. ಪೊಲೀಸರು ತನಿಖೆ ಚುರುಕುಗೊಳಿಸಿದ್ದೇ ತಡ ಈತನ ವಂಚನೆ ಪುರಾಣ ಒಂದೊಂದೇ ಬೆಳಕಿಗೆ ಬಂದಿದೆ.

## ಲೋಕಾಯುಕ್ತವನ್ನು ನುಂಗಿ ನೀರು ಕುಡಿದವರು ಸಿಎಂ, ಹಾಗಾಗಿ ಕ್ಲೀನ್‌ಚಿಟ್ ಸಿಕ್ಕಿದೆ

• **ಉದಯವಾಹಿನಿ ಕೋಲಾರ**

ಸಿಎಂ ಸಿದ್ದರಾಮಯ್ಯಗೆ ಕ್ಲೀನ್ ಚಿಟ್ ಎಂದರೆ ಏನು ಅರ್ಥ, 14 ನಿವೇಶನ ವಾಪಸ್ ಕೊಡಲ್ಲ ಎಂದವರು ಪುನಃ ಕೊಟ್ಟಿದ್ದಾರೆ. ಕ್ಲೀನ್ ಚಿಟ್ ಬಂದಿದ್ದೇ ತಡ ಸಿಎಂ ಫುಲ್ ಖುಷಿಯಾಗಿದ್ದು, ಸಿದ್ದರಾಮಯ್ಯ ತಪ್ಪುಗಳ ಮೇಲೆ ತಪ್ಪು ಮಾಡುತ್ತಲೇ ಇದ್ದಾರೆ' ಎಂದು ಮಾಜಿ ಸಂಸದ ಮುನಿಸ್ವಾಮಿ ಕಿಡಿಕಾರಿದರು. ಕೋಲಾರ ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬಿಜೆಪಿ - ಜೆಡಿಎಸ್ ಜಂಟಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಮಾಜಿ ಸಂಸದ ಮುನಿಸ್ವಾಮಿ ಅವರು, ಲೋಕಾಯುಕ್ತವನ್ನು ನುಂಗಿ ನೀರು ಕುಡಿದವರು ಸಿದ್ದರಾಮಯ್ಯನವರು. ಹಾಗಾಗಿಯೇ ತಪ್ಪು ಮಾಡಿದ್ದರೂ ಅವರಿಗೆ ಕ್ಲೀನ್ ಚಿಟ್ ಕೊಡಲಾಗಿದೆ. ಸಿದ್ದರಾಮಯ್ಯನವರು ಅವರಿಗೆ ಬೇಕಾದವರನ್ನು ಹಾಕಿಕೊಂಡು ತಪ್ಪು ಮಾಡಿದ್ದಾರೆ. ಸಂಬಂಧಿಕರಿಗೆ ಸೈಟ್ ಗಳನ್ನು ಕೊಟ್ಟಿದ್ದಾರೆ. ನಮಗೊಂದು ಕಾನೂನು ಸಿದ್ದರಾಮಯ್ಯ ಅವರಿಗೆ ಒಂದು ಕಾನೂನಾ ಎಂದು ಪ್ರಶ್ನಿಸಿದರು. ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ಸಿಗುತ್ತೆ ಎಂದು, ಈ ಪ್ರಕರಣ ಹೀಗೇ ಆಗುತ್ತೆ ಎಂದು ನಮ್ಮ ನಾಯಕರು ಮೊದಲೇ ಹೇಳಿದ್ದರು. ತಮ್ಮ ಮೇಲೆ ಆರೋಪ ಬಂದ ತಕ್ಷಣ ಈಶ್ವರಪ್ಪ ರಾಜೀನಾಮೆ ಕೊಟ್ಟರು. ಅದರಂತೆ ಸಿದ್ದರಾಮಯ್ಯ ಅವರೂ ಸಹ ರಾಜೀನಾಮೆ ಕೊಡಬೇಕಿತ್ತು. ಅವರು ತಪ್ಪು ಮಾಡಿಲ್ಲ ಅಂದ ಮೇಲೆ ಸೈಟ್‌ಗಳನ್ನು ವಾಪಸ್ ಏಕೆ ಕೊಡಬೇಕಿತ್ತು. 14 ಸೈಟ್ ಗಳನ್ನು ಅಕ್ರಮವಾಗಿ ಪಡೆದಿರುವ ಇವರಿಗೆ ಸಂವಿಧಾನದ ಪ್ರಕಾರ ಶಿಕ್ಷೆ ಆಗಲೇಬೇಕು ಎಂದು ಒತ್ತಾಯಿಸಿದರು.

## ಕಾರ್ಖಾನೆ ಮುಚ್ಚದಂತೆ ಒತ್ತಾಯಿಸಿ ಪ್ರತಿಭಟನೆ

• **ಉದಯವಾಹಿನಿ ಮೈಸೂರು**

ಲಾಭದಲ್ಲಿ ನಡೆಯುತ್ತಿರುವ ಬಂಚಳ್ಳಿಹುಂಡಿಯ ಗ್ರಾಮೋಕ್ಸ್ ಪೇಪರ್ ಅಂಡ್ ಬೋರ್ಡ್ಸ್ ಕಂಪನಿಯನ್ನು ಆಡಳಿತ ವರ್ಗದವರು ದುರುದ್ದೇಶದಿಂದ ಏಕಾಏಕಿ ಮುಚ್ಚಿದ್ದು, ಕಂದಾಯ ಇಲಾಖೆ ಕಾರ್ಮಿಕರಿಗೆ ಸೂಕ್ತ ಪರಿಹಾರ ಸಿಗುವವರೆಗೂ ಮುಚ್ಚಲು ಅವಕಾಶ ನೀಡಬಾರದೆಂದು ಒತ್ತಾಯಿಸಿ ಕಾರ್ಖಾನೆ ನೌಕರರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ಕಾರ್ಖಾನೆಯಲ್ಲಿ ಸುಮಾರು 120ಕ್ಕೂ ಹೆಚ್ಚು ಖಾಯಂ ನೌಕರರು, 175 ಗುತ್ತಿಗೆ ಕಾರ್ಮಿಕರು 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗುತ್ತಿಗೆ ಕಾರ್ಮಿಕರಿಗೆ ಸರಿಯಾಗಿ ಭವಿಷ್ಯನಿಧಿ ವಂತಿಗೆ, ಕಳೆದ 20 ವರ್ಷಗಳಿಂದ ಬೋನಸ್ ಪಾವತಿ ಮಾಡಿಲ್ಲ. ಕಂಪನಿ 20 ವರ್ಷಗಳಿಂದಲೂ ಉತ್ತಮ ಲಾಭಗಳಿಸುತ್ತಾ ಬಂದಿದ್ದರೂ ಕನಿಷ್ಠ ಸೌಲಭ್ಯವನ್ನೂ ನೀಡದೆ ಬಾಕಿ ಉಳಿಸಿಕೊಂಡಿದ್ದಾರೆ. ಕಂಪನಿ ನಡೆಸಲು ಎಲ್ಲಾ ಸಾಧ್ಯತೆಗಳು ಇದ್ದಾಗಲೂ ಸಾರಿಗೆ ವೆಚ್ಚ ಹೆಚ್ಚಾಗಿದೆ ಎಂಬ ನೆಪ ಹೇಳಿ ಕಾರ್ಮಿಕರಿಗೆ ಅತ್ಯಲ್ಪ ಪರಿಹಾರ ನೀಡಿ ವಜಾಗೊಳಿಸುವ ತಂತ್ರ ಹೂಡಿದ್ದಾರೆ ಎಂದು ಆರೋಪಿಸಿದರು. ಕಂಪನಿ ಇದುವರೆಗೂ ಯಾವುದೇ ಸಾಲ ಮಾಡಿಲ್ಲ. ಕಂಪನಿಯ ಒಟ್ಟು ಆಸ್ತಿ 150 ಕೋಟಿಗೂ ಹೆಚ್ಚು ಬೆಲೆ ಬಾಳುತ್ತದೆ. ಆಡಳಿತ ವರ್ಗದವರು ಕಂಪನಿ ಮುಚ್ಚಿ ಕಾರ್ಮಿಕರಿಗೆ ಪರಿಹಾರವಿಲ್ಲದೇ ವಜಾಗೊಳಿಸಿ ಬೇರೆ ಹೆಸರಿನಲ್ಲಿ ಪ್ರಾರಂಭ ಮಾಡುವ ಉದ್ದೇಶ ಹೊಂದಿದ್ದಾರೆ. ಹೀಗಾಗಿ ಕಾರ್ಮಿಕರಿಗೆ ಸೂಕ್ತ ಪರಿಹಾರ ಹಾಗೂ ಮುಂದೆ ಬರುವ ಕಂಪನಿಯಲ್ಲಿ ಕೆಲಸ ಮುಂದುವರೆಸುವ ಲಿಖಿತ ಭರವಸೆ ಸಿಗದ ಹೊರತು ಕಾರ್ಖಾನೆಗೆ ಸಂಬಂಧಿಸಿದ ಆಸ್ತಿಯ ವಿಷಯದಲ್ಲಿ ಯಾವುದೇ ರೀತಿ ಖಾತಾ ವರ್ಗಾವಣೆ, ತಿದ್ದುಪಡಿ, ವಿಂಗಡಣೆಗಳಿಗೆ ಅವಕಾಶ ನೀಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಕಾರ್ಖಾನೆಯ ಆ ಡಳಿತ ವರ್ಗ ನಮ್ಮ ಸಂಘದೊಂದಿಗೆ ಹೆಚ್ಚಿನ ಪರಿಹಾರದ ಕುರಿತು ಚರ್ಚಿಸಲು ಸಭೆ ಕರೆಯಬೇಕೆಂದು ಆಗ್ರಹಿಸಿದರು.

ಅಂತರಾಳದಿಂದ... EDITORIAL

# ಬಿಜೆಪಿ ವರಿಷ್ಠರೇ ಸಾಕಿರುವ ಹದ್ದು

ರಾಜ್ಯಾಧ್ಯಕ್ಷರ ಚುನಾವಣೆ ನಡೆಸುವ ಮೂಲಕ ಭಿನ್ನಮತ ಪರಿಹಾರವಾಗುತ್ತದೆ ಎನ್ನುವ ಬಿಜೆಪಿ ವರಿಷ್ಠರ ನಂಬಿಕೆ ಹುಸಿಯಾಗಿದೆ ವರಿಷ್ಠರು ರಾಜ್ಯದಲ್ಲಿ ನಡೆಸುತ್ತಿರುವ ಚುನಾವಣೆಗಳ ಮೇಲೆಯೇ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ನಿಯಂತ್ರಣ ಸಾಧಿಸಿದ್ದಾರೆ. ಈ ಚುನಾವಣೆಯ ಮೇಲೆ ನಂಬಿಕೆಯಿಲ್ಲ ಎನ್ನುವ ಮೂಲಕ ವರಿಷ್ಠರಿಗೆ ಯತ್ನಾಳ್ ಮತ್ತೊಮ್ಮೆ ಸೆಡ್ಡು ಹೊಡೆದಿದ್ದಾರೆ ಮಾತ್ರವಲ್ಲ, ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಸ್ಪರ್ಧೆಯಿಂದ ಸಂಪೂರ್ಣ ಹಿಂದೆ ಸರಿದಿದೆ. ಇದರ ಅರ್ಥ. ವಿಜಯೇಂದ್ರ ಅವರ ನಾಯಕತ್ವವನ್ನು ಯತ್ನಾಳ್ ಬಣ ಅವಿರೋಧವಾಗಿ ಒಪ್ಪಿಕೊಂಡಿದೆ ಎಂದಲ್ಲ, ಚುನಾವಣೆಯ ಪ್ರಕ್ರಿಯೆಯ ಬಗ್ಗೆಯೇ ಅವರು ನಂಬಿಕೆಯನ್ನು ಹೊಂದಿಲ್ಲ. ಹಾಗಾದರೆ ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆಯ ಬಗೆಯಾದರೂ ಹೇಗೆ? ಎನ್ನುವುದರ ಬಗ್ಗೆ ಯತ್ನಾಳ್ ಗುಂಪಿನ ಬಳಿ ಪರಿಹಾರವಿಲ್ಲ ಅವರ ಒಂದೇ ಅಜೆಂಡಾ 'ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಿಸಬೇಕು. ಚುನಾವಣೆ ನಡೆಸಿದರೆ ಅವರೇ ಮರು ಆಯ್ಕೆಯಾಗುವ ಸಾಧ್ಯತೆಗಳಿರುವ ಕಾರಣದಿಂದ ವರಿಷ್ಠರೇ ನೇರವಾಗಿ ಹಸ್ತಕ್ಷೇಪ ನಡೆಸಿ, ಸೂಕ್ತ ಅಭ್ಯರ್ಥಿಯನ್ನು ಗುರುತಿಸಿ ರಾಜ್ಯಾಧ್ಯಕ್ಷರನ್ನಾಗಿ ಮಾಡಬೇಕು ಎನ್ನುವುದು ಇಂಗಿತವಾಗಿದೆ. ಅಂದರೆ ಚುನಾವಣೆ ನಡೆಯುವ ಮೊದಲೇ ಯತ್ನಾಳ್ ಗುಂಪು ಸೋಲನ್ನೊಪ್ಪಿಕೊಂಡಿದೆ. ಚುನಾವಣೆ ನಡೆದರೆ ಗೆಲುವು ತನ್ನದೇ ಎನ್ನುವುದು ಸ್ಪಷ್ಟವಿರುವಾಗ, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಇನ್ನೊಬ್ಬನನ್ನು ಅಯ್ಕೆ ಮಾಡುವುದನ್ನು ವಿಜಯೇಂದ್ರ ಒಪ್ಪಿಕೊಳ್ಳುವುದು ಸಾಧ್ಯವಿಲ್ಲದ ಮಾತು. ರಾಜ್ಯ ಬಿಜೆಪಿಯ ಸಮಸ್ಯೆ ಒಂದಿಂಚು ಸರಿದಿಲ್ಲ. ಅದನ್ನು ಪರಿಹರಿಸುವಲ್ಲಿ ವರಿಷ್ಠರು ಸಂಪೂರ್ಣ ವಿಫಲರಾಗಿರುವುದು ಮೇಲ್ನೋಟಕ್ಕೆ ಗೊತ್ತಾಗಿ ಬಿಡುತ್ತದೆ. ಯತ್ನಾಳ್ ಅವರಿಗೆ ನೀಡಿರುವ ನೋಟಿಸ್ ಈಗ ಚರ್ಚೆಯಲ್ಲಿದೆ. 'ನನಗೆ ನೋಟಿಸ್ ಬರುವ ಮೊದಲೇ ಮಾಧ್ಯಮಗಳಿಗೆ ಅದನ್ನು ಬಿಡುಗಡೆ ಮಾಡಿದ್ದು ಯಾರು ವಿಜಯೇಂದ್ರ ಇಂತಹ ಕುಲಗೆಟ್ಟ ಕೆಲಸ ಬಿಡಬೇಕು. ಈಗಿನ ನೋಟಿಸ್ ಬಗ್ಗೆ ನಾನು ಏನೂ ಹೇಳುವುದಿಲ್ಲ, ಮಾಧ್ಯಮಗಳಿಗೆ ಈಗಿನ ನೋಟಿಸ್ ವಿಚಾರ ಸೋರಿಕೆ ಮಾಡಿದ್ದೇ ಅವನು' ಎಂದು ಏಕ ವಚನದಲ್ಲಿ ಯತ್ನಾಳ್ ಆರೋಪ ಮಾಡಿದ್ದಾರೆ. ನೋಟಿಸ್‌ಗೆ ಸ್ಪಷ್ಟಿಕರಣ ನೀಡಿ ತನ್ನ ಮೇಲಿರುವ ಆರೋಪಗಳನ್ನು ನಿರಾಕರಿಸುವ ಬದಲು, ನೋಟಿಸ್‌ಗೆ ಪ್ರತಿ ಸವಾಲು ಹಾಕುವಂತೆ ಅವರು ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಮೇಲೆ ಪ್ರತಿ ದಾಳಿ ನಡೆಸಿದ್ದಾರೆ. ಇದೇ ಸಂದರ್ಭದಲ್ಲಿ ಕುಮಾರ ಬಂಗಾರಪ್ಪ ನಿವಾಸದಲ್ಲಿ ನಡೆದ ಸಭೆಯಲ್ಲಿ ವರಿಷ್ಠರ ತೀರ್ಮಾನಕ್ಕೆ ಬದ್ಧರಾಗುವ ನಿರ್ಣಯವನ್ನೂ ಕೈಗೊಂಡಿದ್ದಾರೆ. ವರಿಷ್ಠರ ನಿರ್ಧಾರಕ್ಕೆ ಯತ್ನಾಳ್ ಬಣ ಬದ್ಧರಾಗಿರುವುದು ನಿಜವೇ ಆಗಿದ್ದರೆ, ವಿಜಯೇಂದ್ರ ವಿರುದ್ಧದ ದಾಳಿಯನ್ನು ಮುಂದುವರಿಸಿರುವುದು ಯಾಕೆ? ಎನ್ನುವ ಪ್ರಶ್ನೆ ಎದುರಾಗುತ್ತದೆ. ವಿಜಯೇಂದ್ರ ವಿರುದ್ಧ ನಡೆಸುತ್ತಿರುವ ದಾಳಿ, ವರಿಷ್ಠರ ನಿರ್ಧಾರದ ಅನುಸಾರವಾಗಿ ನಡೆಯುತ್ತಿದೆಯೇ ಎನ್ನುವ ಅನುಮಾನ ಪಕ್ಷದೊಳಗಿರುವ ಕಾರ್ಯಕರ್ತರನ್ನು ಕಾಡುವುದು ಕೂಡ ಸಹಜವೇ ಆಗಿದೆ. ವರಿಷ್ಠರು ನೋಟಿಸ್‌ಗಳನ್ನು ನೀಡಿದಂತೆ ಮಾಡುವುದು ಮತ್ತು ಯತ್ನಾಳ್ ಅದಕ್ಕೆ ಉತ್ತರಿಸಿದಂತೆ ಮಾಡುವುದು ಮುಂದುವರಿದಿದೆ. ಈಗಾಗಲೇ ರಾಜ್ಯಾಧ್ಯಕ್ಷರನ್ನು ಹೊರಗಿಟ್ಟು ವಕ್ಫ್ ವಿರುದ್ಧ ಹೋರಾಟ ನಡೆಸಿದ್ದ ಯತ್ನಾಳ್ ಗುಂಪು, ಮುಂದಿನ ದಿನಗಳಲ್ಲಿ ಬಾಂಗ್ಲಾ ನುಸುಳುಕೋರರ ವಿರುದ್ಧ ಹೋರಾಡುವ ಸೂಚನೆಯನ್ನು ನೀಡಿದೆ. ವಕ್ಫ್ ವಿರುದ್ಧ ಹೋರಾಟ, ಬಾಂಗ್ಲಾ ನುಸುಳುಕೋರರ ವಿರುದ್ಧ ಹೋರಾಟ ಇವೆಲ್ಲ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲ. ಆರ್‌ಎಸ್‌ಎಸ್‌ಗೆ ಇಷ್ಟವಾದ ದ್ವೇಷ ರಾಜಕಾರಣಕ್ಕೆ ತುಪ್ಪ ಸುರಿಯಬಲ್ಲ ವಿಷಯಗಳಿವು. ಸಾರ್ವಜನಿಕ ಸಮಾವೇಶಗಳಲ್ಲಿ ಅತ್ಯಂತ ಅವಿವೇಕಿಯಂತೆ ಭಾಷಣ ಮಾಡುತ್ತಾ ನಾಡನ್ನು ತನ್ನ ವಿಭಜನೆಯ ರಾಜಕೀಯಕ್ಕೆ ಬಲಿಕೊಡಲು ತುದಿಗಾಲಲ್ಲಿ ನಿಂತಿರುವ ಯತ್ನಾಳ್ ಲಿಂಗಾಯತನಾದರೂ, ಆರ್‌ಎಸ್‌ಎಸ್ ಜೀತಕ್ಕೆ ಬಸವಣ್ಣರನ್ನೂ ತಲೆದಂಡ ನೀಡಲು ಹೇಸದವರು. ಆರ್‌ಎಸ್‌ಎಸ್ ಮತ್ತು ಬಿಜೆಪಿಯೊಳಗಿರುವ ಒಂದು ಗುಂಪಿಗೆ ಯತ್ನಾಳ್ ಉಪಸ್ಥಿತಿ ಅತ್ಯಗತ್ಯವಾಗಿ ಬೇಕಾಗಿದೆ. ಅವರು ಯತ್ನಾಳರನ್ನು ಬಹಿರಂಗವಾಗಿ ಬೆಂಬಲಿಸದಿದ್ದರೂ, ಅವರ ಪುಂಡಾಟಗಳಿಗೆ ಹಿಂದಿನಿಂದ ಕುಮ್ಮಕ್ಕು ನೀಡುತ್ತಿರುವುದು ಯಡಿಯೂರಪ್ಪ ಅವರಿಗೂ ಸ್ಪಷ್ಟವಾಗಿಯೇ ಗೊತ್ತಿದೆ. ನಿಜಕ್ಕೂ ಯತ್ನಾಳ್ ಅವರನ್ನು ಬಾಯಿ ಮುಚ್ಚಿಸುವ ಉದ್ದೇಶ ವರಿಷ್ಠರಿಗಿದ್ದರೆ, ಯಾವತ್ತೋ ಕೆಲಸ ಆಗಿ ಬಿಡುತ್ತಿತ್ತು ಯಡಿಯೂರಪ್ಪ ಬಣದ ನಿಯಂತ್ರಣದಿಂದ ಬಿಜೆಪಿಯನ್ನು ಬಿಡಿಸಿಕೊಳ್ಳುವುದು ವರಿಷ್ಠರಿಗೂ ಬೇಕಾಗಿದೆ. ಆದರೆ ಅದನ್ನು ಬಹಿರಂಗವಾಗಿ ಜಾರಿಗೆ ತರುವ ಧೈರ್ಯವಿಲ್ಲ ಈ ಕಾರಣದಿಂದಲೇ ಯತ್ನಾಳ್‌ರಂತಹ ಲಿಂಗಾಯತರು, ಈಶ್ವರಪ್ಪರಂತಹ ಕುರುಬ ಸಮುದಾಯದ ನಾಯಕರನ್ನು ಮುಂದಕ್ಕಿಟ್ಟು ತಾನು ಮಾತ್ರ ಅಮಾಯಕನಂತೆ ಅಭಿನಯಿಸುತ್ತಿದ್ದಾರೆ. ಆದುದರಿಂದಲೇ, ಯತ್ನಾಳ್‌ರ ಬಾಯಿ ಮುಚ್ಚಿಸುವುದಕ್ಕೆ ವರಿಷ್ಠರ ನೋಟಿಸ್‌ಗಳಿಗೆ ಸಾಧ್ಯವಾಗುತ್ತಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಅವರು ಅಧಿಕೃತವಾಗಿ ಆಯ್ಕೆಯಾದರೆ ವರಿಷ್ಠರು ಯತ್ನಾಳ್ ವಿರುದ್ಧ ಒಂದು ಸ್ಪಷ್ಟ ನಿರ್ಧಾರಕ್ಕೆ ಬರಲೇ ಬೇಕಾಗುತ್ತದೆ. ಯಾಕೆಂದರೆ, 'ಮೌನ ನನ್ನ ದೌರ್ಬಲ್ಯವಲ್ಲ ಎಂದು ಈಗಾಗಲೇ ವಿಜಯೇಂದ್ರ ಅವರು ಸ್ಪಷ್ಟಪಡಿಸಿದ್ದಾರೆ. ಯತ್ನಾಳ್ ಮಾತನಾಡಿದ್ದನ್ನೆಲ್ಲ ಪಟ್ಟಿ ಮಾಡಿಟ್ಟುಕೊಂಡು ಒಂದೇ ಬಾರಿ ಉತ್ತರಿಸುವೆ ಎಂದು ಅವರು ಎಚ್ಚರಿಸಿದ್ದಾರೆ. ಎಚ್ಚರಿಕೆ ಬರೇ ಯತ್ನಾಳ್ ಅವರಿಗೆ ಮಾತ್ರವಲ್ಲ. ಕೇಂದ್ರದ ವರಿಷ್ಠರಿಗೂ ರಾಜ್ಯದ ಆರ್‌ಎಸ್‌ಎಸ್‌ಮುಖಂಡರಿಗೂ ಅವರು ನೀಡಿರುವ ಪರೋಕ್ಷ ಬೆದರಿಕೆಯಾಗಿದೆ. ಯತ್ನಾಳ್ ಬಾಯಿ ಮುಚ್ಚಿಸದಿದ್ದರೆ ನಾನು ಬಾಯಿ ತೆರೆಯಬೇಕಾಗುತ್ತದೆ ಎನ್ನುವ ಸೂಚನೆ ಅದರಲ್ಲಿದೆ. ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬಳಿಕವೂ ಯತ್ನಾಳ್ ಹಳ ಚಾಳಿಯನ್ನು ಮುಂದುವರಿಸಿದರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇರುವ ಯಾವುದೇ ಕಾರಣಗಳು ವರಿಷ್ಠರ ಬಳಿ ಇರುವುದಿಲ್ಲ. ತನ್ನ ಸ್ಥಾನ ಉಳಿಸಿಕೊಳ್ಳಲು ಗರಿಷ್ಟ ಮೌನವನ್ನು ವಿಜಯೇಂದ್ರ ಪಾಲಿಸಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

> **ಇದೊಂದು ರೀತಿಯಲ್ಲಿ ''ನಾವು ಹೊಡೆದಂತೆ ಮಾಡುತ್ತೇವೆ, ನೀನು ಅತ್ತಂತೆ ಮಾಡು ಎಂಬ ಗಾದೆಯಂತಾಗಿದೆ. ನಿಜಕ್ಕೂ ವರಿಷ್ಠರಿಗೆ ಯತ್ನಾಳ್‌ರ ಬಾಯಿ ಮುಚ್ಚಿಸುವ ಉದ್ದೇಶ ಇದೆಯೆ ಅಥವಾ ನಟನೆಯನ್ನಷ್ಟೇ ಮಾಡುತ್ತಿದ್ದಾರೆಯೆ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಅವರು ಆಯ್ಕೆಯಾದ ಬಳಿಕವೂ, ತಮ್ಮ ಪ್ರತ್ಯೇಕ ಹೋರಾಟವನ್ನು ಕೈಬಿಡುವುದಿಲ್ಲ ಎನ್ನುವ ಸೂಚನೆಯನ್ನು ಯತ್ನಾಳ್ ನೀಡಿದ್ದಾರೆ.**



# ರಾಮಾಯಣ

## ದಶರಥ ರಾಯನ ಪ್ರಲಾಪ

• **ಹಿಂದಿನ ಸಂಚಿಕೆಯಿಂದ** 78 **ನೆಯ ಅಧ್ಯಾಯ**

ಹೀಗೆ ನಮಸ್ಕಾರ ಮಾಡಬಾರದಿದ್ದರೂ ಪತ್ನಿಗೆ ನಮಸ್ಕಾರವನ್ನು ಮಾಡುತ್ತಾ ನೆಲದಮೇಲೆ ಹೊರಳುವುದು ಉಚಿತವಲ್ಲದಿದ್ದರೂ ನೆಲದಮೇಲೆ ಹೊರಳಾಡುತ್ತಾ ಇದ್ದ ದಶರಥರಾಯನು ಸ್ವರ್ಗದಿಂದ ಪುಣ್ಯಕ್ಷಯವಾದಮೇಲೆ ಭೂಲೋಕಕ್ಕೆ ಬಿದ್ದ ಯಯಾತಿಮಹಾರಾಯನಂತೆ ಕಾಣುತ್ತಿದ್ದನು. ಕೈಕೇಯಾದೇವಿಯು ತನ್ನ ಹಿತವನ್ನು ಆಲೋಚಿಸದೆ ಸ್ವಲ್ಪವೂ ಭಯವಿಲ್ಲದೆ ದಶರಥರಾಯನಿಗೆ ಭಯವನ್ನುಂಟುಮಾಡುತ್ತ ಮಹಾರಾಜ ನೀನು ಸತ್ಯವಾದಿಯೆಂದೂ ದೃಢ ವ್ರತನೆಂದೂ ಜಂಭದಮಾತನ್ನು ಹೇಳಿಕೊಳ್ಳುತ್ತೀಯೆ. ಮೊದಲು ನಾನು ಕೇಳಿದ ವರಗಳನ್ನು ಕೊಡುವುದಾಗಿ ಹೇಳಿ ಈಗ ಇಲ್ಲವೆಂದು ನುಡಿಯುತ್ತಿರುವುದೇಕೆ ಎಂದು ಕೇಳಿದಳು.

ದಶರಥರಾಯನು ಅತ್ಯಂತ ಕೋಪಯುಕ್ತನಾಗಿ ಕಂಗೆಟ್ಟು ನುಡಿದನು: ಎಲೇ ಕೈಕೇಯಿ, ಪುರುಷೋತ್ತಮನಾದ ಶ್ರೀರಾಮನು ವನಕ್ಕೆ ಹೋಗಿ ನಾನು ಮೃತನಾದಮೇಲೆ ನಿನ್ನ ಮನಸ್ಸಿನ ಇಷ್ಟಾರ್ಥವು ಲಭಿಸಿತೆಂದು ಸುಖವಾಗಿರು. ಈಗ ನಾನು ಸ್ವರ್ಗಸ್ಥನಾದರೆ ಆ ದೇವತೆಗಳು ನನ್ನನ್ನು ಶ್ರೀರಾಮನ ಕುಶಲವನ್ನು ಕೇಳಿದರೆ ಅವರಿಗೆ ಏನು ಪ್ರತ್ಯುತ್ತರವನ್ನು ಕೊಡಲಿ ! ನಿನ್ನ ಮೇಲಣ ಪ್ರೀತಿಯಿಂದ ಆತನನ್ನು ವನವಾಸಕ್ಕೆ ಕಳುಹಿಸಿದೆನೆಂದು ಸತ್ಯವಚನವನ್ನು ನುಡಿದರೆ ಆ ಸತ್ಯವಚನವೇ ಅಸತ್ಯವಾಗುವುದು. ಶ್ರೀರಾಮನಿಗೆ ಪಟ್ಟಾಭಿಷೇಕವೆಂದು ಯತ್ನ ಮಾಡಿ ಆಮೇಲೆ ವನವಾಸಕ್ಕೆ ಕಳುಹಿಸಿದರೆ ಅನ್ನತವನ್ನು ನುಡಿಯುವವರೆಲ್ಲರಿಗೂ ಪ್ರಧಾನನಾಗುವೆನಲ್ಲದೆ ಸತ್ಯವಾದಿಯಾಗ ಲಾರೆನು. ಪೂರ್ವದಲ್ಲಿ ಅನೇಕ ತಪಸ್ಸುಗಳಿಂದ ಶರೀರವನ್ನು ಒಣಗಿಸಿ ಅತಿಪ್ರಯತ್ನದಿಂದ ಶ್ರೀರಾಮನನ್ನು ಪುತ್ರನಾಗಿ ಪಡೆದೆನು. ಅಂಥವನನ್ನು ಹೇಗೆ ಬಿಡಲಿ ! ಲೋಕದಲ್ಲಿ ಅಧಮನಾದ ಮಗನಿಗೆ ಪಟ್ಟಾಭಿಷೇಕ ಮಾಡದೆ ಬಿಡುವುದುಂಟು. ಶ್ರೀರಾಮನ ಗುಣಗಳನ್ನು ವಿಚಾರಿಸಿದರೆ ಆತನು ಅತಿಪರಾಕ್ರಮಿಯು. ನಾನಾ ವಿದ್ಯೆಗಳಲ್ಲಿ ಕುಶಲನು. ಸೌಜನ್ಯ ಗುಣಸಂಪನ್ನನು ತಾವರೆ ಹೂವಿನ ಎಸಳನ್ನು ಹೋಲುವ ಕಣ್ಣುಗಳುಳ್ಳವನು. ಅಂಥವನನ್ನು ಹೇಗೆ ದೇಶದಿಂದ ಹೊರಕ್ಕೆ ಕಳುಹಿಸಲಿ ಸಕಲ ಜನರಿಗೂ ಮನೋಹರನೂ ಮಹಾಬಲಪರಾಕ್ರಮಿಯೂ ಆಜಾನುಬಾಹುವೂ ಆದ ಶ್ರೀರಾಮನನ್ನು ಹೇಗೆ ದಂಡಕಾರಣ್ಯಕ್ಕೆ ಕಳುಹಿಸಲಿ! ಒಂದು ದಿನವಾದರೂ ಮಾರ್ಗಸಂಚಾರ ಹಸಿವು ಕೃಷಿಗಳಿಂದ ದುಃಖವನ್ನರಿಯದಿದ್ದವನನ್ನು ವನಕ್ಕೆ ಕಳುಹಿಸಿ ಆ ದುಃಖವನ್ನು ಹೇಗೆನೋಡಲಿ ! ದುಃಖಸ್ವರೂಪನ್ನರಿಯದ ನನ್ನ ಮಗನಿಗೆ ಬುದ್ಧಿಪೂರ್ವಕವಾಗಿ ದುಃಖವುಂಟುಮಾಡದೆ ನಾನು ಶರೀರವನ್ನು ಬಿಟ್ಟರೆ ನನಗೆ ಸುಖವಾದೀತು. ಪಾಪಕರ್ಮವನ್ನೆಣಿಸುವ ದುಷ್ಟಳೆ, ಕೈಕೇಯಿ, ಸತ್ಯಪರಾಕ್ರಮಿಯಾದ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಬೇಕೆಂಬ ನಿಮ್ಮ ರವಾಕ್ಯಗಳಿಂದ ನನ್ನನ್ನು ನೋಯಿಸುತ್ತಿರುವೆ. ನಿನ್ನ ಮಾತನ್ನು ಕೇಳಿ ಆತನನ್ನು ವನವಾಸಕ್ಕೆ ಕಳುಹಿಸಿದರೆ ಅಪರಿಮಿತವಾದ ಅಪಕೀರ್ತಿಯೂ ತಿರಸ್ಕಾರವೂ ಬರುವುವು ಎಂದು ದಶರಥನು ನುಡಿದನು, ಹೀಗೆ ದಶರಥರಾಯನು ಕೈಕೇಯಾದೇವಿ ಯೊಡನೆ ಹಂಬಲಿಸುತ್ತಿರುವ ಸಮಯದಲ್ಲಿ ಸೂರ್ಯನು ಅಸ್ತನಾದನು.

**ಮುಂದುವರಿಯುವುದು...**

# ಚುಟುಕಗಳೊಂದಿಗಿನ ಪಯಣ



☛ ವಿಶ್ವಾಸ್.ಡಿ.ಗೌಡ

• **ಉದಯವಾಹಿನಿ, ವಿಶೇಷ**

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ, ಕತೆ, ಕಾದಂಬರಿ, ನಾಟಕ, ಗೀತಾನಾಟಕ, ಹರಟೆ, ಮಹಾಕಾವ್ಯ, ಪ್ರಬಂಧ, ಚುಟುಕು ಮುಂತಾದ ಪ್ರಕಾರಗಳು ಸಾಹಿತ್ಯ ಕ್ಷೇತ್ರವನ್ನು ಫಲವತ್ತಾಗುವಂತೆ ಮಾಡಿವೆ. ಚುಟುಕಗಳನ್ನು ಬರೆಯುವವರು ಸಾಹಿತ್ಯ ಸಂದರ್ಭದಲ್ಲಿ ಕೆಲವೇ ಕೆಲವು ಮಂದಿ ಎನ್ನಬಹುದು.

ಯಾಂತ್ರಿಕ ಯುಗದ ಗಡಿಬಿಡಿಯ ಬದುಕಿನಲ್ಲಿ ಸುದೀರ್ಘ ಕಾವ್ಯ, ಕತೆ, ಕಾದಂಬರಿಗಳನ್ನು ಓದುವ ವ್ಯವಧಾನ ಕಡಿಮೆ ಹೀಗಾಗಿಯೇ ಸ್ವಲ್ಪದರಲ್ಲಿಯೇ ಸ್ವಾರಸ್ಯವನ್ನು ಸೂಸುವ ಚುಟುಕ ಪ್ರಕಾರ ತುಂಬ ಜನಪ್ರಿಯತೆಯನ್ನು ಪಡೆಯುತ್ತಿರುವ ಇತ್ತೀಚಿನ ದಿನಗಳಲ್ಲಿ ಹಲವು ಹೊಸ ತಲೆಮಾರಿನ ಸ್ತ್ರೀಯರು ಈ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

ಅಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಕೌಟುಂಬಿಕ ಜೀವನದ ನಾನಾ ರಂಗಗಳಲ್ಲಿ ಚುಟುಕ ತನ್ನ ಅಸ್ತಿತ್ವವನ್ನು ಸೂಚಿಸುತ್ತಿದೆ. ಜಿ.ಪಿ. ರಾಜರತ್ನಂ ಮೊದಲ ಬಾರಿಗೆ ನಾಲ್ಕು ಸಾಲಿನ ಪದ್ಯವನ್ನು ಬರೆದು ಅದಕ್ಕೆ 'ಚುಟುಕು' ಎಂದು ಕರೆದರು. ಸಂಸ್ಕೃತ ಭಾಷೆಯಲ್ಲಿ ಈ ಮಾದರಿಯ ಪದ್ಯ ಪ್ರಕಾರಕ್ಕೆ 'ಚಾಟು ಪದ್ಯ ಎಂದು ಕರೆಯಾಗುತ್ತದೆ. ಇಂಗ್ಲೀಷಿನಲ್ಲಿ ಲಿಮಿರಿಕ್ ಎಂದು ಹೇಳುತ್ತಾರೆ. ಚುಟುಕಿನ ಬೇರುಗಳನ್ನು ಕನ್ನಡದ ಜಾನಪದ ತ್ರಿಪದಿಗಳಲ್ಲಿಯೂ, ಸರ್ವಜ್ಞನ ವಚನಗಳಲ್ಲಿ ಹಾಗೂ ಶರಣರ ವಚನಗಳಲ್ಲಿಯೂ ಗುರುತಿಸಬಹುದು.

ಚುಟುಕ ಪ್ರಕಾರಗಳಲ್ಲಿ ಅನೇಕರು ಕೃಷಿ ಮಾಡಿದ್ದಾರೆ. ಚುಟುಕ ಬ್ರಹ್ಮ ದಿನಕರ ದೇಸಾಯಿಯಿಂದ ಮೊದಲುಗೊಂಡು ಎಂ. ಅಕ್ಬರ್ ಅಲಿ, ವಿಜಿ ಭಟ್, ಚೆನ್ನವೀರ ಕಣವಿ, ಜರಗನಹಳ್ಳಿ ಶಿವಶಂಕರ್, ಸಿ.ಪಿ.ಕೆ., ದುಂಡಿರಾಜ್, ಪಂಚಾಕ್ಷರಿ ಹಿರೇಮಠ, ದೇವಾನಾಂಪ್ರಿಯ, ಶ್ಯಾಮಹುದ್ದಾರೆ, ಜಿ.ಎಸ್. ಅನ್ನದಾನಿ, ವಿಡಂಬಾರಿ ಇಡಗುಂಜಿ, ಶಂ ಗು ಬಿರಾದಾರ, ನಾರಾಯಣ ಈಗಾಲ, ಅಪ್ಪಸಾಹೇಬ ಅಲಿಬಾದಿ ಮತ್ತಿತರರು ಚುಟುಕ ಸಾಹಿತ್ಯದ ಬೆಳವಣಿಗೆಗೆ ಕಾರಣರಾಗಿದ್ದಾರೆ. ದಿನಕರ ದೇಸಾಯಿಯವರಲ್ಲಿ ಚೌಪದಿ ಛಂದಸ್ಸಿನಲ್ಲಿ ನಾಲ್ಕು ಸಾವಿರ ಚುಟುಕುಗಳನ್ನು ಬರೆದು ಶ್ರೀಮಂತ ಪರಂಪರೆಯ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ.

ಹಲವಾರು ಕವಿಗಳು ಚುಟುಕಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯದ ಸತ್ವವನ್ನು ಗಟ್ಟಿಗೊಳಿಸಿದ್ದಾರೆ. ಮಹತ್ವವಾದ ವಿಚಾರಗಳನ್ನು ಅತಿ ಕಡಿಮೆ ಸಾಲುಗಳಲ್ಲಿ ಹೇಳುವುದೇ ಚುಟುಕ ಸಾಹಿತ್ಯದ ಲಕ್ಷಣ. ಇದು ಕಾವ್ಯದ ಯಾವುದೇ ಪ್ರಕಾರಕ್ಕೆ ಕಡಿಮೆ ಏನಿಲ್ಲ, ಜೀವನ ಮೌಲ್ಯಗಳನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸುವ ಚುಟುಕ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹೊಸ ಹೊಸ ಕವಿ-ಕವಿಯತ್ರಿಯರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ.

ಕಾವ್ಯ ಚಿಕ್ಕದಾದರೂ ಅದರ ಪ್ರತಾಪ ದೊಡ್ಡದು, ಹಾಗೆಂದು ಇದನ್ನು ಮಿತಿಗೆ ಒಳಪಡಿಸುವುದೂ ಕಷ್ಟ, ಶೂನ್ಯವನ್ನು ತುಂಬುವುದರ ಜತೆಗೆ ಅರ್ಥವಂತಿಕೆಯನ್ನು ನೀಡುವ ಚುಟುಕ ಸಾಹಿತ್ಯ ಬದುಕಿನ ಲಾಲಿತ್ಯವೂ ಹೌದು, ಹೊಸಗನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಬೆಳೆದಿರುವ ಚುಟುಕ ಸಾಹಿತ್ಯ 'ಮನಸ್ಸಿಗೆ ಕಚಗುಳಿ ಇಡುವ, ಸುಪ್ತ ಮನಸ್ಸುಗಳನ್ನು ಜಾಗೃತಗೊಳಿಸುವ ಚುಟುಕಗಳಿಗೆ ಹೊಸ ನೆಲೆ ದೊರಕಿಸಬೇಕಿದೆ' ಎಂಬ ಆಶಯವಿದೆ.




**ಹೆಣ್ಣಿನ ಕನ್ಯತ್ವಕ್ಕೆ ಬೀಳ್ಕೊಡುಗೆ ಸಮಾರಂಭ**

ಚುಟುಕ ಸಾಹಿತ್ಯವು ಜೀವನದ ಹಲವು ವೈವಿಧ್ಯ ವಸ್ತುಗಳನ್ನು ಒಳಗೊಂಡಿರುತ್ತವೆ. ಚುಟುಕದಲ್ಲಿ ಅನಾವರಣವಾಗದ ವಸ್ತುಗಳೇ ಇಲ್ಲ ಎನ್ನಬಹುದು. ಭಕ್ತಿ, ದೇವರು, ಪ್ರೀತಿ-ಪ್ರೇಮ, ರೋಗ, ಮಳೆ, ಕನಸು, ಶೀಲ, ಶೋಷಣೆ, ಕೊಲೆ-ಸುಲಿಗೆ, ಹೆಣ್ಣು-ಗಂಡು, ಸಮಾರಂಭ, ಅಪಘಾತ, ವಿಚ್ಛೇದನ ಮುಂತಾದ ಹಲವು ಬಗೆಯ ವಸ್ತುವನ್ನು ಹೊಂದಿವೆ. ಸುಮಾರು ಇನ್ನೂರೈವತ್ತು ಚುಟುಕಗಳನ್ನು ಈ ಪುಟ್ಟ ಕೃತಿಯು ಒಳಗೊಂಡಿದೆ. ಇವೆಲ್ಲವು ಅನುಭವಜನ್ಯವೆಂದೆ ಹೇಳಬಹುದು. ಪ್ರತಿಯೊಂದು ಜೀವ ಸೆಲೆಯನ್ನು ಹರಿಸುವಂತಹವು. 'ಹತ್ಯೆ-ಕೊಲೆ' ಎನ್ನುವ ಪುಟ್ಟ ಚುಟುಕವು ಅಭಿವ್ಯಕ್ತಿಗೊಳಿಸುವ ರೀತಿ ಅನನ್ಯವಾದುದು. ಚುಟುಕಾಗಿದ್ದರು ಅರ್ಥಪೂರ್ಣ ವಿಷಯಗಳನ್ನು ಹೊಂದಿ ರುತ್ತವೆ.

**ಮಹಿಳೆಯರ ಸಮಯ**
**ಅಡುಗೆ ಮನೆಯೊಳಗೆ ಕೊಲೆ**
**ಅವಳ ಕನಸು, ಪ್ರತಿಭೆಗಳು**
**ಹತ್ಯೆಯಾಗುವುದು ಅಲ್ಲೇ**

ಸಂವೇದನೆಯುಳ್ಳ ಈ ಚುಟುಕವು ವಾಸ್ತವಕ್ಕೆ ಕನ್ನಡಿ ಹಿಡಿಯುವುದು. ಕೆಲವು ಕಡೆ ಹಾಸ್ಯವು ಬಂದಿರುವುದನ್ನು ಕಾಣಬಹುದು.

ಮೇಲೆ 'ಏರು'ವುದಕ್ಕೆ ಸಮಾಜದಲ್ಲಿ ಎಷ್ಟು ಅಡ್ಡಿಯಾಗುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಯಪಡಿಸುತ್ತದೆ. ನಿಜ ಅನುಭವವನ್ನು 'ಕಾದಂಬರಿ' ಎಂಬ ಚುಟುಕವು ವಾಸ್ತವವನ್ನು ಚಿತ್ರಿಸುತ್ತದೆ. 'ಹೆಣ್ಣ'ನ್ನು ಇಷ್ಟು ಸುಂದರವಾಗಿ ಚಿತ್ರಿಸಲು ಸಾಧ್ಯವೇ ಇಲ್ಲ ಎನ್ನಬಹುದು.

**'ಮನಸ್ಸಿನಲಿ ಸಾವಿರ ನೋವುಗಳ**
**ಕೆಸರು ತುಂಬಿದ್ದರೂ ಎಲ್ಲರಿಗಾಗಿ**
**ನಗುವ ಕಮಲವಾಗಿ**
**ಅರಳುವವಳು ಹೆಣ್ಣು'**

'ಸಮಾರಂಭ' ಎನ್ನುವ ಈ ಚುಟುಕವು ಮಹಿಳೆಯ ಸ್ವಾತಂತ್ರ್ಯಕ್ಕೆ ಯಾವ ಬಗೆಯ ಕಡಿವಾಣ ಬೀಳುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ಅನಾವರಣಗೊಳಿಸುತ್ತದೆ. 'ಹೆಣ್ಣಿನ ಕನ್ಯತ್ವಕ್ಕೆ ಬೀಳ್ಕೊಡುಗೆ ಸಮಾರಂಭ' ಎಂಬ ಮಾತೇ ಕಾವ್ಯಾತ್ಮಕ ಅಭಿವ್ಯಕ್ತಿಯಾಗಿದೆ.

ಹಲವು ಚುಟುಕಗಳು ಪ್ರೇಮದ ಅಭಿವ್ಯಕ್ತಿಗಳಾದರೆ ಹೆಚ್ಚಿನವು ಒಂದು ನೆಲೆಯ ಪ್ರೇಮದ ನಿರಾಸೆಯನ್ನು ಅರಿವಿಗೆ ತರುತ್ತವೆ. ಹಾಗೆಯೇ ಏಕಮುಖ ಪ್ರೇಮವನ್ನು ಸೂಚಿಸುತ್ತವೆ.

**'ಅವನೆಂದರೆ' ಎಂಬ ಚುಟುಕವನ್ನು ನೋಡಿ**

**'ಹೃದಯದ ಮೇಲೆ**
**ಕಹಿಯ ಸಹಿ ಹಾಕಿ**
**ವಿವಾಹದ ಮುನ್ನವೇ**
**ವಿಚ್ಛೇದನ ಕೊಟ್ಟು ಹೋದವನು'**

**ಹಾಗೆಯೇ 'ಪೂರ್ಣವಿರಾಮ'**
**ಚುಟುಕವನ್ನೊಮ್ಮೆ ನೋಡಿ**

**'ನೆನಪುಗಳು ಹಳ ಹಳೆಯದಾಗಿ**
**ಪಳೆಯುಳಿಕೆ ಆಗುವ ಮುನ್ನ**
**ಬಂದು ಸೇರಬಾರದೆ ಈ ಕಣ್ಣ'**

ಇಂತಹದ್ದೇ ಭಾವನೆಗಳನ್ನು ಅಭಿವ್ಯಕ್ತಿಸುವ 'ಮುದ್ರೆ,' 'ಅವನೇ' ಮುಂತಾದ ಚುಟುಕಗಳು ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಕಾಣಬಹುದು. ಕವಿಯತ್ರಿಯ ಲೇಖನಿಯಿಂದ ಹೊಸ ಪ್ರಕಾರದ ಈ ಚುಟುಕಗಳಲ್ಲೇ ಬದುಕಿನ ಅನುಭವಗಳು ಅನಾವರಣ ಗೊಂಡಿರುವ ಬಗೆಯು ಅನನ್ಯವಾದುದು. ಆ ಕ್ಷಣಕ್ಕೆ ಅಚ್ಚರಿಯನ್ನುಂಟು ಮಾಡುವ ಈ ಚುಟುಕಗಳು ಓದುಗರನ್ನು ಚಕಿತಗೊಳಿಸುತ್ತವೆ. ಕಚಗುಳಿ ಇಡುವುದರಲ್ಲಿ ಅನುಮಾನ ಇಲ್ಲ ಎನಿಸುತ್ತದೆ. ನಮ್ಮಲ್ಲಿ ಹುದುಗಿರುವ ಭಾವನೆಗಳನ್ನು ಕೆರಳಿಸುತ್ತವೆ. ಇಂತಹ ಸಂಪದ್ಭರಿತ ಚುಟುಕುಗಳನ್ನು ನೀಡಿದ ಕವಿಯತ್ರಿ ಸುಜಾತ ಕೃಷ್ಣ ಪಾಂಡವಪುರ ಅವರನ್ನು ಅಭಿನಂದಿಸುತ್ತೇನೆ ಹಾಗೂ ಮುಂದೆಯು ಇನ್ನೂ ಹೆಚ್ಚಿನ ಕೃತಿಗಳನ್ನು ಹೊರ ತರಲಿ ಎಂದು ಹಾರೈಸುತ್ತೇನೆ.

# ಶಿವ ಸಿಂಚನ

ಬಗೆದಷ್ಟು
ಕೌತುಕದ ಆವಿಷ್ಕಾರ
ಜಲ ಸಂಗಮದ
ಜಲಧಾರ
ಪುಳಕಿತಗೊಂಡವರ
ಜೀವನದ ಪ್ರವರ
ತ್ರಿವೇಣಿ ಸಂಗಮದ
ತಿರುಳರಿತ ನಾಗಾಘೋರಿಗಳ
ಸಂಗಮ
ಸಾಧು ಸಂತರ
ಸಮಾಗಮ
ಭಕ್ತ ಸಾಗರದ
ಸರಿಗಮ
ನಲಿದರು
ನರ್ತಿಸಿ ಮೆರೆದರು
ಕಳಚಿ ಕರ್ಮವ
ಧರಿಸಿದರು ಧರ್ಮದ
ಧೋತರವ
ಅಭಿವಂದಿಸಿದರು
ಗಂಗೆ ಯಮುನೆ ಸರಸ್ವತಿಯರಿಗೆ
ಕೊಂಡೊಯ್ದರು
ಮನುಕುಲದ
ಮನದ , ನೆಲದ
ಕಪ್ಪುಗಳನು
ಹರಿಸಿದರು
ಆದರ್ಶ ಜೀವನದ
ಆವಿಷ್ಕಾರವನು
ಕೋಟಿ ಕೋಟಿ
ಭಕುತರ ಬವಣೆ
ನೀಗಿಸಿ ಧನ್ಯಳಾಗಿಸಿದಳು
ಗಂಗೆ ಮುಕ್ತವಾಗಿಸಿದಳು
ಮೃತುವಿನಿಂದ
ತಿಳಿ ನೀಲ
ಯಮುನೆ
ಸ್ಥಿತ ಪ್ರಜ್ಞಳಾ ಗಿಸಿದಳು
ಗುಪ್ತಗಾಮಿನಿ
ಸರಸ್ವತಿ
ಅದೇಕೆ ಈ ಕುಂಭ ಸ್ನಾನ
ನೀಗಿಸುವಳೇ ಜಗದ
ಜನರ ಹಸಿವ
ಲಕುಮಿಯ ಬವಣೆಯ
ಎನುವ ಅಧಮರ
ಅನುಭೂತಿಸಿದಳು
ತ್ರಿವೇಣಿ
ಸಂಗಮದಲಿ
ಸಮಗಮರಾದರು
ಮೋಕ್ಷ ಪಡೆದು
ಪುನೀತರಾದರು
ಪುನರ್ಜನ್ಮದ ಪಥಕೆ
ಸಾಗಿದ ಪುಣ್ಯಾತ್ಮರು
ನಮಿಸುವುದು
ಭರತ ಭೂಮಿ
ಅನವರತ
ತ್ರಿವೇಣಿಯಲಿ
ಮಿಂದದವರು
ಮಿಂದವರ ದರುಶನವ
ಪಡೆದು ಪಾವನರಾಗಿರಿ
ಪಡೆಯಿರಿ ಹಿರಿಯರ
ಆಶೀರ್ವಾದ
ಸ್ಪರ್ಶಿಸಿ ಪಾದವ
ಇಹುದು ಶಿವರಾತ್ರಿ
ಶಿವನ ಜಟೆಯಲಿ
ದುಮ್ಮಿಕ್ಕುವುದು ಗಂಗೆ ಮನದ ಧರೆಗೆ
ಭಜಿಸಿ ಭುಜಿಸಿ
ಅಹೋರಾತ್ರಿ ಜಪಿಸಿ
ಶಿವ ಸಂಗಮದಲಿ
ಮೇಳೈಸಿ
ಮನವರಳಿಸಿ
ಮನದ ವಿಕೃತಿಯ ಮರೆತು
ಪಡೆಯಿರಿ
ಶಿವ ಸಿಂಚನ

■ ಗುಜ್ಜರ್,ದಾವಣಗೆರೆ



☛ ಉದಯವಾಹಿನಿ ಚಿತ್ರ

# ಬ್ರಾಹ್ಮಣ ಒಳಿತಿಗಾಗಿ ಶ್ರಮಿಸುವೆ

• **ಉದಯವಾಹಿನಿ ಬಸವನಗುಡಿ**

ಎನ್.ಆರ್.ಕಾಲೋನಿಯಲ್ಲಿರುವ ಪತ್ತಿ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಚುನಾವಣೆ- ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರ ಪರ ಚುನಾವಣೆ ಪ್ರಚಾರ ಸಭೆ. ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಿಕಟಪೂರ್ವ ಉಪಾಧ್ಯಕ್ಷರಾದ ಆರ್.ಲಕ್ಷ್ಮಿಕಾಂತ್ ರವರು, ನಿವೃತ್ತ ನ್ಯಾಯಮೂರ್ತಿಗಳಾದ ಎನ್.ಕುಮಾರ್ ರವರು, ಸಾಹಿತಿಗಳಾದ ಪಾವಗಡ ಪ್ರಕಾಶ್ ರಾವ್,ಕೆ.ಪಿ.ಪುತ್ತುರಾಯರವರು, ಅರುಳು ಮಲ್ಲಿಗೆ ಪಾರ್ಥ ಸಾರಥಿ, ಬ್ರಾಹ್ಮಣ ಸಮುದಾಯದ ಮುಖಂಡರುಗಳಾದ , ಎಂ.ಆರ್.ವಿ.ಪ್ರಸಾದ್, ಡಾ.ಎ.ವಿ.ಪ್ರಸನ್ನ, ಬಿಜೆಪಿ ಮುಖಂಡರಾದ ಸುಬ್ಬಣ್ಣರವರು ಭಾಸ್ಕರ್ ಮೂರ್ತಿ, ದತ್ತಾತ್ರಿ, ರಾಘವೇಂದ್ರ ಮೋಕ್ಷಗುಂಡಂ ವಿಶ್ವನಾಥ್ ದಿಕ್ಷೀತ್, ಡಾ. ನಾಗೇಂದ್ರರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಬ್ರಾಹ್ಮಣ ಸಮುದಾಯದ ಮುಖಂಡರಾದ ಬಿ.ಎನ್.ವಿ.ಸುಬ್ರಮಣ್ಯ ರವರ, ಸಿ.ವಿ.ಎಲ್.ಶಾಸ್ತ್ರಿ ಮತ್ತು ಲಕ್ಷ್ಮಿಕಾಂತ್ ರವರ ಬೆಂಬಲಿಗರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ವಿರೋಧಿಗಳನ್ನು ಎದುರಿಸಲು ಮತ್ತು ಅಧಿಕಾರ ಚಲಾಯಿಸಲು ನಮಗೆ ಗೊತ್ತು ಅದರೆ ಕೆಲ ಪಟಭದ್ರ ಹಿತಾಸಕ್ತಿಗಳು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಪ್ರತಿ ಜಿಲ್ಲೆಗೆ ಒಬ್ಬ ಪ್ರತಿನಿಧಿ ಹಾಗೂ ಬೆಂಗಳೂರುನಗರಕ್ಕೆ 3ಪ್ರತಿನಿಧಿ ಹಾಗೂ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಕ್ಕೆ ಎಲ್ಲಾ ರೀತಿಯಲ್ಲಿ ನಮ್ಮ ತಂಡವು ಸಹಕಾರ ನೀಡಿದ್ದೇವೆ. ಬ್ರಾಹ್ಮಣರ ಅಭಿವೃದ್ಧಿ ಮತ್ತು ಬ್ರಾಹ್ಮಣರ ಒಳಿತಿಗಾಗಿ ನಮ್ಮ ಕೈಜೋಡಿಸಿ ಒಂದು ತಂಡವಾಗಿ ಸಂಘಟನೆ ಮಾಡೋಣ. ಎಲ್ಲಾ ಹಿರಿಯ ನಾಯಕರು ಮಾರ್ಗದರ್ಶನದಲ್ಲಿ ನಾನು ನಡೆಯುತ್ತೇನೆ ಎಂದು ಹೇಳಿದರು. ಲಕ್ಷ್ಮಿಕಾಂತ್ ರವರು ಮಾತನಾಡಿ ಹಿಂದಿನ ಬಾರಿ ಚುನಾವಣೆ ನಾನು ಮತ್ತು ರಘುನಾಥ್ ರವರ ಸ್ಪರ್ಧೆ ಮಾಡಿದ ಕಾರಣ ಮತಗಳು ವಿಭಜನೆಯಾದ ಕಾರಣದಿಂದ ಮೂರನೇಯ ವ್ಯಕ್ತಿ ಗೆಲವು ಸಾಧಿಸಿದರು. ಈ ಬಾರಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಎಸ್. ರಘುನಾಥ್ ರವರು ಅಧ್ಯಕ್ಷೀಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ ಅವರಿಗೆ ಸಂಪೂರ್ಣ ಸಹಕಾರ, ಬೆಂಬಲ ನೀಡುತ್ತಿದ್ದೇನೆ. ಬ್ರಾಹ್ಮಣರ ಸಂಘಟನೆ ಮತ್ತು ಬ್ರಾಹ್ಮಣರ ಅಭಿವೃದ್ದಿಗಾಗಿ ನಮ್ಮ ಹೋರಾಟ ಎಂದು ಹೇಳಿದರು. ಜಸ್ಟಿಸ್ ಎನ್. ಕುಮಾರ್ ರವರು ಮಾತನಾಡಿ ಬ್ರಾಹ್ಮಣ ಸಮುದಾಯದ ಮುಖಂಡರಾದ ಎಸ್.ರಘುನಾಥ್ ರವರು ಉತ್ತಮ ಸಂಘಟಕರು, ಸರಳ ವ್ಯಕ್ತಿತ್ವದವರು. ಎಲ್ಲರ ವಿಶ್ವಾಸಗಳಿಸಿರುವ ರಘುನಾಥ್ ರವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡಬೇಕು ಎಂದರೆ ಎಸ್.ರಘುನಾಥ್ ರವರನ್ನ ಆಯ್ಕೆ ಮಾಡಿ, ಚುನಾವಣೆಯಲ್ಲಿ ಸೋತರು ಕಳೆದ 3ವರ್ಷಗಳಿಂದ ಬ್ರಾಹ್ಮಣ ಸಮುದಾಯ ಸಂಘಟನೆಗಾಗಿ ಶ್ರಮಿಸುತ್ತಿದ್ದಾರೆ. ಎಲ್ಲರನ್ನು ಕರೆದುಕೊಂಡು ಹೋಗುವ ನಾಯಕತ್ವ ಗುಣ ರಘುನಾಥ್ ರಲ್ಲಿ ಇದೆ. ಬ್ರಾಹ್ಮಣ ಮಹಾಸಭಾ ಮತದಾರರು ಯೋಚನೆ ಮಾಡಿ ರಘುನಾಥ್ ರವರ ಸಾಧನೆ ನೋಡಿ ಅವರಿಗೆ ಮತ ನೀಡಿ ಗೆಲ್ಲಿಸಬೇಕು ಎಂದು ಹೇಳಿದರು. ವಿವಿಧ ಜಿಲ್ಲೆಗಳಿಂದ ಬ್ರಾಹ್ಮಣ ಸಮಾಜದ ಮುಖಂಡರು, ಸದಸ್ಯರುಗಳು ಮತ್ತು ವಿಪ್ರ ಸಂಘ, ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ವಿಶೇಷಾಧಿಕಾರಿ ಡಾ.ಎ.ವಿ.ಪ್ರಸನ್ನರವರಿಗೆ ಅಭಿನಂದನಾ ಸಮಾರಂಭ ನೇರವೇರಿತು.



☛ ಉದಯವಾಹಿನಿ ಚಿತ್ರ

**ಡಾ ನಾಗೇಂದ್ರರವರು ದೀಪ ಬೆಳಗಿಸಿ ಉದ್ಘಾಟನೆ**

> **ಅಖಿಲ ಕರ್ನಾಟಕ ಬ್ರಾಹ್ಮಣ ಸಮುದಾಯ ಚುನಾವಣೆ ಏಪ್ರಿಲ್ ಎರಡನೇಯವಾರದಲ್ಲಿ ನಡೆಯಲಿದೆ. ರಾಜ್ಯಾದ್ಯಂತ ಇರುವ ಬ್ರಾಹ್ಮಣ ಸಮುದಾಯದವರನ್ನ ಭೇಟಿ ಮಾಡಿ ನಮ್ಮ ಸಂಘಟನೆ ಮುಂದಿನ ಯೋಜನೆಗಳನ್ನು ತಿಳಿಸಿ ಮತಯಾಚನೆ ಮಾಡಲಿದ್ದೇನೆ. ನನಗೆ ರಾಜ್ಯದಲ್ಲಿರುವ ಸಮುದಾಯದ ಪ್ರಮುಖ ಮುಖಂಡರು, ಸದಸ್ಯರುಗಳು ಸಹಕಾರ, ಬೆಂಬಲ ನೀಡುತ್ತಿದ್ದಾರೆ.**
>
> ಎಸ್.ರಘುನಾಥ್

# ಬೆಂಗಳೂರಿನಲ್ಲಿ ಪವರ್ ಕಟ್: ನಿಮ್ಮ ಏರಿಯಾ ಇದೆಯಾ ಚೆಕ್ ಮಾಡ್ಕೊಳ್ಳಿ

• **ಉದಯವಾಹಿನಿ ಬೆಂಗಳೂರು**

ತುರ್ತು ಕಾಮಗಾರಿ ಹಿನ್ನೆಲೆ ಬೆಂಗಳೂರಿನ ಹಲವು ಏರಿಯಾಗಳಲ್ಲಿ ಪವರ್ ಕಟ್ ಇರಲಿದೆ ಎಂದು ಬೆಸ್ಕಾಂ ತಿಳಿಸಿದೆ. ಬ್ಯಾಡರಹಳ್ಳಿ, ಬಿಇಎಲ್ ಲೇಔಟ್ 2ನೇ ಹಂತ, ಗಿಡ್ಡದಕೋನೇನಹಳ್ಳಿ, ಮುದ್ರಿನಪಾಳ್ಯ, ಬಿಡಿಎ 8 ಮತ್ತು 9ನೇ ಬ್ಲಾಕ್, ರೈಲ್ವೆ ಲೇ ಔಟ್, ಉಪಕಾರ್ ಲೇಔಟ್, ಬಾಲಾಜಿ ಲೇ ಔಟ್, ಭವಾನಿ ಲೇಔಟ್, ಗೊಲ್ಲರಹಟ್ಟಿ, ರತ್ನನಗರ, ಮಾರ್ಡನ್ ಲೇಔಟ್, ಡಿ ಗ್ರೂಪ್ ಲೇಔಟ್, ಹೇರೋಹಳ್ಳಿ, ತುಂಗಾನಗರ, ಕೇಪೇಗೌಡ ನಗರ, ಪೋಲಿಸ್ ಕ್ಯಾಟ್ರಿಸ್ ಬೈರವೇಶ್ವರನಗರ ಇಂಡಸ್ಟ್ರೀಯಲ್ ಎಸ್ಟೇಟ್ ಹೊಸಹಳ್ಳಿ, ಚಿಕ್ಕ ಗೊಲ್ಲರಹಟ್ಟಿ, ಕಲ್ಲಹಳ್ಳಿ, ಹೊಸಹಳ್ಳಿ, ಬಿಎಂಟಿಸಿ ಡಿಪೋ, ಅನಿಕೇತನನಗರ, ಪಂಚಮುಖಿ ಲೇಔಟ್, ಎಸ್ಟೇಟ್, ಮಹದೇಶ್ವರನಗರ, ಮಾರುತಿ ನಗರ, ನಾಗರಹೊಳೆ ನಗರ, ಮುನೇಶ್ವರ ನಗರ, ಸಂಜೀವ್ ನಗರ, ಅನ್ನಪೂರ್ಣೇಶ್ವರಿ ನಗರ, ಸುಂಕದಕಟ್ಟೆ ಇಂಡಸ್ಟ್ರೀಯಲ್ ಏರಿಯಾ, ಚಂದನ ಬಡಾವಣೆ, ಕೆಬ್ಬಹಳ್ಳ. ರಾಜೀವ್ ಗಾಂಧಿನಗರ, ಚನ್ನಪ್ಪ ಲೇಔಟ್, ಶ್ರೀನಿವಾಸನಗರ, ಫೈವ್ ಲೈನ್ ರೋಡ್, ಮುತ್ತುರಾಯ ಬಡಾವಣೆ, ಪಿ ಟಿ ಲೇ ಔಟ್, ರೋಡ್ ರಾಮಣ್ಣ ಕಾಂಪೌಂಡ್, ಬಿ.ಎಂ.ಶಂಕರಪ್ಪ ಎಸ್ಟೇಟ್, ಹೆಗ್ಗನಹಳ್ಳಿ ಮೇನ್ ರೋಡ್, 2.3.2.2 , 5, 20.2.20. ಸರ್.ಎಂ.ವಿ. 9ನೇ ಬ್ಲಾಕ್, ಒಕ್ಕಲಿಗರ ಸಂಘ ಹಾಸ್ಪಿಟಲ್ ಅನ್ನಪೂರ್ಣೇಶ್ವರಿ ನಗರ, ಆರ್ಕಿಡ್ ಸ್ಕೂಲ್ ಕೊಟ್ಟೆಗೇಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕರೆಂಟ್ ಕಟ್ಟಾಗಲಿದೆ ಎಂದು ತಿಳಿಸಿದೆ.

# ಪ್ರಾಣಿ, ಪಕ್ಷಿಗಳಿಗೆ ನೀರುಣಿಸಿ ಉದಯ ವಾಹಿನಿ ಕಳಕಳಿ

■ ಇಲ್ಯಾಸ್ ಪಟೇಲ್

• **ಉದಯವಾಹಿನಿ, ವಿಶೇಷ**

ಬೇಸಿಗೆಯ ಬಿಸಿಲ ಝಳಕ್ಕೆ ನೀರಿನ ಸೆಲೆ ಗಳು ಬತ್ತಿ ಹೋಗಿವೆ. ಬಾಯಾರಿ ಕಂಗೆಡುವ ಬಾನಾಡಿಗಳು ಈ ಋತುವಿನಲ್ಲಿ ನೀರು ಸಿಗದೇ ಒದ್ದಾಡಿ ಪ್ರಾಣ ಬಿಡುತ್ತವೆ. ಪ್ರಾಣಿ -ಪಕ್ಷಿಗಳಿಗೂ ಬಾಯಾರಿಕೆ ಆಗುತ್ತದೆ.. ಆದರೆ ಅವುಗಳ ಅಳಲು ನಮ್ಮ ಮುಂದೆ ಹೇಳಲು ಆಗುವುದಿಲ್ಲ ಅವುಗಳಿಗೆ.. ಪ್ರಾಣಿ ಪಕ್ಷಿಗಳು ಹನಿ ನೀರಿಗಾಗಿ ಪರಿತಪ್ಪಿಸುತ್ತಿವೆ. ಹಾಗಾಗಿ ಪಕ್ಷಿಗಳು ಮತ್ತು ಪ್ರಾಣಿಗಳಿಗೆ ನೀರುಣಿಸಿ ಅವುಗಳ ಜೀವ ಉಳಿಸುವ ಒಂದು ಸಣ್ಣ ಪ್ರಯತ್ನ ಮಾಡಿ ಮಾಡಿ ಎಂಬುದು ಉದಯ ವಾಹಿನಿ ಕಳ ಕಳಿ ಯಾಗಿದೆ..



- ಹನಿ ನೀರು ಹಕ್ಕಿಗಳ ಜೀವ ಉಳಿಸಬಲ್ಲದು...!
- ಪಕ್ಷಿ ಗಳಿಗೆ ಮತ್ತು ಪ್ರಾಣಿಗಳಿಗೆ ನೀರುಣಿಸಿ ಅವುಗಳ ಜೀವ ಉಳಿಸೋಣ..!
- ನಿಮ್ಮ ಮನೆಯ ತಾರಸಿ ಅಥವಾ ಸಮೀಪದ ಮರದಲ್ಲಿ ನೀರು ತುಂಬಿದ ಬಟ್ಟಲುಗಳನ್ನು ಇಡಿ.
- ಪ್ರಾಣಿ-ಪಕ್ಷಿಗಳಿಗೆ ಬಾಯಿಗೆ ಎಟಕುವಂತೆ ತೊಟ್ಟಿಗಳಲ್ಲಿ ನೀರನ್ನು ತುಂಬಿಡಿ..
- ತಾರಸಿ ಮೇಲಿಡುವ ಬಟ್ಟಲು ಮಕ್ಕಳ ಕೈಗೆ ಎಟುಕದಂತಿರಲಿ..
- ಆಹಾರ ಇಡುವುದಾರೆ ಬರಿ ಅನ್ನ ಮಾತ್ರ ಇಡಿ, ಧಾನ್ಯಗಳಾದರೆ ಗೋಧಿ, ರಾಗಿ, ಜೋಳ ಇಟ್ಟರೇ ಒಳ್ಳೆಯದು.
- ಗೂಡು ತಯಾರಿಸಿ, ಪಕ್ಷಿಗಳಿಗೆ ಆಸರೆ, ನೆರಳು ಕಲ್ಪಿಸಿ...



## ಮಾ.1 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ ಲೋಪವೆಸಗಿದರೆ ಕಠಿಣ ಕ್ರಮ: ಜಿಲ್ಲಾಧಿಕಾರಿ

• ಉದಯವಾಹಿನಿ ಹೊಸಪೇಟೆ

ಮಾರ್ಚ್ 1 ರಿಂದ 20 ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಯಾವುದೇ ಲೋಪವಾಗದಂತೆ ಪರೀಕ್ಷಾ ನಿಯೋಜಿತ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷಾ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಜಿಲ್ಲೆಯಲ್ಲಿ ಒಟ್ಟು 23 ಪರೀಕ್ಷಾ ಕೇಂದ್ರಗಳಿದ್ದು, ಪ್ರತಿ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆಯನ್ನು ಕಡ್ಡಾಯಗೊಳಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯಸ್ಥರನ್ನು ಹೊರತುಪಡಿಸಿ ಉಳಿದಂತೆ ಎಲ್ಲರ ಮೊಬೈಲ್ ಬಳಕೆಯನ್ನು ನಿಷೇಧಿಸಲಾಗಿದೆ. ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಪೊಲೀಸ್ ಬಿಗಿಬಂದೋಬಸ್ತ್ ನಿಯೋಜನೆ ಸೇರಿದಂತೆ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉತ್ತರ ಪತ್ರಿಕೆ ಪಾಲಕರು, ಕಚೇರಿ ಅಧೀಕ್ಷಕರು ಹಾಗೂ ಗೌಪ್ಯವಸ್ತುಗಳನ್ನು ಸಾಗಿಸುವ ಮಾರ್ಗಾಧಿಕಾರಿಗಳು ಎಚ್ಚರಿಕೆ ವಹಿಸುವಂತೆ ತಿಳಿಸಿದರು.



ಸಾಮಾಜಿಕ ಜಾಲತಾಣಗಳಲ್ಲಿ ಪಿಯುಸಿ ಪ್ರಶ್ನೆ ಪತ್ರಿಕೆ ಸೋರಿಕೆಯ ಬಗ್ಗೆ ಸುಳ್ಳು ಸುದ್ದಿಗಳು ಹರಡಿಸಿದರೇ ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಪರೀಕ್ಷಾ ಸಮಯದಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಜೆಸ್ಕಾಂ ಅಧಿಕಾರಿಗಳು ನಿಗಾವಹಿಸಬೇಕು. ಯಾವುದೇ ಗೊಂದಲಗಳಿಲ್ಲದೇ ಪರೀಕ್ಷೆಯನ್ನು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು.

**ಸಿಸಿ ಕ್ಯಾಮೆರಾ ಅಳವಡಿಕೆ**

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ನಾಗರಾಜ ಹವಾಲ್ದಾರ್ ಮಾತನಾಡಿ, ಮಾ.01 ರಿಂದ ಮಾ.20 ರವರೆಗೆ ಬೆ.10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಪರೀಕ್ಷೆ ನಡೆಯಲಿದೆ ಎಂದರು.

ಸಭೆಯಲ್ಲಿ ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉತ್ತರ ಪತ್ರಿಕೆ ಪಾಲಕರು, ಕಚೇರಿ ಅಧೀಕ್ಷಕರು ಹಾಗೂ ಗೌಪ್ಯ ವಸ್ತುಗಳನ್ನು ಸಾಗಿಸುವ ಮಾರ್ಗಾಧಿಕಾರಿಗಳು ಸೇರಿದಂತೆ ಶಿಕ್ಷಣ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

### ಎಪಿಎಂಸಿ ಉಪ ಮಾರುಕಟ್ಟೆಯನ್ನು ಮುಖ್ಯ ಮಾರುಕಟ್ಟೆಯನ್ನಾಗಿ
## ಮೇಲ್ದರ್ಜೆಗೆ ಏರಿಸಲು ಆಗ್ರಹಿಸಿ ಮನವಿ

• ಉದಯವಾಹಿನಿ ಮುದ್ದೇಬಿಹಾಳ

ಇಲ್ಲಿನ ಎಪಿಎಂಸಿ ಉಪ ಮಾರುಕಟ್ಟೆಯನ್ನು ಮುಖ್ಯ ಮಾರುಕಟ್ಟೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಅಗತ್ಯ ಕ್ರಮ ಕೈಕೊಳ್ಳುವಂತೆ ಆಗ್ರಹಿಸಿ ಮುದ್ದೇಬಿಹಾಳ ಎಪಿಎಂಸಿ ವರ್ತಕರ ಸಂಘದ ಪದಾಧಿಕಾರಿಗಳು ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ನಡೆದ ಎಪಿಎಂಸಿ ಸಮಸ್ಯೆಗಳ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೃಷಿ ಮಾರಾಟ ಇಲಾಖೆ ನಿರ್ದೇಶಕರೂ ಆಗಿರುವ ಕೃಷಿ ಮಾರಾಟ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶಿವಾನಂದ ಕಾಪಸಿ ಅವರಿಗೆ ಮನವಿ ಸಲ್ಲಿಸಿದರು.

ಮುದ್ದೇಬಿಹಾಳ ಎಪಿಎಂಸಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದ ಸಂಘದ ಪದಾಧಿಕಾರಿಗಳಾದ ಬಿ.ಎಸ್.ಮೇಟಿ, ಮಲ್ಲನಗೌಡ ಬಿರಾದಾರ ಮತ್ತು ಮುದ್ದೇಬಿಹಾಳ ಪ್ರತಿನಿಧಿಸುವ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ನಿರ್ದೇಶಕ ಅಶೋಕ ರೇವಡಿ ಇನ್ನಿತರರು ಈ ಮನವಿ ಸಲ್ಲಿಸಿದರು.

ಮುದ್ದೇಬಿಹಾಳ ತಾಲ್ಲೂಕು ವ್ಯಾಪ್ತಿಯಲ್ಲಿದ್ದ ತಾಳಿಕೋಟೆಯಲ್ಲಿ ಎಪಿಎಂಸಿ ಮುಖ್ಯ ಮಾರುಕಟ್ಟೆ ಸ್ಥಾಪಿಸಲಾಗಿತ್ತು. ಕ್ಷೇತ್ರ ವಿಭಜನೆಯ ನಂತರ ತಾಳಿಕೋಟೆ ತಾಲ್ಲೂಕು ಕೇಂದ್ರವಾಗಿ ಬದಲಾಗಿದೆ. ಹಾಗಾಗಿ ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆಯ



ಉದಯವಾಹಿನಿ ಚಿತ್ರ

ಕ್ಷೇತ್ರ ವಿಭಜಿಸಿ ಮುದ್ದೇಬಿಹಾಳ ಸ್ವತಂತ್ರ ಕೃಷಿ ಉತ್ಪನ್ನ ಮಾರುಕಟ್ಟೆ ಸ್ಥಾಪಿಸಬೇಕು ಎಂದು ಮನವಿಯಲ್ಲಿ ಬೇಡಿಕೆ ಇಡಲಾಗಿದೆ.

**ಮಂಜೂರಾತಿ ನೀಡುವಂತೆ ಕೋರಿಕೆ**

ಮುದ್ದೇಬಿಹಾಳ ಮತಕ್ಷೇತ್ರದ ಶಾಸಕರಾದ ಸಿ.ಎಸ್.ನಾಡಗೌಡ ಅವರು 2024ರ ಸಪ್ಟೆಂಬರ್ 29ರಂದು, ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು 2024ರ ಸಪ್ಟೆಂಬರ್ 30ರಂದು ಪತ್ರಗಳನ್ನು ಬರೆದು ನಮ್ಮ ಬೇಡಿಕೆ ಈಡೇರಿಕೆಗೆ ಮಂಜೂರಾತಿ ನೀಡುವಂತೆ ಕೋರಿದ್ದಾರೆ.

ಇದಲ್ಲದೆ ತಾಳಿಕೋಟೆ ಕೇಂದ್ರ ಸಮಿತಿಯಲ್ಲಿ ಎಪಿಎಂಸಿ ಅಧ್ಯಕ್ಷರು, ಸದಸ್ಯರು 2008ರ ಆಗಸ್ಟ್ 7 ರಂದೇ ಮಾರುಕಟ್ಟೆ ವಿಭಜಿಸಿ ಮುದ್ದೇಬಿಹಾಳದಲ್ಲಿ ಮುಖ್ಯ ಮಾರುಕಟ್ಟೆ ಮಾಡಲು ಸರ್ವಸಮ್ಮತ ಠರಾವು ಸ್ವೀಕರಿಸಿದ್ದಾರೆ.

ಮುದ್ದೇಬಿಹಾಳ ಉಪ ಮಾರುಕಟ್ಟೆಯು ಸೆಸ್ (ಮಾರ್ಕೆಟ್ ಫೀ) ಸಂಗ್ರಹದಲ್ಲಿ ಮುಂಚೂಣಿಯಲ್ಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮನವಿ ಸಲ್ಲಿಸುವಾಗ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಎಸ್.ಪಿ.ಸಂಶಿಮಠ, ಉಪಾಧ್ಯಕ್ಷರಾದ ಸಂದೀಪ ಬಿಡಸಾರಿಯಾ, ಪ್ರವೀಣ ಅಂಗಡಿ, ವೀರೇಶ ಮೋಟಗಿ, ಗೌರವ ಕಾರ್ಯದರ್ಶಿ ರವೀಂದ್ರ ಬಳಿಗಾರ, ಸಹ ಗೌರವ ಕಾರ್ಯದರ್ಶಿ ಮಹೇಂದ್ರ ಸಿಂಘಿ, ಎಪಿಎಂಸಿ ಸಮಿತಿ ಚೇರಮನ್ ಬಸವರಾಜ ಯಕಲಾಸಪುರ ಇನ್ನಿತರರು ಇದ್ದರು.

ಆದಷ್ಟು ಬೇಗ ಬೇಡಿಕೆ ಈಡೇರಿಸಲು ಕ್ರಮ ಜರುಗಿಸುವಂತೆ ಕೋರಿದ್ದಕ್ಕೆ ಸ್ಪಂಧಿಸಿದ ಕಾಪಸಿ ಅವರು ಬೆಂಗಳೂರಿಗೆ ಹೋದ ಕೂಡಲೇ ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು ಎಂದು ಅಶೋಕ ರೇವಡಿ ಪತ್ರಿಕೆಗೆ ತಿಳಿಸಿದರು.

## ಹಂಪಿ ಉತ್ಸವ ಎತ್ತು, ಟಗರು, ಶ್ವಾನಗಳ ಪ್ರದರ್ಶನ

• ಉದಯವಾಹಿನಿ ಹೊಸಪೇಟೆ

ಹಂಪಿ ಉತ್ಸವ-2025 ನಿಮಿತ್ತ ಫೆ.28 ರಂದು ಜಿಲ್ಲಾ ಮಟ್ಟದ ಎತ್ತುಗಳ ಪ್ರದರ್ಶನ, ಮಾರ್ಚ್ 1 ರಂದು ಜಿಲ್ಲಾ ಮಟ್ಟದ ಟಗರುಗಳ ಪ್ರದರ್ಶನ, ಮಾರ್ಚ್ 2 ರಂದು ಜಿಲ್ಲಾ ಮಟ್ಟದ ಶ್ವಾನಗಳ ಪ್ರದರ್ಶನವನ್ನು ಕಮಲಾಪುರದ ಪೆಟ್ರೋಲ್ ಬಂಕ್ ಹಿಂಭಾಗದ ಹಂಪಿಗೆ ತೆರಳುವ ಮಾರ್ಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ. ಪೋಮ್‌ಸಿಂಗ್ ತಿಳಿಸಿದ್ದಾರೆ.

ಹಂಪಿ ಉತ್ಸವದಲ್ಲಿ ಜನಾಕರ್ಷಣೆಗೆ ವಿಶೇಷವಾಗಿ ಎತ್ತು, ಟಗರು ಹಾಗೂ ಶ್ವಾನಗಳ ಪ್ರದರ್ಶನಗಳನ್ನು ಏರ್ಪಡಿಸಲಾಗಿದ್ದು, ಜಿಲ್ಲೆಯ ನಾನಾ ಭಾಗಗಳಿಂದ ಸುಮಾರು 200 ಜೋಡಿ ಎತ್ತುಗಳು, 200 ಟಗರುಗಳು ಹಾಗೂ 500 ಕ್ಕೂ ಹೆಚ್ಚು ಶ್ವಾನಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. 20 ವಿವಿಧ ತಳಿಯ ಶ್ವಾನಗಳು ಸೇರಿ ಹಲವಾರು ವಿಶೇಷ ತಳಿಯ ಶ್ವಾನಗಳನ್ನು ಪ್ರದರ್ಶನದಲ್ಲಿ ಕಾಣಬಹುದಾಗಿದೆ. ಪ್ರದರ್ಶನದಲ್ಲಿ ಉತ್ತಮವೆನಿಸಿದ ಎತ್ತು, ಟಗರು, ಶ್ವಾನಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು




ಉದಯವಾಹಿನಿ ಚಿತ್ರ

ನಗದು ರೂಪದಲ್ಲಿ ನೀಡಲಾಗುವುದು.

ವಿಶೇಷವಾಗಿ ಶ್ವಾನ ಪ್ರದರ್ಶನದಲ್ಲಿ ಪೊಲೀಸ್ ಇಲಾಖೆಯ ಶ್ವಾನ ಪಡೆಯವರು ಪೊಲೀಸ್ ಶ್ವಾನಗಳ ಚಾಕಚಕ್ಯತೆಯ ಕೌಶಲ್ಯಗಳನ್ನು ಪ್ರದರ್ಶಿಸಲಿದ್ದಾರೆ.

ಎತ್ತು, ಟಗರು ಮತ್ತು ಶ್ವಾನಗಳ ಪ್ರದರ್ಶನದಲ್ಲಿ ಭಾಗವಹಿಸುವ ಮಾಲೀಕರು ಫೆ.26 ರೊಳಗೆ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ.

## ಮಿನಿ ನ್ಯೂಸ್

### ಹೃದಯಾಘಾತಕ್ಕೆ ವಿದ್ಯಾರ್ಥಿ ಬಲಿ

• ಉದಯವಾಹಿನಿ ಕಲಬುರಗಿ

ಹೃದಯಾಘಾತವಾಗಿ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವ ಘಟನೆ ಇಲ್ಲಿನ ಗಂಗಾ ನಗರದಲ್ಲಿ ಬೆಳಗಿನಜಾವ 1 ಗಂಟೆ ಸುಮಾರಿಗೆ ನಡೆದಿದೆ. ಕಿರಣ್ ತಂದೆ ರವಿಕುಮಾರ ಬಬಲಾದ (19) ಮೃತಪಟ್ಟ ವಿದ್ಯಾರ್ಥಿ.ಕಿರಣ್ ನಗರದ ಪಿಡಿಎ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 4ನೇ ಸೆಮಿಸ್ಟರನಲ್ಲಿ ಓದುತ್ತಿದ್ದ ಎಂದು ತಿಳಿದುಬಂದಿದೆ.

### ಕಾರಿನಲ್ಲಿ ಮಾದಕ ವಸ್ತು ಸಾಗಾಟ ನಾಲ್ವರು ಆರೋಪಿಗಳು ಅರೆಸ್ಟ್

• ಉದಯವಾಹಿನಿ ಕಾಸರಗೋಡ

ಕಾರಿನಲ್ಲಿ ಸಾಗಾಟ ಮಾಡುತ್ತಿದ್ದ ಮಾದಕ ವಸ್ತು ಸಹಿತ ನಾಲ್ವರನ್ನು ಕುಂಬಳೆ ಪೊಲೀಸರು ಬಂಧಿಸಿದ್ದಾರೆ. ಉಪ್ಪಳ ಕೋಡಿ ಬೈಲ್‌ನ ಇಬ್ರಾಹಿಂ ಸಿದ್ದೀಕ್(33), ಉಪ್ಪಳ ಪ್ರತಾಪ ನಗರದ ಮೂಸಾ ಶಫೀಕ್ (30), ಆಡ್ಕತ್ತ ಬೈಲ್ ನ ಮುಹಮ್ಮದ್ ಸಾಲಿ (46) ಮತ್ತು ಮುಹಮ್ಮದ್ ಸವಾದ್ (20) ಬಂಧಿತ ಆರೋಪಿಗಳು.

ಇವರ ಬಳಿಯಿಂದ 21.5 ಗ್ರಾಂ ಎಂ ಡಿ ಎಂ ಎ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ. ಕುಂಬಳೆ ಪೊಲೀಸರಿಗೆ ಲಭಿಸಿದ ಖಚಿತ ಮಾಹಿತಿಯಂತೆ ಕಾರ್ಯಾಚರಣೆ ನಡೆಸಿ ಚೇವಾರ್ ಎಂಬಲ್ಲಿ ಕಾರು ತಡೆದ ಪೊಲೀಸರು ತಪಾಸಣೆ ನಡೆಸಿದಾಗ ಇವರ ಬಳಿಯಿಂದ ಮಾದಕ ವಸ್ತು ಪತ್ತೆಯಾಗಿದೆ.

### ಕೋಟೆಕಾರ್‌ನ ಬ್ಯಾಂಕ್ ಲಾಕರ್‌ನಲ್ಲಿದ್ದ 8 ಲಕ್ಷ ರೂ. ಗೆದ್ದಲು ಪಾಲು

• ಉದಯವಾಹಿನಿ ಉಳ್ಳಾಲ

ಕೋಟೆಕಾರ್‌ನ ರಾಷ್ಟ್ರೀಕೃತ ಬ್ಯಾಂಕೊಂದರ ಲಾಕರ್‌ನಲ್ಲಿ ಗ್ರಾಹಕರು ಇಟ್ಟಿದ್ದ 8 ಲಕ್ಷ ರೂ. ಗೆದ್ದಲು ಪಾಲಾಗಿದೆ. ಇದಕ್ಕೆ ಬ್ಯಾಂಕಿನ ನಿರ್ವಹಣೆ ಕೊರತೆಯೇ ಕಾರಣ ಎಂದು ಹಣ ಕಳೆದುಕೊಂಡ ಗ್ರಾಹಕರು ಆರೋಪಿಸಿದ್ದಾರೆ. ಆದರೆ ಅತ್ತ ಬ್ಯಾಂಕ್ ನವರು ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತಿದ್ದಾರೆ ಎಂಬ ಆರೋಪ ವ್ಯಕ್ತವಾಗಿದೆ. ಇದು ನಮಗೆ ಸಂಬಂಧಪಟ್ಟ ವಿಷಯವಲ್ಲ ಎಂದು ಬ್ಯಾಂಕಿನವರು ಹೇಳಿದ್ದಾರೆ. ಆರ್‌ಬಿಐ ನಿಯಮ ಪ್ರಕಾರ ಲಾಕರ್‌ನಲ್ಲಿ ಹಣ ಇರಿಸುವಂತಿಲ್ಲ. ಆದ್ದರಿಂದ ಹಣ ಗೆದ್ದಲು ಪಾಲಾಗಿರುವುದು ನಮಗೆ ಸಂಬಂಧಿಸಿದ ವಿಷಯವಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

ಹಣ ಕಳೆದುಕೊಂಡವರು ಈ ಸಂಬಂಧ ಬೆಂಗಳೂರಿನ ಪ್ರಧಾನ ಕಚೇರಿಗೆ ದೂರು ನೀಡಿದ್ದು, ಹಳೆಯ ಕಟ್ಟಡ ನಿರ್ವಹಣೆ ಕೊರತೆಯಿಂದ ಸಮಸ್ಯೆಯಾಗಿದ್ದು, ಅದನ್ನು ಸರಿಪಡಿಸಬೇಕು ಎಂದು ಮನವಿ ಮಾಡಿದ್ದಾರೆ. 6 ತಿಂಗಳ ಹಿಂದೆ ಲಾಕರ್‌ನಲ್ಲಿ ಕುಟುಂಬವೊಂದು ಹಣ ಇರಿಸಿತ್ತು. ಈಗ ಅಗತ್ಯ ಉದ್ದೇಶಕ್ಕಾಗಿ ಬಳಸಲು ದುಡ್ಡು ತೆಗೆದುಕೊಂಡು ಬರಲು ಹೋಗಿದ್ದಾಗ ಎಲ್ಲ ಹಣವನ್ನೂ ಗೆದ್ದಲು ಚೂರು ಚೂರು ಮಾಡಿದೆ. ಲಾಕರ್ ಮಳೆನೀರಿನಲ್ಲಿ ನೆನೆದ ಸ್ಥಿತಿಯಲ್ಲಿದ್ದು, ದುಡ್ಡು ಸಂಪೂರ್ಣ ಕಪ್ಪಾಗಿ ಹುಡಿ ಹುಡಿಯಾಗಿದೆ.

• ಕಳೆದ ನಾಲ್ಕು ವರ್ಷಗಳ ಹಿಂದೆ ಕೃಷಿಕರಿಂದ ಕೃಷಿಕರಿಗಾಗಿ, ಕೃಷಿಕರಿಗೋಸ್ಕರ ಆರಂಭಗೊಂಡ ಗ್ರಾಮಜನ್ಯ ಎನ್ನುವ ಕೃಷಿಕರ ಸಂಸ್ಥೆ

## ಜೇನು ಬೆಳೆಗಾರರ ಬದುಕಿಗೊಂದು 'ಆಶಾಕಿರಣ' ಜೇನು ಸಂಸ್ಕರಣಾ ಘಟಕ

• ಉದಯವಾಹಿನಿ ಪುತ್ತೂರು

ಜೇನಿನ ಮೌಲ್ಯವರ್ಧನೆಗೆ ಸಹಕಾರಿಯಾಗುವ ನಿಟ್ಟಿನಲ್ಲಿ ರೈತ ಉತ್ಪಾದಕ ಸಂಸ್ಥೆಯೊಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಕಳೆದ ನಾಲ್ಕು ವರ್ಷಗಳ ಹಿಂದೆ ಕೃಷಿಕರಿಂದ ಕೃಷಿಕರಿಗಾಗಿ, ಕೃಷಿಕರಿಗೋಸ್ಕರ ಆರಂಭಗೊಂಡ ಗ್ರಾಮಜನ್ಯ ಎನ್ನುವ ಕೃಷಿಕರ ಸಂಸ್ಥೆ ಇದೀಗ ದಕ್ಷಿಣ ಭಾರತದ ಏಕೈಕ ಜೇನು ಸಂಸ್ಕರಣಾ ಘಟಕವನ್ನು ಆರಂಭಿಸಲು ಸಜ್ಜಾಗಿದೆ.

ಸುಮಾರು 5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಘಟಕದಿಂದ ಜೇನು ಮತ್ತು ಹಲಸು ಕೃಷಿಕರಿಗೆ ಬಹಳಷ್ಟು ಪ್ರಯೋಜನವಾಗಲಿದೆ.

ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಮುಂಡೂರು ಗ್ರಾಮಪಂಚಾಯತ್ ವ್ಯಾಪ್ತಿಯ ಹಿಂದಾರು ಎಂಬಲ್ಲಿ ಈ ಘಟಕ ಇನ್ನೇನು ಕೆಲವೇ ತಿಂಗಳೊಳಗೆ ಪ್ರಾರಂಭಗೊಳ್ಳಲಿದೆ.

ಜೇನು ಬೆಳೆಗಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಘಟಕವನ್ನು ಆರಂಭಿಸಲಾಗಿದ್ದು, ಕೇಂದ್ರ ಸರ್ಕಾರದ ಸಣ್ಣ ರೈತರ ಕೃಷಿ ವ್ಯವಹಾರಗಳ ಸಂಘಟನೆ ಸಹಕಾರದೊಂದಿಗೆ ನ್ಯಾಶನಲ್ ಬೀ ಬೋರ್ಡ್



ಉದಯವಾಹಿನಿ ಚಿತ್ರ

**ಕೃಷಿಕರಿಗೆ ಬಹಳಷ್ಟು ಪ್ರಯೋಜನ**

ಮೂಲಕ ಸುಮಾರು 2.22 ಕೋಟಿ ಅನುದಾನದೊಂದಿಗೆ ಈ ಘಟಕ ನಿರ್ಮಾಣಗೊಳ್ಳುತ್ತಿದ್ದು, ಒಟ್ಟು ಐದು ಕೋಟಿಗೂ ಮಿಕ್ಕಿದ ಹಣವನ್ನು ಈ ಘಟಕ ತಯಾರಿಸುವುದಕ್ಕೋಸ್ಕರ ವಿನಿಯೋಗಿಸಲಾಗುತ್ತಿದೆ. ಪ್ರತಿದಿನ 15 ಟನ್ ಜೇನುಗಳ ಸಂಸ್ಕರಣೆ ಜೊತೆಗೆ ಸುಮಾರು 30 ಟನ್ ಜೇನು ಸಂಗ್ರಹಿಸುವ ಶೀತಲೀಕರಣ ವ್ಯವಸ್ಥೆಯೂ ಇಲ್ಲಿರಲಿದೆ. ಜೇನಿನ ಮೌಲ್ಯವರ್ಧನೆ ದೃಷ್ಟಿಯಲ್ಲಿ ಜೇನು ಮೇಣದ ಕ್ರೀಮ್, ಕ್ಯಾಂಡಲ್, ನೋವು ನಿವಾರಕ ಬಾಮ್ ಸೇರಿ 20 ಕ್ಕೂ ಮಿಕ್ಕಿ ಉತ್ಪನ್ನಗಳ ಪ್ರಯೋಗ ಮತ್ತು ಅಭಿವೃದ್ಧಿಪಡಿಸಿರುವ ಗ್ರಾಮಜನ್ಯ ಸಂಸ್ಥೆಯು ಈ ಘಟಕದ ಮೂಲಕ ಇನ್ನಷ್ಟು ಕೃಷಿಕರನ್ನು ತಲುಪುವ ಪ್ರಯತ್ನದಲ್ಲಿದೆ.

### ಗುಣಮಟ್ಟಕ್ಕೆ ಒತ್ತು

ಈ ಘಟಕವು ಮುಂದಿನ ದಿನಗಳಲ್ಲಿ ದಕ್ಷಿಣಕನ್ನಡ ಜಿಲ್ಲೆ ಸೇರಿದಂತೆ ಸೇರಿದಂತೆ ಸುಮಾರು ಐದು ಜಿಲ್ಲೆಯ ಜೇನು ಕೃಷಿಕರಿಗೆ ವರದಾನ ಆಗಲಿದೆ. ನಾಲ್ಕು ಕೋಟಿಗೂ ಮಿಕ್ಕಿ ಜೇನು ಪೆಟ್ಟಿಗೆಗಳ ಅಗತ್ಯವಿದೆ. ಇಲ್ಲಿ ಜೇನು ಸಂಸ್ಕರಣೆಯ ಜೊತೆಗೆ ಜೇನು ಮೇಣದ ಉತ್ಪನ್ನಗಳನ್ನು ತಯಾರಿಸುವ ಅತ್ಯಾಧುನಿಕ ಉಪಕರಣಗಳು ಹಾಗೂ ಉಚ್ಚ ಗುಣಮಟ್ಟದ ಪ್ರಯೋಗಾಲಯ ಸಹಾ ಲಭ್ಯವಿರಲಿದೆ. ಘಟಕದಲ್ಲಿ ಕೃಷಿಕರು ಮತ್ತು ಸದಸ್ಯರು ತಮ್ಮ ಜೇನಿನ ಸಂಸ್ಕರಣೆ ಮಾಡಿಕೊಳ್ಳುವುದು, ಗುಣಮಟ್ಟ ಪರೀಕ್ಷೆ, ಮಾರಾಟ ಇತ್ಯಾದಿಗಳಿಗೂ ಅವಕಾಶ ನೀಡಲಾಗುತ್ತದೆ ಎಂದು ಗ್ರಾಮಜನ್ಯ ಸಂಸ್ಥೆಯ ನಿರ್ದೇಶಕರಾದ ರಾಮ್ ಪ್ರತೀಕ್ ತಿಳಿಸಿದ್ದಾರೆ.

### ಹಲಸು-ಬಾಳೆಹಣ್ಣು ಮೌಲ್ಯವರ್ಧನೆ

ಶೀತಲ ಘಟಕದಲ್ಲಿ ಹಲಸಿನ ಹಾಗೂ ಬಾಳೆ ಹಣ್ಣಿನ ಪಲ್ಪ್ ತಯಾರಿಸಿ ಶೇಖರಿಸುವುದೂ ಸೇರಿದಂತೆ ಮೌಲ್ಯವರ್ಧನೆ ಹಾಗೂ ಮಾರಾಟ ಸರಪಳಿಯಲ್ಲಿ ಸಂಸ್ಥೆಯು ಮಹತ್ತರ ಪಾತ್ರ ವಹಿಸಲಿದೆ. ಕಳೆದ ಎರಡು ವರ್ಷಗಳಲ್ಲಿ ಸಂಸ್ಥೆಯು ಪ್ರಾಯೋಗಿಕವಾಗಿ ಕೃಷಿಕರಿಂದ ಹಲಸಿನ ಕಾಯಿ ಸಂಗ್ರಹಿಸಿ ಅದನ್ನು ಚಿಪ್ಸ್ ತಯಾರಿಕಾ ಸಂಸ್ಥೆಯ ಜೊತೆ ಒಡಂಬಡಿಕೆ ಮೂಲಕ ಸುಮಾರು 40 ಟನ್ ಮಾರಾಟ ಮಾಡಿದ್ದು ಮುಂಬರುವ ದಿನಗಳಲ್ಲಿ ಇದನ್ನು ಮುಂದುವರೆಸುವುದಲ್ಲದೆ ವಾರ್ಷಿಕ 100 ಟನ್ ಗುರಿ ತಲುಪುವುದು ಹಾಗೂ ಎಳೆ ಹಲಸು (ಗುಜ್ಜೆ) ಹಾಗೂ ಹಲಸಿನ ಹಣ್ಣಿನ ಮೌಲ್ಯವರ್ಧನೆಯತ್ತ ಗ್ರಾಮಜನ್ಯ ಸಂಸ್ಥೆ ಕೆಲಸ ಮಾಡಲಿದೆ ಎಂಬುವುದು ಸಂಸ್ಥೆಯ ನಿರ್ದೇಶಕ ನಿರಂಜನ್ ಪೋಳ್ಯ ಅವರ ಮಾತು.



ಉದಯವಾಹಿನಿ ಚಿತ್ರ

ಭಾರತೀಯ ಕಿಸಾನ್ ಸಂಘದ ಸಹಕಾರದೊಂದಿಗೆ ಗ್ರಾಮಜನ್ಯ ಸಂಸ್ಥೆಯು ನಾಲ್ಕಾರು ಉತ್ತಮ, ಮುಳ್ಳಿಲ್ಲದ ಬಿದಿರು ಜಾತಿಗಳನ್ನು ಗುರುತಿಸಿ ಗಿಡಗಳನ್ನು ಸರಬರಾಜು ಮಾಡಿರುವ ಗ್ರಾಮಜನ್ಯ ಸಂಸ್ಥೆ, ಬಿದಿರು ಕೃಷಿಯಲ್ಲೂ ತಮ್ಮ ಸಾಮರ್ಥ್ಯವನ್ನು ತೋರಿಸುವ ಹಂತದಲ್ಲಿದೆ -ಮೇಘಾ ಪಾಲೆತ್ತಾಡಿ

## ಭಿಕ್ಷಾಟನೆ ತಡೆ, ಕಾಣೆಯಾದ ಮಕ್ಕಳ ರಕ್ಷಣೆ ಕುರಿತು ಜನಜಾಗೃತಿ

• ಉದಯವಾಹಿನಿ ಬಳ್ಳಾರಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕ, ಸಖಿ-ಒನ್ ಸ್ಟಾಪ್ ಸೆಂಟರ್ ಇವರ ಸಹಯೋಗದಲ್ಲಿ ನಗರದ ರೈಲ್ವೇ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಭಿಕ್ಷಾಟನೆ ತಡೆ ಮತ್ತು ಕಾಣೆಯಾದ ಮಕ್ಕಳ ರಕ್ಷಣೆ ಕುರಿತು ಜನಜಾಗೃತಿ ಕಾರ್ಯಕ್ರಮ ಗುರುವಾರ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ(ಅಸಾಂಸ್ಥಿಕ ಸೇವೆ) ಚನ್ನಬಸಪ್ಪ ಪಾಟೀಲ್ ಅವರು ಮಾತನಾಡಿ, 'ಕೆಲವು ಜನರು ಭಿಕ್ಷಾಟನೆಯನ್ನು ವೃತ್ತಿಯನ್ನಾಗಿಸಿಕೊಂಡಿದ್ದು, ಈ ಪಿಡುಗನ್ನು ಸಮಾಜದಿಂದ ತಡೆಗಟ್ಟಲು ಹಾಗೂ ನಿಷೇಧಿಸಲು ಇಂತಹ ಕೃತ್ಯದಲ್ಲಿ ತೊಡಗಿಸಿಕೊಂಡಿರುವವರನ್ನು ಗುರುತಿಸಿ, ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ಅವರಿಗೆ ಪುನರ್ವಸತಿ ಕಲ್ಪಿಸಲಾಗುವುದು ಎಂದು ತಿಳಿಸಿದರು. ಮಕ್ಕಳ ವಿಶೇಷ ಪೊಲೀಸ್ ಘಟಕದ ಅಧಿಕಾರಿ ಲಲಿತಮ್ಮ ಅವರು ಮಾತನಾಡಿ,



ಉದಯವಾಹಿನಿ ಚಿತ್ರ

ಮಕ್ಕಳ ರಕ್ಷಣಾಧಿಕಾರಿ(ಸಾಂಸ್ಥಿಕ ಸೇವೆ) ಮಂಜುನಾಥ ಅವರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಯೊಜನೆಗಳ ಕುರಿತು ಜನರಿಗೆ ತಿಳಿಸಿಕೊಟ್ಟರು. ಮಕ್ಕಳ ಸಹಾಯವಾಣಿಯ ಸಂಯೋಜಕರಾದ ಆನಂದ ಅವರು ಮಕ್ಕಳ ಸಹಾಯವಾಣಿ-1098 ಕುರಿತ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಿ ಸಾರ್ವಜನಿಕರಿಗೆ ಮಕ್ಕಳ ಸಹಾಯವಾಣಿ ಸೇವೆಗಳ ಕುರಿತು ತಿಳಿಸಿದರು.

ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು, ಚಿಂದಿ ಹಾಯುವ ಮಕ್ಕಳು, ಬೀದಿ ಮಕ್ಕಳು, ಕಾಂಠ್ರಿಕ ಪದ್ಧತಿಯಲ್ಲಿ ತೊಡಗಿರುವ ಮಕ್ಕಳು, ಅನಾಥ ಮಕ್ಕಳು, ಸಾಗಣೆಯಾದ ಮಕ್ಕಳು, ಪರಿತ್ಯಜಿಸಿಲ್ಪಟ್ಟ ಮಕ್ಕಳು, ಶೋಷಣೆ ಮತ್ತು ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ-1098 ಇಲ್ಲವೇ ಪೊಲೀಸ್ ತುರ್ತು ಸೇವೆ 112 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಹೇಳಿದರು.

ಕಾನೂನು ಪರಿವೀಕ್ಷಣಾಧಿಕಾರಿ ಈಶ್ವರ್ ರಾವ್ ಮಾತನಾಡಿ, ಕಾಣೆಯಾದ ಯಾವುದೇ ಮಗು ಕಂಡು ಬಂದಲ್ಲಿ ಕೂಡಲೇ ಮಕ್ಕಳ ಸಹಾಯವಾಣಿ-1098 ಮಾಹಿತಿ ನೀಡಿ, ಇಲ್ಲವೇ ಹತ್ತಿರದ ಪೊಲೀಸ್ ಠಾಣೆಗೆ ಮಗುವನ್ನು ಒಪ್ಪಿಸಬೇಕು ಎಂದು ಜಾಗೃತಿ ಮೂಡಿಸಿದರು.

## ಅರಣ್ಯ ಇಲಾಖೆ ವಿರುದ್ಧ ಹೋರಾಟ ತೀವ್ರ

• ಉದಯವಾಹಿನಿ ಹಾಸನ

ಬೇಲೂರು ತಾಲ್ಲೂಕಿನ ಅಡವಿ ಬಂಟೆನಹಳ್ಳಿಯಲ್ಲಿ ರೈತರ ಹಾಗೂ ಅರಣ್ಯ ಇಲಾಖೆ ನಡುವಿನ ಭೂವಿವಾದ ತಾರಕಕೇರಿದ್ದು ಭೂಮಿ ವಶಕ್ಕೆ ಅರಣ್ಯ ಇಲಾಖೆ ತೆಗೆದಿದ್ದ ಕಂದಕವನ್ನು ಗ್ರಾಮಸ್ಥರು ಮುಚ್ಚುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಇಲ್ಲಿನ ರೈತರಿಗೆ ಮಂಜೂರಾಗಿದ್ದ ಭೂಮಿ ಅರಣ್ಯ ಇಲಾಖೆಗೆ ಸೇರಿದ್ದು ಎಂದು ಸರಹದ್ದು ಗುರುತಿಸುವ ನೆಪದಲ್ಲಿ ರೈತರ ಜಮೀನಿನ ಮಧ್ಯಭಾಗದಲ್ಲಿಯೇ ಬೆಳಿಗ್ಗೆಯಿಂದ ರಾತ್ರಿವರೆಗೂ ಇಲಾಖೆಯ ಸಿಬ್ಬಂದಿ ದೊಡ್ಡ ಕಂದಕವನ್ನು ನಿರ್ಮಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಶನಿವಾರ ಗ್ರಾಮಸ್ತರು ಮತ್ತು ರೈತ ಮಹಿಳೆಯರು ಸೇರಿ ಅರಣ್ಯ ಇಲಾಖೆ ನಿರ್ಮಿಸಿದ್ದ ಕಂದಕವನ್ನು ಮುಚ್ಚಿದ್ದಾರೆ. ರೈತರೆಲ್ಲರೂ ಕೈಯಲ್ಲಿ ಕೆಪಿಆರ್‌ಎಸ್ ಬಾವುಟ ಹಿಡಿದು ಕೆಲಹೊತ್ತು ಅರಣ್ಯ ಇಲಾಖೆ ವಿರುದ್ಧಧಿಕ್ಕಾರಗಳನ್ನು ಕೂಗಿ ಹಾರೆ, ಗುದ್ದಲಿ ಹಿಡಿದು ಕಾಲುವೆಗೆ ಮಣ್ಣು ತುಂಬಿ ಆಕ್ರೋಶ ವ್ಯಕ್ತಪಡಿಸಿದರು. ಅಡವಿ ಬಂಟೇನಹಳ್ಳಿ ಗ್ರಾಮದ ರೈತರ ಕೃಷಿ ಭೂಮಿ ಮಧ್ಯಭಾಗದಲ್ಲಿ ಟ್ರಂಚ್ ತೆಗೆಯುವ ಮೂಲಕ ದೌರ್ಜನ್ಯ ಎಸಗಲಾಗಿದೆ. ಆದ್ದರಿಂದ ಅರಣ್ಯ ಇಲಾಖೆಯ ಕ್ರಮದ ವಿರುದ್ಧ ಹಕ್ಕೊತ್ತಾಯವಾಗಿ ಕಂದಕವನ್ನು ಮುಚ್ಚಿದ್ದೇವೆ. ಊರಿನ ಗೋಮಾಳ ಮತ್ತು ರೈತರು ಸಾಗುವಳಿ ಮಾಡುತ್ತಿರುವ ಭೂಮಿಗೆ ಕಂದಾಯ ಇಲಾಖೆ ಹಕ್ಕುಪತ್ರ ನೀಡಿರುವ ಪಹಣಿಯಲ್ಲಿ ಅರ್ಹರ ಹೆಸರು ಬರುತ್ತಿದ್ದು ಈ ಭೂಮಿಯನ್ನೇ ಅರಣ್ಯ ಇಲಾಖೆಯವರು ತಮಗೆ ಸೇರಿದ್ದು ಎಂದು ವಾದದೊಂದಿಗೆ ಬಲವಂತವಾಗಿ ತೆರವುಗೊಳಿಸಲು ಮುಂದಾಗಿದ್ದಾರೆ' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಆರ್. ನವೀನ್ ಕುಮಾರ್ ದೂರಿದರು.

**ಕಾಲುವೆಗೆ ಮಣ್ಣು ತುಂಬಿ ಆಕ್ರೋಶ**

ರೈತ ವಿರೂಪಾಕ್ಷ ಮಾತನಾಡಿ, 'ಗ್ರಾಮದಲ್ಲಿ ಸುಮಾರು 150 ರೈತರಿದ್ದು 1969ರಿಂದಲೂ ಕಾನೂನಿನಂತೆ ಮಂಜೂರಾತಿ ಪಡೆದು ಉಳುಮೆ ಮಾಡಿಕೊಂಡು ಬಂದಿದ್ದೇವೆ. ಅರಣ್ಯ ಇಲಾಖೆಯವರು ರಾತ್ರೋರಾತ್ರಿ ಗೋಮಾಳ ಸೇರಿದಂತೆ ನಮ್ಮ ಭೂಮಿಯಲ್ಲೂ ಕಂದಕ ನಿರ್ಮಿಸಿ ಹೋಗಿದ್ದಾರೆ. ಪ್ರತಿ ರೈತರು 1-2 ಎಕರೆ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದು ಇದೀಗ ಅರಣ್ಯ ಇಲಾಖೆ ದೌರ್ಜನ್ಯ ಎಸಗುತ್ತಿದೆ. ಸರ್ಕಾರ ರೈತರ ಪರವಾಗಿ ನ್ಯಾಯ ಒದಗಿಸಬೇಕು' ಎಂದು ಮನವಿ ಮಾಡಿದರು.



ಉದಯವಾಹಿನಿ ಚಿತ್ರ

## ಮಾ. 8ರಂದು ಜಿಲ್ಲೆಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್

• ಉದಯವಾಹಿನಿ ವಿಜಯಪುರ

ಜಿಲ್ಲೆಯಾದ್ಯಂತ ಇರುವ ಎಲ್ಲ ಅಧೀನ ನ್ಯಾಯಾಲಯಗಳಲ್ಲಿ ಮಾರ್ಚ್ 8 ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದ್ದು, ಈ ಅದಾಲತ್‌ನಲ್ಲಿ ಕಕ್ಷಿದಾರರು ಭಾಗವಹಿಸಿ ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಕ್ಕೆ ಅವಕಾಶವಿರುವುದರಿಂದ ಈ ಅದಾಲತ್ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಶಿವಾಜಿ ಅನಂತ ನಲವಡೆ ತಿಳಿಸಿದರು.

ಶುಕ್ರವಾರ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಎಡಿಆರ್ ಕಟ್ಟಡದಲ್ಲಿ ಆಯೋಜಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಎಲ್ಲ ವರ್ಗದ ಕಕ್ಷಿದಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆಯ ಎಲ್ಲ ತಾಲೂಕಾ ನ್ಯಾಯಾಲಯಗಳಲ್ಲಿ ಮಾರ್ಚ್ 8 ರಂದು ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ರಾಜಿ ಸಂಧಾನಕ್ಕೆ ಒಳಪಡಬಹುದಾದ ವ್ಯಾಜ್ಯ ಪೂರ್ವ ಪ್ರಕರಣಗಳು, ಚೆಕ್ ಅಮಾನ್ಯದ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ, ರಾಜಿಯಾಗಬಲ್ಲ ಅಪರಾಧಿಕ



ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಮಾರ್ಚ್ 8 ರಂದು ಜರುಗುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಕಕ್ಷಿದಾರರು ತಮ್ಮ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡು ನೆಮ್ಮದಿಯ ಜೀವನಕ್ಕೆ ನಾಂದಿ ಹಾಡಲು ಸುವರ್ಣಾವಕಾಶ ಕಲ್ಪಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ತಿಳಿಸಿದರು.

ಪ್ರಕರಣಗಳು, ವೈವಾಹಿಕ ಪ್ರಕರಣಗಳು ಮತ್ತು ಇತರೆ ಸಿವಿಲ್ ಪ್ರಕರಣಗಳು, ಕರ್ನಾಟಕ ರಿಯಲ್ ಎಸ್ಟೇಟ್ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಪ್ರಕರಣಗಳು (ರೇರಾ), ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಸಾಲ ವಸೂಲಾತಿ ನ್ಯಾಯಾಧೀಕರಣದ ಪ್ರಕರಣಗಳು (ಡಿಆರ್ಟಿ), ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್ಸಿ), ಕಾಯಂ ಜನತಾ ನ್ಯಾಯಾಲಯದಲ್ಲಿನ ಪ್ರಕರಣಗಳು, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಕಾರ್ಮಿಕ ವಿವಾದಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು, ಪಿಂಚಣಿ ಪ್ರಕರಣಗಳು, ಕಂದಾಯ ಪ್ರಕರಣಗಳು ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ 01-02-2025ಕ್ಕೆ 44,783 ಸಿವಿಲ್ ಪ್ರಕರಣಗಳು ಹಾಗೂ 23,678 ಕ್ರಿಮಿನಲ್ ಪ್ರಕರಣಗಳು ಒಳಗೊಂಡಂತೆ ಒಟ್ಟು 68,461 ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದು, ಇವುಗಳಲ್ಲಿ ಈಗಾಗಲೇ 4,330 ಸಿವಿಲ್ ಪ್ರಕರಣಗಳು ಹಾಗೂ 3,579 ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಒಟ್ಟು 7,909 ಪ್ರಕರಣಗಳನ್ನು ಇತ್ಯರ್ಥಕ್ಕಾಗಿ ಗುರುತಿಸಲಾಗಿದೆ. ಸಂಬಂಧಿಸಿದ ವಕೀಲರು ಹಾಗೂ ಕಕ್ಷಿದಾರರೊಂದಿಗೆ ಮಾತುಕತೆಯ ಮೂಲಕ ಇನ್ನೂ ಹೆಚ್ಚಿನ ಪ್ರಕರಣಗಳನ್ನು ಸಹ ರಾಜಿಗಾಗಿ ಗುರುತಿಸಲಾಗುತ್ತಿದೆ. ಇನ್ನೂ ಹೆಚ್ಚಿನ ಪ್ರಕರಣಗಳು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಗೊಳ್ಳುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್. ಹಾಗರಗಿ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಜಿ. ಬಿರಾದಾರ ಹಾಗೂ ಜಿಲ್ಲಾ ನ್ಯಾಯವಾದಿಗಳ ಸಂಘದ ಕಾರ್ಯದರ್ಶಿ ಎಸ್.ಎಸ್. ಚೂರಿ ಉಪಸ್ಥಿತರಿದ್ದರು.

## ಮಿನಿ ತಾರಾಲಯಕ್ಕೆ 12.88 ಕೋಟಿ, ವಸತಿ ಶಾಲೆಗಳಿಗೆ 44 ಕೋಟಿ ವೆಚ್ಚಕ್ಕೆ ಅಸ್ತು

• ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಮೂಲಕ ಈ ಯೋಜನೆ ಕಾರ್ಯಗತ

• ಉದಯವಾಹಿನಿ ವಿಜಯಪುರ

ವಿಜಯಪುರದಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಕಿರು ತಾರಾಲಯ (ಮಿನಿ ಪ್ಲಾನೆಟೇರಿಯಂ) ಹಾಗೂ ಬಬಲೇಶ್ವರ ಮತ್ತು ವಿಜಯಪುರದಲ್ಲಿ ಎರಡು ಹಾಸ್ಟೆಲ್‌ಗಳ ನಿರ್ಮಾಣಕ್ಕೆ ಒಟ್ಟು 56. 88 ಕೋಟಿ ವ್ಯಯಿಸಲು ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಅವರು, '2015-16ನೇ ಸಾಲಿನ ಬಜೆಟ್ಟಿನಲ್ಲೇ ವಿಜಯಪುರವೂ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಕಿರು ತಾರಾಲಯ ಸ್ಥಾಪಿಸುವ ಘೋಷಣೆ ಮಾಡಲಾಗಿತ್ತು.

ಆದರೆ ಕಾರಣಾಂತರಗಳಿಂದ ಇದು ಅನುಷ್ಠಾನಕ್ಕೆ ಬರಲಿಲ್ಲ. ಈಗ 12.88 ಕೋಟಿಗೆ ಪರಿಷ್ಕೃತ ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಇದಕ್ಕೆ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ಕೊಡಲಾಗಿದೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಮೂಲಕ ಈ ಯೋಜನೆ ಕಾರ್ಯಗತಗೊಳ್ಳಲಿದೆ' ಎಂದಿದ್ದಾರೆ.

ವಿಜಯಪುರದಲ್ಲಿ ಈ ಯೋಜನೆಯ ಕಾಮಗಾರಿಗೆ ಇದುವರೆಗೆ 1.44 ಕೋಟಿ ರೂ. ವೆಚ್ಚವಾಗಿದೆ. ತಾರಾಲಯದಲ್ಲಿ ಡೋಮ್, ಪ್ರೊಜಕ್ಷನ್ ಸಿಸ್ಟಂ, ಒಳಾಂಗಣ, ಹೊರಾಂಗಣ ವಿಜ್ಞಾನ ಪ್ರದರ್ಶಿಕೆಗಳು, ಆಡಿಯೋ ವ್ಯವಸ್ಥೆ, ಹವಾ ನಿಯಂತ್ರಣ ವ್ಯವಸ್ಥೆ ಎಲ್ಲವೂ ಇರಲಿದೆ. ಇದರ ಮೂಲಕ ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ತಿಳಿವಳಿಕೆಯನ್ನು ಹೆಚ್ಚಿಸಲಾಗುವುದು. ನನೆಗುದಿಗೆ ಬಿದ್ದಿದ್ದ ಈ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆದಿದ್ದಾಗಿ ಅವರು ತಿಳಿಸಿದ್ದಾರೆ.

ಈ ಎರಡೂ ವಸತಿ ಶಾಲೆಗಳು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೀಸಲಾಗಿದ್ದು, ಇಲ್ಲಿ ತಲಾ 250ರಂತೆ ಒಟ್ಟು 500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈಗ ಇವು ಬಾಡಿಗೆ ಕಟ್ಟಡದಲ್ಲಿ ಇರುವುದರಿಂದ ಮೂಲಸೌಕರ್ಯ ಒದಗಿಸಲು ಸಾಧ್ಯವಾಗಿಲ್ಲ. ಹೊಸ ಕಟ್ಟಡಗಳಲ್ಲಿ ಶಾಲಾ ಕಟ್ಟಡ, ಬಾಲಕರ ಮತ್ತು ಬಾಲಕಿಯರ ಹಾಸ್ಟೆಲ್, ಭೋಜನಾಲಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವಸತಿ ಗೃಹಗಳು, ರಂಗಮಂದಿರ, ಕಾಂಪೌಂಡ್, ಸೋಲಾರ್ ವಾಟರ್ ಹೀಟರ್, ಒಳಚರಂಡಿ ವ್ಯವಸ್ಥೆ ಮುಂತಾದವು ಇರಲಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

**ಸಂಪುಟ ಸಭೆಯಲ್ಲಿ ಹಸಿರು ನಿಶಾನೆ**



### 2 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ

ಬಬಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಮದಾಪುರದಲ್ಲಿರುವ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಡಾ.ಬಿ ಆರ್ ಅಂಬೇಡ್ಕರ್ ವಸತಿ ಶಾಲೆ ಮತ್ತು ವಿಜಯಪುರದಲ್ಲಿರುವ ವಸತಿಸಹಿತ ಪದವಿಪೂರ್ವ ಕಾಲೇಜಿಗೆ ಸ್ವಂತ ಕಟ್ಟಡಕ್ಕಾಗಿ ತಲಾ 22 ಕೋಟಿ ರೂ.ಗಳಂತೆ ಒಟ್ಟು 44 ಕೋಟಿ ರೂ. ಒದಗಿಸಲು ಕೂಡ ಸಂಪುಟ ಸಭೆಯಲ್ಲಿ ಹಸಿರು ನಿಶಾನೆ ಸಿಕ್ಕಿದೆ ಎಂದು ಪಾಟೀಲ ತಿಳಿಸಿದ್ದಾರೆ.

ರಾಜ್ಯದಲ್ಲಿರುವ 61 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಕ್ಕಾಗಿ ಒಟ್ಟು 1292. 50 ಕೋಟಿ ರೂ. ಒದಗಿಸಲು ಸರಕಾರ ತೀರ್ಮಾನಿಸಿದೆ. ಇದರಲ್ಲಿ ಜಿಲ್ಲೆಯ ಈ ಎರಡು ಶಾಲೆಗಳೂ ಸೇರಿವೆ ಎಂದು ಅವರು ಹೇಳಿದ್ದಾರೆ.

## ದಿನ ಭವಿಷ್ಯ

| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು.

**ವೃಷಭ** ನಿಮ್ಮ ಅಹಾರ ಕ್ರಮದ ಬಗ್ಗೆ, ವಿಶೇಷವಾಗಿ ಮೈಗ್ರೇನ್ ರೋಗಿಗಳು ಸೂಕ್ತ ಎಚ್ಚರ ತೆಗೆದುಕೊಳ್ಳಬೇಕು. ಅವರು ತಮ್ಮ ಊಟ ತಪ್ಪಿಸಿಕೊಂಡಲ್ಲಿ ಅದು ಅವರಿಗೆ ಅನಗತ್ಯ ಭಾವನಾತ್ಮಕ ಒತ್ತಡವನ್ನು ಉಂಟುಮಾಡಬಹುದು.

**ಮಿಥುನ** ಸಮೃದ್ಧ ಮತ್ತು ಹೆಚ್ಚಿನ ಕೊಲೆಸ್ಟರಾಲ್ ಇರುವ ಆಹಾರ ತಪ್ಪಿಸಲು ಪ್ರಯತ್ನಿಸಿ. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ.

**ಕರ್ಕಾಟಕ** ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ಭೇಟಿ ನೀಡುವ ಅತಿಥಿಗಳು ನಿಮ್ಮ ಸಂಜೆಯನ್ನು ಆಕ್ರಮಿಸಿಕೊಳ್ಳಬಹುದು.

**ಸಿಂಹ** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ.

**ಕನ್ಯಾ** ಕುಟುಂಬದ ಸದಸ್ಯರು ನಿಮ್ಮ ಜೀವನದಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ. ನಿಮ್ಮ ಉಪಸ್ಥಿತಿ ನಿಮ್ಮ ಪ್ರೀತಿಪಾತ್ರರಿಗೆ ಈ ವಿಶ್ವವನ್ನು ಒಂದು ಯೋಗ್ಯ ಸ್ಥಾನವನ್ನಾಗಿ ಮಾಡುತ್ತದೆ.

**ತುಲಾ** ನಿಮ್ಮ ಉಚಿತ ಸಮಯವನ್ನು ಸರಿಯಾಗಿ ಬಳಸಿಕೊಳ್ಳಲು ತಮ್ಮ ಹಳೆ ಸ್ನೇಹಿತರೊಂದಿಗೆ ಭೇಟಿ ಮಾಡಲು ಯೋಜಿಸಬಹುದು. ಸಂಗಾತಿಯ ಜೊತೆಗೆ ನಿಮ್ಮ ಜೀವನದ ಅತ್ಯುತ್ತಮ ದಿನವನ್ನು ಕಳೆಯುತ್ತೀರಿ.

**ವೃಶ್ಚಿಕ** ಮನರಂಜನೆ ಮತ್ತು ಮೋಜಿನ ಒಂದು ದಿನ. ಯಾವುದೇ ದೀರ್ಘ ಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

**ಧನಸ್ಸು** ದ್ವೇಷದ ಭಾವನೆ ದುಬಾರಿಯೆನಿಸಬಹುದು. ಇದು ನಿಮ್ಮ ಸಹನೆಯನ್ನು ಕುಂಠಿತಗೊಳಿಸುವುದಷ್ಟೇ ಅಲ್ಲದೇ ವಿವೇಚನಾಶಕ್ತಿಯನ್ನೂ ಕುಂಠಿತ ಗೊಳಿಸುತ್ತದೆ ಮತ್ತು ಸಂಬಂಧದಲ್ಲಿ ಶಾಶ್ವತ ಬಿರುಕನ್ನು ಸೃಷ್ಟಿಸುತ್ತದೆ.

**ಮಕರ** ಗೃಹ ಜೀವನ ಶಾಂತಿಯುತ ಮತ್ತು ಉತ್ತಮವಾಗಿರುತ್ತದೆ ನಿಮ್ಮ ಕರೆಯನ್ನು ಮುಂದುವರಿಸುವ ಮೂಲಕ ನಿಮ್ಮ ಪ್ರಣಯದ ಸಂಗಾತಿಯನ್ನು ಚುಡಾಯಿಸುತ್ತೀರಿ.

**ಕುಂಭ** ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ನೀವು ಸಾಮಾಜಿಕ ಕಾರ್ಯಗಳು ಮತ್ತು ಸಮಾರಂಭಗಳಲ್ಲಿ ಭಾಗವಹಿಸಿದಲ್ಲಿ ಸ್ನೇಹಿತರು ಮತ್ತು ಹೊಸ ಪರಿಚಯಸ್ಥರನ್ನು ಪಡೆಯುತ್ತೀರಿ.

**ಮೀನ** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ– ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ.

# ಸಂತೋಷಕ್ಕೆ ಸ್ವಾಗತಿಸಿ, ಒತ್ತಡಕ್ಕೆ ಅಂತ್ಯ ಹಾಡಬೇಕಿದೆ: ಬಿ.ಕೆ ಶಕ್ತಿಕಾಂತ

## • ನಾವು ಭೂತಕಾಲದೆಲ್ಲವನ್ನು ನೆನಪು ಮಾಡಿ ಚಿಂತೆಗೊಳಗಾಗುತ್ತೇವೆ ಆದರೆ ಅದು ಯಾವ ಪ್ರಯೋಜನವಿಲ್ಲ

• **ಉದಯವಾಹಿನಿ ಬೀದರ್**

ನಿತ್ಯ ಜೀವನದಲ್ಲಿ ಸಂತೋಷಕ್ಕೆ ಸ್ವಾಗತಿಸಿ, ಒತ್ತಡಕ್ಕೆ ಅಂತ್ಯ ಹಾಡಬೇಕಾಗಿದೆ ಎಂದು ರಾಜಸ್ಥಾನ ಮೌಂಟ್ ಅಬುದ ಅಂತರಾಷ್ಟ್ರೀಯ ಪ್ರೇರಣಾದಾಯಿ ಪ್ರವಚನಕಾರರಾದ ಬಿ.ಕೆ ಶಕ್ತಿಕಾಂತ ಭಾಯಿ ಜಿ ಹೇಳಿದರು. ನಗರದ ಸಾಯಿ ಸ್ಕೂಲ್ ಅವರಣದಲ್ಲಿ ಶುಕ್ರವಾರ ಸಂಜೆ ಬ್ರಹ್ಮಾಕುಮಾರಿಸ್ ಕೇಂದ್ರ, ಪಾವನಧಾಮ ವತಿಯಿಂದ ಮೂರು ದಿವಸಗಳ ವರೆಗೆ ಜರುಗಲಿರುವ ಜೀವನೋತ್ಸವ ಪ್ರವಚನ ಮಾಲೆ ಕಾರ್ಯಕ್ರಮದ ಮುಖ್ಯ ಕೇಂದ್ರ ಬಿಂದುಗಳಾಗಿ ಮಾತನಾಡಿದ ಅವರು, ನಿತ್ಯ 75 ಪ್ರತಿಶತದಷ್ಟು ರೋಗಗಳು ಮಾನಸಿಕ ಖಿನ್ನತೆಯಿಂದಲೇ ಬರುತ್ತವೆ ಎಂದರು.


ಉದಯವಾಹಿನಿ ಚಿತ್ರ

ನಾವು ನಮ್ಮಲ್ಲಿ ಕೆಲಸಕ್ಕೆ ಬಾರದಷ್ಟು ಅದೆಷ್ಟೊ ಚಿಂತೆಗಳಳನ್ನು ಮನಸ್ಸಿನಲ್ಲಿ ಹಿಡಿದಿಟ್ಟು, ನಮ್ಮ ಮನಸ್ಸಿನ ಕಂಟ್ರೋಲ್ ಇನ್ಯಾರಿಗೊ ಕೊಟ್ಟು ಒದ್ದಾಡುತ್ತಿರುತ್ತೇವೆ. ಇಂದು ಒತ್ತಡದ ಬದುಕಿನಿಂದ ಹೃದಯರೋಗ, ಸಿಟ್ಟಿನಿಂದ ಕ್ಯಾನ್ಸರ್, ಗರ್ವದಿಂದ ವರ್ತಿಸುತ್ತಿದ್ದರೆ ಕುತ್ತಿಗೆ ನೋವು ಬರುವ ಸಂಭೌ ಇರುತ್ತದೆ. ಆದ್ದರಿಂದ ನಿತ್ಯ ಖುಷಿ, ಪ್ರೇಮ, ಆನಂದ, ಶಕ್ತಿ, ಶಾಂತಿ, ಜ್ಞಾನ, ಪವಿತ್ರತೆ ಎಂಬ ಸಪ್ತ ಗುಣಗಳನ್ನು ನಿತ್ಯ ಧರಿಸಿದಲ್ಲಿ ಒತ್ತಡ ಮುಕ್ತ ಬದುಕು ಸಾಧ್ಯವಿದೆ ಎಂದರು.ನಿವೃತ್ತ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಚಂದ್ರಕಾಂತ ಗುದಗೆ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಉದ್ಯಮಿ ಬಸವ ರಾಜ ಧನ್ನುರ್, ರಮೇಶ ಗೋಯಲ್, ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಸತೀಶ ಪಾಟೀಲ, ಬ್ರಹ್ಮಾಕುಮಾರಿ ಕೇಂದ್ರ ಪಾವನ ಧಾಮದ ಪ್ರವರ್ತಕರಾದ ಬಿ.ಕೆ ಪ್ರಭಾಕರ ಕೋರವಾರ ಹಾಗೂ ಇತರರು ವೇದಿಕೆಯಲ್ಲಿದ್ದರು.

**ಜೀವನೋತ್ಸವ ಪ್ರವಚನ ಮಾಲೆ**

ಆರಂಭದಲ್ಲಿ ನಾಸಿಕ್ ನ ಶಾಸ್ತ್ರೀಯ ಸಂಗೀತಗಾರರಾದ ಬಿ.ಕೆ ಓಂಕಾರ ಭಾಯಿ ಜಿ ಸಂಗೀತ ಸಂಜೆ ಕಾರ್ಯಕ್ರಮ ಜರುಗಿತು.

ಕು. ಸಂಯುಕ್ತಾ ಹಾಗೂ ಕು.ಅನನ್ಯಾ ಸ್ವಾಗತ ನೃತ್ಯಗೈದರು. ಬ್ರಹ್ಮಾಕುಮಾರಿ ಕೇಂದ್ರ ಪಾಚನದಸಾಮ ಸಂಚಾಲಕಿ ಬಿ.ಕೆ ಪ್ರತಿಮಾ ಬಹೆನ್ ಜಿ ಸರ್ವರನ್ನು ಸ್ವಾಗತಿಸಿದರು. ನೌಬಾದ್ ಬ್ರಹ್ಮಾಕುಮಾರಿ ಕೇಂದ್ರದ ಬಿ.ಕೆ ಜ್ಯೋತಿ ಬಹೆನ್ ಕಾರ್ಯಕ್ರಮ ನಿರೂಪಿಸಿದರು.

ಇದಕ್ಕೂ ಮುನ್ನ ಆಗಮಿಸಿದ ಅತಿಥಿ ಗಣ್ಯರು ಆರತಿ ಬೆಳಗಿ ಸಹಸ್ರ ಜ್ಯೋತಿರ್ಲಿಂಗ ದರುಶನಕ್ಕೆ ಚಾಲನೆ ನೀಡಿದರು.

ಬ್ರಹ್ಮಾಕುಮಾರಿಸ್ ಕೇಂದ್ರ ಶಿವಶಕ್ತಿ ಭವನದ ಬಿ.ಕೆ ಸುಮಂಗಲಾ ಬಹೆನ್ ಜಿ ಹಾಗೂ ಬಿ.ಕೆ ಸುನಂದಾ ಬಹೆನ್ ಜಿ, ಡಾ.ಎಸ್. ಎಸ್ ಸಿದ್ದಾರೆಡ್ಡಿ ಫೌಂಡೇಶನ್ ಗೌರವಾಧ್ಯಕ್ಷೆ ಡಾ.ಗುರಮ್ಮ ಸಿದ್ದಾರಡ್ಡಿ, ಬಿ.ಕೆ ಗುರುದೇವಿ ಅಕ್ಕನವರು ಸೇರಿದಂತೆ ನೂರಾರು ಬಿ.ಕೆ ಸಹೋದರ, ಸಹೋದರಿಯರು, ಸಾವಿರಾರು ಭಕ್ತಾದಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ನಾವು ಭೂತಕಾಲದೆಲ್ಲವನ್ನು ನೆನಪು ಮಾಡಿ ಚಿಂತೆಗೊಳಗಾತ್ತೇವೆ. ಆದರೆ ಅದು ಯಾವ ಪ್ರಯೊಜನವಿಲ್ಲ. ಸುಮ್ಮನ್ನೆ ಭವಿಷ್ಯದ ಕನಸ್ಸು ಕಾಣಿ ವರ್ತಮಾನದಲ್ಲಿ ಆಗುವ ಅದೆಷ್ಟೊ ಸತ್ಯ ಘಟನೆಗಳನ್ನು ಮರೆತು ಪಶ್ಚಾತ್ತಾಪ ಪಡುತ್ತೇವೆ. ಸದಾ ಪ್ರಸ್ತುತತೆಗೆ ಒತ್ತು ನೀಡಬೇಕು, ನಮ್ಮ ಬದುಕಿನಲ್ಲಿ ಧನಾತ್ಮಕವೆಂಬ ಚೆಂಡನ್ನು ಎಸೆದರೆ ನಮಗೆ ಸದಾ ಧನಾತ್ಮಕ ಶಕ್ತಿ ದೊರಕುತ್ತದೆ. ಕೆಲಸಕ್ಕೆ ಬಾರದ ಸಾವಿರಾರು ಮಾತುಗಳು ನಮ್ಮಲ್ಲಿ ಶೇಖರಿಸಿಕೊಂಡು ನಮ್ಮ ಮನಸ್ಸನ್ನು ಕಸದ ಪೆಟ್ಟಿಗೆಯನ್ನಾಗಿ ಮಾಡಿ ಕೊಂಡಿದ್ದೇವೆ. ಇದು ಹಾರ್ಟ್ ಬ್ಲಾಕೇಜ್‌ಗೆ ಕಾರಣವಾಗುತ್ತದೆ. ನಮ್ಮಲ್ಲಿ ಪರಮಾತ್ನ ಶಕ್ತಿ ಅಡಗಿದ್ದು, ಅದನ್ನು ಹೊರಗಡೆ ತರುವ ಅರಿವು ಬೆಳೆಸಿಕೊಳ್ಳಬೇಕು. ಎದುರಿನವರು ನಮಗೆ ಏನೆ ಜರಿದರೂ ನಾವು ಪ್ರತಿಕ್ರಿಯಿಸದೇ ಮುಗುಳ್ನಗುತ್ತ ಸಾಗಿದರೆ ಎದುರಿನವನ ಸಿಟ್ಟು ತಣ್ಣದಾಗಿ, ನಮಗೂ ಯಾವುದೇ ಒತ್ತಡವಾಗದೇ ನಿರಾಯಾಸವಾಗಿ ಮುಂದೆ ಸಾಗಬಹುದಾಗಿದೆ **-ಬಿ.ಕೆ ಶಕ್ತಿಕಾಂತ ಭಾಯಿ ಜಿ,** ಪ್ರವಚನಕಾರ

### ಧನಾತ್ಮಕ ವಿಚಾರಗಳನ್ನು ಮನದಲ್ಲಿ ಭರಿಸಿ

ಅಧ್ಯಾತ್ಮವಲ್ಲಿ ಆತ್ಮವನ್ನು 6ನೇ ಇಂದ್ರಿಯಕ್ಕೆ ಹೋಲಿಸಲಾಗುತ್ತದೆ. ತಾಯಿಯ ಗರ್ಭದಲ್ಲಿದ್ದಾಗಲೇ 4ನೇ ತಿಂಗಳಲ್ಲಿ ಒಳಗಿರುವ ಶರೀರಕ್ಕೆ ಆತ್ಮ ಸೇರಿಕೊಳ್ಳುತ್ತದೆ. ಆಗ ಆ ಶರೀರ ಎಕ್ಟಿವ್ ಆಗುತ್ತದೆ. ಅಲ್ಲಿಯ ವರೆಗೆ ಕೇವಲ ನಿರ್ಜಿವದ ಮುದ್ದೆಯಾಗಿರುತ್ತದೆ. ಹಿಂದಿನ ಜನ್ಮದ ನಮ್ಮ ಎಲ್ಲಾ ನೆನಹುಗಳು ಖಾಲಿಯಾಗಿ ಹೊಸ ಚೈತನ್ಯವಾಗಿ ಹೊರ ಹೊಮ್ಮುತ್ತದೆ. ಅಷ್ಟು ಪರಿಶುದ್ದವಿರುವ ನಮ್ಮ ಹೂವಿನಂಥ ಮನಸ್ಸಿನಲ್ಲಿ ಸಾವಿರಾರು ಚಿಂತೆಗಳು ತುಂಬಿ ಒತ್ತಡಯುಕ್ತ ಜೀವನಕ್ಕೆ ಜೋತು ಬಿಳುತ್ತೇವೆ. ಇದನ್ನು ದೂರ ಮಾಡಲು ಋಣಾತ್ಮಕ ಆಲೋಚನೆಗಳನ್ನು ಕ್ಯಾನ್ಸಲ್ ಮಾಡಿ ಕೇವಲ ಧನಾತ್ಮಕ ವಿಚಾರಗಳನ್ನು ಮನದಲ್ಲಿ ಭರಿಸಿ ಶಕ್ತಿಭರಿತ ಹಾಗೂ ಸಪ್ತಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ಸಂತೋಷದ ಬದುಕು ನಮ್ಮದಾಗಿಸಿಕೊಳ್ಳುವಂತೆ ಶಕ್ತಿಕಾಂತ ಭಾಯಿ ಜಿ ಕರೆ ನೀಡಿದರು.

# ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಪುರ ಪ್ರವೇಶ: ಮೂಲ ರಾಮದೇವರ ಪೂಜೆ

• **ಉದಯವಾಹಿನಿ ಮುದ್ದೇಬಿಹಾಳ**

ಶ್ರೀ 1008 ಸತ್ಯಪ್ರಮೋದ ತೀರ್ಥರ ಕರಸಂಜಾತರಾದ ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಮುದ್ದೇಬಿಹಾಳ ನಗರದಲ್ಲಿ ಪುರಪ್ರವೇಶ ಮಾಡಿ ಎರಡು ದಿನಗಳ ಕಾಲ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಬೃಂದಾವನ, ಕಿಲ್ಲಾಗಲ್ಲಿಯ ಕೂಳ್ಳದ ರಂಗ ಆಂಜನೇಯ ದೇವಾಲಯ,

ಶ್ರೀ ಚಿದಂಬರ ದೇವಸ್ಥಾನ, ಭಕ್ತಾದಿಗಳ ಮನೆಗೆ ಭೇಟಿ ನೀಡಿ ದಿಗ್ವಿಜಯ ಮೂಲ ರಾಮದೇವರ ಪೂಜೆ, ಪಾದಪೂಜೆ ಸೇರಿ ಹಲವು ಧಾರ್ಮಿಕ ಕಾರ್ಯಕ್ರಮ ನಡೆಸಿಕೊಟ್ಟರು. ಮಂಗಳವಾರ ಪುರಪ್ರವೇಶ ಮಾಡಿದ ಶ್ರೀಪಾದಂಗಳವರು ಬುಧವಾರ ವಿಜಯೇಂದ್ರ ಪಾಟೀಲ ಅವರ ನಿವಾಸದಲ್ಲಿ ಮೂಲ ರಾಮದೇವರ ಪೂಜೆ ನಡೆಸಿಕೊಟ್ಟರು. ಭಕ್ತರ ಮನೆಗೆ ತೆರಳಿ ಪಾದಪೂಜೆ ನೆರವೇರಿಸಿಕೊಂಡರು.

ಶ್ರೀ ರಾಘವೇಂದ್ರ ಬೃಂದಾವನ ಸನ್ನಿಧಿಗೆ ಆಗಮಿಸಿ ಭಕ್ತರಿಗೆ ಮುದ್ರೆ ಆಶೀರ್ವಾದ ನೀಡಿದರು. ಚಿದಂಬರ ದೇವಸ್ಥಾನಕ್ಕೆ ಆಗಮಿಸಿ ಮಹಾಮಂಗಳಾರತಿ ನಡೆಸಿಕೊಟ್ಟರು. ವಿಪ್ರ ಬ್ರಾಹ್ಮಣ ಸಮಾಜದ


ಉದಯವಾಹಿನಿ ಚಿತ್ರ

ವಿ.ಜಿ.ಪಾಟೀಲ, ಎಸ್.ಆರ್.ಕುಲಕರ್ಣಿ, ಗುರುರಾಜ ದೊಡ್ಡಿಹಾಳ, ರಾಘವೇಂದ್ರ ದೊಡ್ಡಿಹಾಳ, ಶ್ರೀನಿವಾಸ ಗಜೇಂದ್ರಗಡ, ಅನೀಲ ಕುಲಕರ್ಣಿ, ವಾಸುದೇವ ಶಾಸ್ತ್ರಿ, ಸುರೇಶ ಕುಲಕರ್ಣಿ, ರಾಜು ಪದಕಿ, ರಾಘವೇಂದ್ರ ಕುಲಕರ್ಣಿ ರೂಢಗಿ, ಅರುಣಕುಮಾರ ಪದಕಿ, ಸುಭಾಷ ಕುಲಕರ್ಣಿ, ವಾಸುದೇವ ಸಾಲವಾಡಗಿ, ಪುಟು ಕುಲಕರ್ಣಿ ಶಿವಪೂರ, ಪ್ರಕಾಶ ಸರಾಫ, ಪುಟ್ಟು ಪ್ಲೋರಾ, ಪ್ರಕಾಶ ದೇಶಪಾಂಡೆ, ಬಾಳು ಗಿಂಡಿ, ರವಿ ಕುಲಕರ್ಣಿ, ಬಂಡು ಕೊಲ್ಹಾರ ಇನ್ನಿತರರು ಪಾಲ್ಗೊಂಡಿದ್ದರು. ಲಕ್ಷ್ಮೀ ಭಜನಾ ಮಂಡಳಿ, ಚಿದಂಬರ ಸೇನಾ ಭಜನಾ ಮಂಡಳಿಯವರು ಧಾರ್ಮಿಕ ಭಜನೆ ನಡೆಸಿಕೊಟ್ಟರು.

# 10 ನ್ಯಾಯಬೆಲೆ ಅಂಗಡಿಗಳ ಪರವಾನಿಗೆ ರದ್ದು

• **ಉದಯವಾಹಿನಿ ಬಳ್ಳಾರಿ**

ಜಿಲ್ಲೆಯ ವಿವಿಧ ತಾಲ್ಲೂಕುಗಳ ನ್ಯಾಯಬೆಲೆ ಅಂಗಡಿಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿದಾಗ ಹೆಚ್ಚುವರಿಯಾಗಿ ಪಡಿತರ ದಾಸ್ತಾನು ಕಂಡುಬಂದ ಒಟ್ಟು 10 ನ್ಯಾಯಬೆಲೆ ಅಂಗಡಿಗಳ ಪರವಾನಿಗೆ ರದ್ದು ಮಾಡಲಾಗಿ, ಒಂದು ಗೋದಾಮಿನ ವ್ಯವಸ್ಥಾಪಕರನ್ನು ಅಮಾನತುಗೊಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ಅವರು ಹೇಳಿದರು.

ನಗರದ ಸರ್ಕಾರಿ ಅತಿಥಿ ಗೃಹದ ಸಭಾಂಗಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಳೆದ ಐದು ದಿನಗಳಿಂದ ಜಿಲ್ಲಾದ್ಯಂತ ಆಯೋಗದ ಸದಸ್ಯರು ಒಳಗೊಂಡಂತೆ ಆಹಾರ ಇಲಾಖೆ ಅಧಿಕಾರಿಗಳೊಂದಿಗೆ ಆಹಾರ ನಾಗರಿಕ ಸರಬರಾಜು ನಿಗಮದ ಸಗಟು ಗೋದಾಮುಗಳಿಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳಲಾಗಿದ್ದು, ಅಲ್ಲಿ ಸ್ವಚ್ಛತೆ ಕಾಯ್ದುಕೊಳ್ಳದೇ ಇರುವ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲೆಯ ವಿವಿಧ ತಾಲ್ಲೂಕುಗಳ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿದಾಗ ಅಲ್ಲಿ ಯಾವುದೇ ರೀತಿಯ ಆಹಾರ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಮಾಹಿತಿ ವಿವರ ಫಲಕ ಪ್ರದರ್ಶಿಸುವುದು ಕಂಡುಬಂದಿಲ್ಲ. ಗ್ರಾಹಕರಿಗೆ ನ್ಯೂನತೆ ಕಂಡುಬಂದಲ್ಲಿ ಅವರು ಯಾರನ್ನು ವಿಚಾರಿಸಬೇಕು ಎಂಬುದರ ಕುರಿತ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ಸಂಪರ್ಕ ವಿವರ ಸಹಿತ ಮಾಹಿತಿ ಪ್ರದರ್ಶಿಸಬೇಕು ಎಂದು ಸೂಚಿಸಲಾಗಿದೆ ಎಂದರು.


ಉದಯವಾಹಿನಿ ಚಿತ್ರ

ಮಂಗಳವಾರ ಹಾಗೂ ಸರ್ಕಾರಿ ರಜೆ ಹೊರತು ಪಡಿಸಿ, ನ್ಯಾಯ ಬೆಲೆ ಅಂಗಡಿ ತೆರೆದಿರಬೇಕು. ಪಡಿತರ ವಿತರಣೆ ಕಾರ್ಯ, ಪಡಿತರ ವಿತರಣೆ ಸಮರ್ಪಕವಾಗಿ ವಿತರಿಸಿರುವ ಬಗ್ಗೆ ಫಲಾನುಭವಿಗಳ ಮನೆ–ಮನೆ ಭೇಟಿ ನೀಡಿ ಖುದ್ದು ಪರಿಶೀಲನೆ ಮಾಡಲಾಗಿದೆ ಎಂದರು.

ಪಡಿತರ ಅಕ್ಕಿ ಸಂಗ್ರಹಿಸುವ ಉಗ್ರಾಣಗಳಲ್ಲಿಯೂ ಸಹ ಸರಿಯಾದ ವ್ಯವಸ್ಥೆಯಿಲ್ಲ. ಮಾನದಂಡ ಇಲ್ಲದೆ ಪರವಾನಗಿ ನೀಡಲಾಗಿದೆ. ತಿಂಗಳಲ್ಲೇ 4 ದಿನ ಮಾತ್ರ ಪಡಿತರ ವಿತರಿಸುವುದು. ಮುಂಚಿತವಾಗಿ ಬೆರಳು ಗುರುತು ಹಾಕಿಸಿಕೊಳ್ಳುವುದು ಗಮನಕ್ಕೆ ಬಂದಿದೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಿವಿಧ ವಸತಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ. ಗುಣಮಟ್ಟದ ಆಹಾರ ನೀಡುತ್ತಿಲ್ಲ. ಈ ಕುರಿತು ನಿಲಯ ಪಾಲಕರ ಅಮಾನತಿಗೆ ಶಿಫಾರಸ್ಸು ಮಾಡಲಾಗಿದೆ ಎಂದರು.

### ಜಾಗೃತಿ ಸಮಿತಿ ಕೊರತೆ

ನ್ಯಾಯ ಬೆಲೆ ಅಂಗಡಿಗಳಲ್ಲಿಯೂ ಸಹ ಸ್ವಚ್ಛತಾ ಮರೀಚಿಕೆ ಆಗಿದೆ. ಜಾಗೃತಿ ಸಮಿತಿ ಸದಸ್ಯರ ಪಟ್ಟಿ ಹಾಗೂ ಆಹಾರ ಆಯೋಗದ ಸದಸ್ಯರ ನಾಮಫಲಕ ಅಳವಡಿಸಿಲ್ಲ. ಜಾಗೃತಿ ಸಮಿತಿ ಕೊರತೆ, ಭೌತಿಕ ಹಾಗೂ ತಾಂತ್ರಿಕ ದಾಸ್ತಾನು ವ್ಯತ್ಯಾಸ ಕಂಡು ಬಂದಿದೆ. ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆಗೊಳ್ಳಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

# ತಂತ್ರಜ್ಞಾನ ಬಳಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಿ

• **ಉದಯವಾಹಿನಿ ಬಾಗಲಕೋಟೆ**

ಆಧುನಿಕ ಕಾಲಘಟ್ಟದಲ್ಲಿ ಉನ್ನತ ಶಿಕ್ಷಣ ಓದುತ್ತಿರುವ ಯುವಸಮೂಹ ಹಾಗೂ ಬೋಧಕರು ತಮ್ಮ ಅಧ್ಯಯನಗಳಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಬೇಕು. ಕಾಲೇಜಿಗಳಲ್ಲಿರುವ ಐಕ್ಯೂಎಸಿ ಘಟಕದ ಮೂಲಕ ಉನ್ನತ ಶಿಕ್ಷಣ ಅಭಿವೃದ್ಧಿಯ ಗುರಿ ಮುಟ್ಟಲು ಸಾಧ್ಯವಿದೆ ಎಂದು ತೋಟಗಾರಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಸಚಿವರಾದ ಮಹಾದೇವ ಮುರಗಿ ಅವರು ಹೇಳಿದರು.

ಅವರು ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ (ಐಕ್ಯೂಎಸಿ) ಆಂತರಿಕ ಗುಣಮಟ್ಟ ಭರವಸೆ ಕೋಶದ ಅಡಿಯಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟನೆ ಮಾಡಿ, ಮಾತನಾಡಿದರು. ಉನ್ನತ ಶಿಕ್ಷಣದಲ್ಲಿ ಬೋಧಕರು ತಮ್ಮ ಬೋಧನೆಯ ಜೊತೆಜೊತೆಗೆ ವಿದ್ಯಾರ್ಥಿಗಳಲ್ಲಿ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ವಿಚಾರಗಳನ್ನು ಬೆಳೆಸಬೇಕು. ಕಾಲೇಜುಗಳಲ್ಲಿ ಪಾರದರ್ಶಕವಾದ ಆಡಳಿತವನ್ನು ನೀಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.


ಉದಯವಾಹಿನಿ ಚಿತ್ರ

ಕಾಲೇಜಿನ ಅಭಿವೃದ್ಧಿಯಲ್ಲಿ ಬೋಧಕರಷ್ಟೆ ಬೋಧಕೇತರ ಸಿಬ್ಬಂದಿಯವರ ಪ್ರರಿಶ್ರಮ ಮುಖ್ಯವಾಗಿರುತ್ತದೆ ಎಂದರು. ಪ್ರಾಂಶುಪಾಲರಾದ ಡಾ.ಅರುಣಕುಮಾರ ಗಾಳಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜಿನ ಅಭಿವೃದ್ಧಿಗೆ ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಹಳೆ ವಿದ್ಯಾರ್ಥಿಗಳು ಪಂಚೇಂದ್ರಿಗಳಿದ್ದಂತೆ. ಇವರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ಪಾಲಿಸಿದರೆ ಕಾಲೇಜು ಹಾಗೂ ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ ಎಂದರು. ಕನ್ನಡ ವಿಭಾಗ ಸಹ ಪ್ರಾಧ್ಯಾಪಕರಾದ ಡಾ.ಜಿ.ಜಿ.ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಚಾರ ಸಂಕಿರಣದಲ್ಲಿ ವಿವಿಧ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಸಾರ್ವಜನಿಕ ಕೆಲಸದಲ್ಲಿ ಪಾರದರ್ಶಕತೆ ಇರಲಿ: ಜಿಲ್ಲಾಧಿಕಾರಿ ದಿವ್ಯ ಪ್ರಭು

• **ಉದಯವಾಹಿನಿ ಧಾರವಾಡ**

ಸಾರ್ವಜನಿಕ ಕೆಲಸಗಳಲ್ಲಿ ಪಾರದರ್ಶಕತೆಯನ್ನು ತರಲು ಮತ್ತು ಸಕಾಲಕ್ಕೆ ಸೇವೆಗಳು ತಲುಪುವಂತೆ ಮಾಡುವಲ್ಲಿ ಮಾಹಿತಿ ಹಕ್ಕು ಕಾಯ್ದೆ ಪ್ರಮುಖ ಪಾತ್ರ ವಹಿಸುತ್ತಿದ್ದು, ಸರ್ಕಾರಿ ನೌಕರರಿಗೆ ಆರ್.ಟಿ.ಐ ಕಾಯ್ದೆಯ ಬಗ್ಗೆ ಭಯ ಬೇಡ. ಆದರೆ ಸಾರ್ವಜನಿಕ ಕೆಲಸಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಂಡು ಬರಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಆಶ್ರಯದಲ್ಲಿ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಮಾಹಿತಿ ಅಧಿಕಾರಿಗಳು ಮತ್ತು ಆರ್.ಟಿ.ಐ ವಿಷಯ ನಿರ್ವಾಹಕರಿಗೆ ಮಾಹಿತಿ ಹಕ್ಕು ಅಧಿನಿಯಮ–2005 ಕುರಿತು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳು ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಹೆದರುವ, ಭಯ ಪಡುವ ಅಗತ್ಯವಿಲ್ಲ. ಕಾಯ್ದೆಯನ್ನು ಸರಿಯಾಗಿ ಅರ್ಥೈಸಿಕೊಂಡು ಕಾರ್ಯನಿರ್ವಹಿಸಬೇಕು. ಆರ್.ಟಿ.ಐ ಅಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ, ಸಂಬಂಧಿಸಿದ ಮಾಹಿತಿ ಇರುವ ಅಧಿಕಾರಿಗಳಿಗೆ ವರ್ಗಾಯಿಸಬೇಕು. ತಮ್ಮ ಬಳಿಯೇ ಮಾಹಿತಿ ಇದ್ದಲ್ಲಿ, ಪೂರೈಸಬೇಕು. ಒಟ್ಟಾರೆಯಾಗಿ ಆರ್.ಟಿ.ಐ ಅರ್ಜಿಗೆ ಕಾಲಮಿತಿಯಲ್ಲಿ ಉತ್ತರಿಸುವುದು ಬಹುಮುಖ್ಯವಾಗಿದೆ. ನಿಧಾನಗತಿ ಅಥವಾ ನಿಷ್ಕಾಳಜಿ ಸಲ್ಲದು ಎಂದು ಅವರು ತಿಳಿಸಿದರು.



ಉದಯವಾಹಿನಿ ಚಿತ್ರ

ಮಾಹಿತಿ ಹಕ್ಕು ಅಧಿನಿಯಮವು ಮುಖ್ಯವಾಗಿ ಸಾರ್ವಜನಿಕ ಕೆಲಸಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ, ಪಾಲ್ಗೊಳುವಿಕೆ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸುತ್ತದೆ. ಪ್ರತಿಯೊಬ್ಬ ಅಧಿಕಾರಿಯು ಈ ತತ್ವಗಳಿಗೆ ಬದ್ಧರಾಗಿ, ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ ಯೋಜನೆಯ ಉದ್ದೇಶ ಸಫಲವಾಗುತ್ತದೆ **-ದಿವ್ಯ ಪ್ರಭು,** ಜಿಲ್ಲಾಧಿಕಾರಿ

ಪ್ರತಿ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಆರ್.ಟಿ.ಐ ಕಾಯ್ದೆಯ ಕುರಿತು ಅಗತ್ಯ ಮಾಹಿತಿ ಮತ್ತು ತಿಳುವಳಿಕೆಯನ್ನು ಪಡೆಯುವುದು ಅಗತ್ಯವಾಗಿದೆ.

ಸರ್ಕಾರವು ಪ್ರತಿ ನೌಕರನು ಮಾಹಿತಿಯುಕ್ತ ಅಧಿಕಾರಿಯಾಗಿ ರೂಪಿಸುವ ಉದ್ದೇಶದಿಂದ ಇಂತಹ ಮಾಹಿತಿ ಹಕ್ಕು ಅಧಿನಿಯಮ–2005 ಕುರಿತು ಕಾರ್ಯಾಗಾರಗಳನ್ನು ಏರ್ಪಡಿಸಿ, ತರಬೇತಿ ನೀಡಲು ನಿರ್ದೇಶಿಸಿದೆ. ಅದರನ್ವಯ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದ್ದು, ಪ್ರತಿಯೊಬ್ಬರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ಹೇಳಿದರು.

# ಮೀನುಗಾರಿಕೆ ಬೋಟಿನಲ್ಲಿ ಬೆಂಕಿ

• **ಉದಯವಾಹಿನಿ ಮಲ್ಪೆ**

ಇಲ್ಲಿನ ಬಾಪುತೋಟ ಬಳಿಯ ಮೀನುಗಾರಿಕೆ ಬಂದರಿನ ಸೇತುವೆ ಪಕ್ಕದ ದಕ್ಕೆಯಲ್ಲಿ ನಿಲ್ಲಿಸಲಾಗಿದ್ದ ಮೀನುಗಾರಿಕೆ ಬೋಟಿನಲ್ಲಿ ಬೆಂಕಿ ಕಾಣಿಸಿಕೊಂಡು ಸಂಪೂರ್ಣಸುಟ್ಟು ಹೋಗಿರುವ ಘಟನೆ ನಡೆದಿದೆ. ಮಲ್ಪೆಯ ಜನಾರ್ದನ ಟಿ. ಕಾಂಚನ್ ಅವರಿಗೆ ಸೇರಿದ ರವಿಪ್ರಕಾಶ್ ಎಂಬ ಸಣ್ಣಟ್ರಾಲ್ (ಫಿಶಿಂಗ್) ಬೋಟಿನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಸ್ಥಳೀಯ ದೋಣಿಯವರು ಗಮನಿಸಿ ಸಕಾಲದಲ್ಲಿ ಮಾಹಿತಿ ನೀಡಿದ್ದರಿಂದ ದೊಡ್ಡ ದುರಂತ ತಪ್ಪಿದಂತಾಗಿದೆ. ಅಂದು ಬೋಟಿನ ಮೀನುಗಾರರು ಮೀನುಗಾರಿಕೆ ಮುಗಿಸಿ ಬೋಟನ್ನು ಬಾಪುತೋಟದ ಬಳಿಯ ದಕ್ಕೆಯಲ್ಲಿ ನಿಲ್ಲಿಸಿದ್ದರು. ಸ್ಥಳೀಯರು ಮತ್ತು ಅಗ್ನಿಶಾಮಕ ದಳದವರು ಸಕಾಲದಲ್ಲಿ ಬೆಂಕಿ ನಂದಿಸಿದ್ದಾರೆ. ಬೆಂಕಿ ಕಾಣಿಸಿಕೊಂಡ ಬೋಟಿನ ಸುತ್ತ ಸುಮಾರು 25ರಿಂದ 30 ಬೋಟುಗಳು ಇದ್ದರೂ ಸಮುದ್ರದ ನೀರಿನ ಉಬ್ಬರದಿಂದಾಗಿ ಇತರ ಯಾವುದೇ ಬೋಟಿಗೆ ಬೆಂಕಿ ತಗಲದಿರಲು ಕಾರಣವಾಯಿತೆನ್ನಲಾಗಿದೆ.

# ಮಹಿಳೆಯ ಚಿನ್ನದ ಸರ ಕಳ್ಳತನ- ಇಬ್ಬರು ಆರೋಪಿಗಳು ಅರೆಸ್ಟ್

• **ಉದಯವಾಹಿನಿ ಕಾಸರಗೋಡ**

ಮೆಡಿಕಲ್ ಶಾಫ್ ಗೆ ಔಷಧಿ ಖರೀದಿಸುವ ನೆಪದಲ್ಲಿ ಬಂದು ಮಹಿಳೆಯ ಕತ್ತಿನಲ್ಲಿದ್ದ ಮೂರೂವರೆ ಪವನ್ ನ ಚಿನ್ನದ ಕರಿಮಣಿ ಸರ ಎಗರಿಸಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಬದಿಯಡ್ಕ ಠಾಣಾ ಪೊಲೀಸರು ಬಂಧಿಸಿದ್ದಾರೆ. ಪುತ್ತೂರು ಕುಂಜೂರು ಪಂಜ ನಿವಾಸಿ ಶಂಸುದ್ದೀನ್ ಅಸ್ಕರ್ ಅಲಿ(28), ಪುತ್ತೂರು ಬನ್ನೂರು ನಿವಾಸಿ ನೌಷಾದ್ ಬಿ.ಎ(37) ಬಂಧಿತ ಆರೋಪಿಗಳು. ಬದಿಯಡ್ಕ ಪೊಲೀಸರು ಇವರನ್ನು ಬೆಂಗಳೂರಿನಿಂದ ಬಂಧಿಸಿದ್ದಾರೆ. ಜನವರಿ 11 ರಂದು ಸಂಜೆ 3.30 ಕ್ಕೆ ನೀರ್ಚಾಲು ಮೇಲಿನ ಪೇಟೆಯಲ್ಲಿ ಈ ಘಟನೆ ನಡೆದಿದೆ. ಸರೋಜಿನಿ ಎಸ್.ಎನ್. ಅವರ ಮಾಲಕತ್ವದಲ್ಲಿರುವ ರಾಘವೇಂದ್ರ ಆಯುರ್ವೇದ ಮೆಡಿಕಲ್ ನಲ್ಲಿ ಕಳವು ನಡೆದಿದೆ. ಬೈಕ್ ನಲ್ಲಿ ಇಬ್ಬರು ಯುವಕರು ಆಗಮಿಸಿದ್ದು ಒಬ್ಬ ಬೈಕಿನಲ್ಲೇ ಕುಳಿತಿದ್ದು ಇನ್ನೊಬ್ಬ ಮೆಡಿಕಲ್ ಒಳಗೆ ಪ್ರವೇಶಿಸಿ ಔಷದ ಬೇಕೆಂದು ಕೇಳಿದನೆನ್ನಲಾಗಿದೆ.

# ಪತ್ನಿ ಕೊಂದು ಪತಿ ಆತ್ಮಹತ್ಯೆ

• **ಉದಯವಾಹಿನಿ ಬಳ್ಳಾರಿ**

ಕೌಟುಂಬಿಕ ಕಲಹದಿಂದ ಪತಿ ಪತ್ನಿಗೆ ಹೊಡೆದು ಸಾಯಿಸಿ, ತಾನು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಗ್ಲಾಸ್ ಬಜಾರ್ ನಲ್ಲಿ ನಿನ್ನೆ ಸಂಜೆ ನಡೆದಿದೆ. ರಾಜಸ್ಥಾನ ಮೂಲದ ಜೀನ್ಸ್ ಬಟ್ಟೆ ವ್ಯಾಪಾರಿ ಶಂಕರ್ ರಾಮ್ (40), ಶಾಂತಿ ದೇವಿ (34) ಮೃತ ದಂಪತಿಗಳು. ಕ್ಷುಲ್ಲಕ ಕಾರಣಕ್ಕೆ ಒಬ್ಬರಿಗೊಬ್ಬರು ಜಗಳವಾಡುವಾಗ ಪತ್ನಿ ಶಾಂತಾ ದೇವಿ ತಲೆಗೆ ಶಂಕರ್ ರಾವ್ ಸ್ಟೀಲ್ ಫ್ಲಾಸ್ಕ್ ನಿಂದ ಹೊಡೆದಿದ್ದು. ಇದರಿಂದ ಆಕೆಯ ಮೂಗಿನಲ್ಲಿ ರಕ್ತಸೋರಿ ಸಾವನ್ನಪ್ಪಿದ್ದಾಳೆ. ಇದರಿಂದ ಭಯಗೊಂಡ ಶಂಕರ್ ರಾಮ್ ನೇಣಿಗೆ ಶರಣಾಗಿದ್ದಾನೆ. ಮೃತ ದಂಪತಿಗೆ ಒಂದು ಹೆಣ್ಣು, ಇಬ್ಬರು ಗಂಡು ಮಕ್ಕಳಿವೆ. ಮಕ್ಕಳು ಶಾಲೆಯಿಂದ ಬಂದ ನಂತರ ಇವರು ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ನಗರದಲ್ಲಿ ಕಳೆದ 15 ವರ್ಷಗಳಿಂದ ನೆಲೆಸಿದ್ದ ಶಂಕರ್ ರಾಮ್, ಜೀನ್ಸ್ ಅಂಗಡಿ ಇಟ್ಟುಕೊಂಡಿದ್ದರು. ಪತಿ ಪತ್ನಿ ನಡುವೆ ಆಗಾಗ ಸಣ್ಣಪುಟ್ಟ ಜಗಳವಾಗುತ್ತಿತ್ತು, ಅದನ್ನು ಹೊರತುಪಡಿಸಿ ಅನ್ಯೋನ್ಯವಾಗಿ ಇದ್ದರು ಎಂದು ಸ್ಥಳೀಯರ ಅಭಿಪ್ರಾಯವಾಗಿದೆ.

# ಧರ್ಮದ, ಮದ್ಯದ ಅಮಲು ಸರ್ವನಾಶ ಮಾಡಲಿದೆ ಎಚ್ಚರ: ಮಹ್ಮದ

## • ಯಾವಾಗಲೂ ಮಕ್ಕಳನ್ನು ಬೆಳೆಸುವಂತಹ ಮಾತಾಪಿತರು ಬಹಳ ಜಾಗ್ರತರಾಗಿ ಕಾರ್ಯ ನಿರ್ವಹಿಸಬೇಕು

• **ಉದಯವಾಹಿನಿ ತಾಳಿಕೋಟೆ**

ಯಾವಾಗಲೂ ಮಕ್ಕಳನ್ನು ಬೆಳೆಸುವಂತಹ ಮಾತಾಪಿತರು ಬಹಳೇ ಜಾಗ್ರತರಾಗಿ ಕಾರ್ಯ ನಿರ್ವಹಿಸಬೇಕು ಬೆಳೆಸುವಂತಹ ವಿದಾನಗಳು ಸಹ ಇವೆ ಇವುಗಳಲ್ಲಿ ದೇವನಿದ್ದಾನೆ ನಾವು ಏನೇ ಮಾಡಿದರೂ ದೇವನು ನೋಡುತ್ತಾನೆಂಬುದನ್ನು ಕಲಿಸಬೇಕು ಇದರಿಂದ ಬದುಕಿನಲ್ಲಿ ಮಹತ್ವದ ಸ್ಥಾನಮಾನ ದೊರೆಯಲಿದೆ ಎಂದು ಜಮಾತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯದರ್ಶಿಗಳು ಹಾಗೂ ಮಂಗಳೂರಿನ ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮಹ್ಮದ ಕುಂಞ ಅವರು ನುಡಿದರು.

ಜಮಾತೆ ಇಸ್ಲಾಮಿ ಹಿಂದ್ ತಾಳಿಕೋಟೆ ಘಟಕದ ವತಿಯಿಂದ ಶ್ರೀ ಶರಣಮುತ್ಯಾರವರ ಮಂದಿರದ ಆವರಣದಲ್ಲಿ ಏರ್ಪಡಿಸಲಾದ ಸಾರ್ವಜನಿಕ ಕುರಾನ್ ಪ್ರವಚನ ಪ್ರಾರಂಭೋತ್ಸವದಲ್ಲಿ ''ಅಮಲು ಮುಕ್ತ ಸಮಾಜ ಮತ್ತು ಯುವ ಜನತೆ'' ಎಂಬ ವಿಷಯ ಕುರಿತು ಮಾತನಾಡುತ್ತಿದ್ದ ಅವರು ಮಾತು ಆಡಿದರೆ ಒಳ್ಳೆಯ ಮಾತಾಗಿರಬೇಕು ಮಾತು ಎಂಬುದು ಬಾಂಬ್‌ಗಳಿಗಿಂತ ಅಪಾಯಕಾರಿಯಾಗಿವೆ ಎಂದರು.

**ಸಮಾಜದಲ್ಲಿ ಜಾಗೃತಿ ಮೂಡಿಸಿ**

ಮಾತಾಪಿತರಲ್ಲಿ ಮಕ್ಕಳ ಬಗ್ಗೆ ಜಾಗೃತವೆಂಬುದಿರಲಿ ಮನೆಗಳು ಶಾಂತಿಯ ಕೇಂದ್ರವಾಗಿರಲಿ ಶಾಂತಿಯ ಗೆಳೆತನ ಸಿಗಬೇಕು ವಿಪರೀತ ಮೋಬೈಲ್ ಬಳಸುವದು ಸಹ ಕೆಡಕಿಗೆ ಕಾರಣ ಮನೆಯಲ್ಲಿ ತಂದೆ ತಾಯಿ ಮಕ್ಕಳಂತೆ ಪ್ರೀತಿ ವಾತ್ಸಲ್ಯದಿಂದ ಜೀವನ ನಡೆಸಿ ಮನೆಯ ಹೊರಗಡೆ ನಿಮ್ಮ ಹುದ್ದೆಗಳಂತವುಗಳು ಹೊರಗೆ ಇರಲಿ ಎಂದು ಹೇಳಿದ ಅವರು ಮಕ್ಕಳನ್ನು ಮಾತಾಪಿತರು ಗೌರವಿಸಬೇಕು ಒಳ್ಳೆಯತನದ ಬಗ್ಗೆ ಚರ್ಚಿಸಬೇಕು ಇದರಿಂದ ಮನೆ ಎಂಬುದು ಶಾಂತಿಯ ಕೇಂದ್ರವಾಗಲಿದೆ ಎಂದರು.


ಉದಯವಾಹಿನಿ ಚಿತ್ರ

ಬದುಕಿನಲ್ಲಿ ಮಹತ್ವದ ಮಾರ್ಗ ದೊರೆಯಬೇಕಾದರೆ ಶಿಕ್ಷಣವೆಂಬುದು ಅಗತ್ಯವಾಗಿದೆ ಎಂದು 6 ನೇ ಶತಮಾನದಲ್ಲಿ ಪ್ರವಾದಿಯವರು ಮದ್ಯ ಮುಕ್ತವಾದ ಸಮಾಜವನ್ನು ಕಟ್ಟಿ ತೋರಿಸಿದ್ದಾರೆಂದರು. ಆಂತರಿಕವಾದ ಪ್ರಜ್ಞೆ ಅರಿವು ಎಂಬವುಗಳನ್ನು ಮಕ್ಕಳಲ್ಲಿ ಮೂಡಿಸಬೇಕು ದೇವನ ಬಗ್ಗೆ ನಂಬಿಕೆ ವಾತಾವರಣ ನಮ್ಮ ಮನೆಗಳಲ್ಲಿ ಇರಬೇಕೆಂದು 6ನೇ ಕ್ಲಾಸಿನಲ್ಲಿ ಬಿಗಡಾಯಿಸಿದ ಮಗಳೇ ನಾನು ಸುದಾರಣೆಯಾಗಲು ಸಾಧ್ಯವಿಲ್ಲಾವೆಂದು ತನ್ನ ತಂದೆಗೆ ಹೇಳಿದ್ದರ ಚಿಕ್ಕ ಕಥೆಯೊಂದನ್ನು ಪ್ರಸ್ಥಾಪಿಸಿದ ಮಹ್ಮದ ಕುಂಞ ಅವರು ಮಧ್ಯಮುಕ್ತವಾದ ಸಮಾಜವಾದರೆ ನೆಮ್ಮದಿಯಾದ ಶಾಂತವಾದ ಸಮಾಜವಾಗಬಲ್ಲದು **-ಮಹ್ಮದ**

ಇಂತಹ ಕಾರ್ಯದಿಂದ ಆರೋಗ್ಯವೆಂಬುದು ಚೆನ್ನಾಗಿರುತ್ತದೆ ಮಕ್ಕಳಿಗೆ ಅಂಟಿಕೊಳ್ಳುವಂತಹ ಡ್ರಗ್ಸ್ ಮಾದಕ ವಸ್ತುಗಳಿಂದ ದೂರಾಗಬಹುದಾಗಿದೆ ಕುಡಿಯಲು ನೀರು ಸಿಗದ ಇಂತಹ ಸ್ಥಿತಿಯಲ್ಲಿ ಕೆಲವು ಗ್ರಾಮಗಳಲ್ಲಿ ತಲೆಮಾರುನ್ನು ನಾಶ ಮಾಡುವಂತಹ ಮಾದಕ ವಸ್ತುಗಳಾದ ಸರಾಯಿ, ಇಂತವುಗಳು ಎಗ್ಗಿಲ್ಲದೇ ದೊರೆಯುತ್ತವೆ ಇದರಿಂದ ಶೇ.45ರಷ್ಟು ಯುವಕರು ಈಗ 12 ವರ್ಷಗಳಿಂದಲೇ ಗಂಡು ಹೆಣ್ಣು ವ್ಯತ್ಯಾಸವಿಲ್ಲದೇ ಡ್ರಗ್ಸ್‌ಗಳಿಗೆ ಬಲಿಯಾಗುತ್ತಿದ್ದಾರೆಂದು ವಿಷಾದಿಸಿದ ಅವರು ಮಕ್ಕಳನ್ನು ಮಾತಾಪಿತರು ಕೋಳಿಯು ಹ್ಯಾಗೆ ತನ್ನ ಪಕ್ಕದಲ್ಲಿ ಹಿಡಿದುಕೊಳ್ಳುತ್ತದೆ ಹಾಗೆ ಮಕ್ಕಳನ್ನು ಸಂರಕ್ಷಣೆ ಮಾಡುವಂತಹ ಕಾರ್ಯವಾಗಲಿ ಇಲ್ಲದಿದ್ದರೆ ಗೌರವ, ಆರೋಗ್ಯ, ಮಾನ, ಮರ್ಯಾದೆ, ಸಂಪತ್ತು ಇವೆಲ್ಲವುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದರು.

ಇನ್ನೋರ್ವ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ವಿಜಯಪುರ ಅನುಗ್ರಹ ಆಸ್ಪತ್ರೆಯ ಖ್ಯಾತ ನೇತ್ರ ತಜ್ಞರಾದ ಡಾ.ಪ್ರಭುಗೌಡ ಲಿಂಗದಳ್ಳಿ ಅವರು ಮಾತನಾಡಿ ಜಾತಿ, ಧರ್ಮಕ್ಕಾಗಿ ನಾವು ಬಧುಕುತ್ತಿದ್ದೇವೆ ಕಾರಣ ಮನೆಯಲ್ಲಿ ಜಾತಿಯತೆ ಎಂಬುದಿರಲಿ ಮನೆ ಬಿಟ್ಟು ಹೊರಗೆ ಬಂದಾಗ ನಮ್ಮೇಲ್ಲರಲ್ಲಿ ಭಾರತೀಯರೆಂಬುದು ಇರಲಿ ಎಂದರು. ಸೂರ್ಯ, ಚಂದ್ರ ಇವುಗಳಲ್ಲಿ ಬೇದ ಭಾವವಿಲ್ಲಾ ಅದರಂತೆ ಹಿಂದೂ–ಮುಸ್ಲಿಂ ಎಂಬವಗಳಲ್ಲಿ ಬೇದ ಭಾವ ಇವೇರಡರಲ್ಲಿ ಬೇಕಾಗಿಲ್ಲಾ ಸಾಮಾಜಿಕ ಸಾಮರಸ್ಯ ಎಂಬುದಂತಹದ್ದನ್ನು ಬೆಳೆಸುವಂತಹ ಕಾರ್ಯ ಮಾಡಬೇಕಾಗಿದೆ ಎಂದರು. ಸಾಮರಸ್ಯದಿಂದ ಬಧುಕು ಕಲಿಯಲು ಸಾಧ್ಯವಾಗಲಿದೆ ನಾವೆಲ್ಲರೂ ಒಂದೇ ಎಂಬ ಭಾವನೆ ಎಲ್ಲರಲ್ಲಿ ಬರಬೇಕು ಎಲ್ಲರಲ್ಲಿಯೂ ರಕ್ತವೆಂಬುದು ಕೆಂಪೆ ಇರುತ್ತದೆ ಕಾರಣ ನಾವೆಲ್ಲರೂ ಸಾಮರಸ್ಯದಿಂದ ಬಧುಕಿದರೆ ಎಲ್ಲದರಲ್ಲಿಯೂ ಅಭಿವೃದ್ದಿಯಾಗಲು ಸಾಧ್ಯವಾಗಲಿದೆ ಎಂದರು. ವ್ಯಸನ ಮುಕ್ತಮಾಡುವ ಪ್ರವಚನ ಎಂಬುದು ಇಂದಿನದ್ದಾಗಿದೆ ಸಮಾಜದಲ್ಲಿ ಜಾಗೃತಿ ಮೂಡಿಸಿ ಸಮಾಜದಲ್ಲಿ ಅಭಿವೃದ್ದಿವಂತರಾಗಲು ದುಶ್ಚಟಗಳಿಂದ ದೂರ ಇರಬೇಕಾಗುತ್ತದೆ ಎಂದು ಹೇಳಿದ ಡಾ.ಪ್ರಭುಗೌಡ ಅವರು ತಾಳಿಕೋಟೆ ಪಟ್ಟಣದಲ್ಲಿ ಎಲ್ಲರೂ ಸಾಮರಸ್ಯದಿಂದಲೇ ಬದುಕುತ್ತಲೇ ಸಾಗಿದ್ದಾರೆ ಇದರಲ್ಲಿ ಎರಡು ಮಾತಿಲ್ಲಾವೆಂದರು. ಇನ್ನೋರ್ವ ಸಾನಿದ್ಯ ವಹಿಸಿದ ಕೊಡೇಕಲ್ಲ ದುರದುಂಡೇಶ್ವರ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮಾತನಾಡಿ ಅಮಲು ಮುಕ್ತ ಸಮಾಜ ಅಂದರೆ ತನ್ನನ್ನೇ ತಾನು ಅರೀತುಕೊಳ್ಳುವಂತಹದ್ದಾಗಿದೆ ಕುಡುಕತನದಿಂದ ಮನೆ ಹಾಳಾಗುತ್ತವೆ ಧರ್ಮ, ಜಾತಿ, ಬೇದ ಮಾಡುವದರಿಂದ ದೇಶ ಹಾಳಾಗುತ್ತದೆ ಅಹಂಕಾರವೆಂಬುದು ಬಹಳೇ ಅಪಾಯಕಾರಿವಾಗಿದೆ ಇಂದಿನ ವೇದಿಕೆ ಎಂಬುದು ಇಲ್ಲಿ ಜಾತಿ ಮತ ಪಂಥಗಳನ್ನು ಮೀರಿ ನಿಂತಂಥ ವೇದಿಕೆಯಾಗಿದೆ ಎಂದರು.

**ಮನೆ ಎಂಬುದು ಶಾಂತಿಯ ಕೇಂದ್ರ**

### ಎಲ್ಲವನ್ನು ಒಳ್ಳೆಯದನ್ನೇ ತಿಳಿಸಬೇಕು

ದೇವನಿಗೆ ಪ್ರಾರ್ಥಿಸಿ ಎಂದು ಪ್ರವಾದಿ ಅವರು ಹೇಳಿದ್ದಾರೆ ಹೇಗೆ ವರ್ತಿಸಬೇಕೆಂಬುದರ ಕುರಿತು ಕುರಾನ್ ಸಹ ಹೇಳಿದೆ ಪ್ರಾರ್ಥನೆ ಎಂಬುದು ಇರಬೇಕು ಇದನ್ನು ದೇವನು ಸ್ವಿಕರಿಸುತ್ತಾನೆ ಮಕ್ಕಳ ಬಗ್ಗೆ ಕೆಟ್ಟ ಮಾತು ತಂದೆ ತಾಯಿಯಲ್ಲಿ ಬರಬಾರದು ಧರ್ಮದ ಟೀಕೆ ಟಿಪ್ಪಣೆಯಿಂದ ಸೋಸಿಯಲ್ ಮೀಡಿಯಾದಿಂದ ದೂರವಿರಬೇಕೆಂದು ಒತ್ತಿ ಹೇಳಿದ ಅವರು ಅರಿವು ಎಂಬುದು ನಮ್ಮ ಸಂಪತ್ತಾಗಿದೆ ಅಜ್ಞಾನವೆಂಬುದು ನಮ್ಮ ಶತ್ರುವಾಗಿದೆ ಎಂದರು. ಧಾರ್ಮಿಕ ವೇದಿಕೆಗಳಿಂದ ಎಲ್ಲವನ್ನು ಒಳ್ಳೆಯದನ್ನೇ ತಿಳಿಸಬೇಕು ಅಂದರೆ ಒಳ್ಳೆಯ ಮಕ್ಕಳಾಗುತ್ತಾರೆಂದರು.

ಎಫ್‌ಬಿಐನ ಮೊದಲ ಭಾರತೀಯ ಮೂಲದ ನಿರ್ದೇಶಕರಲ್ಲದೆ, ಮೊದಲ ಏಷ್ಯನ್ ಮೂಲದವರು ಎನಿಸಿದ್ದಾರೆ

# ಭಗವದ್ಗೀತೆ ಹೆಸರಿನಲ್ಲಿ ಕಶ್ಯಪ್ ಪಟೇಲ್ ಪ್ರಮಾಣ ವಚನ

**ಅಮೆರಿಕ:** ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯುರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ನಿರ್ದೇಶಕರಾಗಿ ಭಾರತ ಮೂಲದ ಕಶ್ಯಪ್ ಪಟೇಲ್ ಭಗದ್ಗೀತೆ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ್ದಾರೆ. ವಾಷಿಂಗ್ಟನ್‌ನ ಶ್ವೇತಭವನದ ಆವರಣದಲ್ಲಿರುವ ಐಸೆನ್‌ಹೋವರ್ ಕಾರ್ಯನಿರ್ವಾಹಕ ಕಚೇರಿ ಕಟ್ಟಡನಲ್ಲಿರುವ ಭಾರ ತೀಯ ಒಪ್ಪಂದ








- ಅಮೆರಿಕದ ಎಫ್‌ಬಿಐ ನಿರ್ದೇಶಕರಾಗಿ ಕಶ್ಯಪ್ ಪಟೇಲ್ ಅಧಿಕಾರ ಸ್ವೀಕಾರ
- ಭಗವದ್ಗೀತೆ ಹೆಸರಿನಲ್ಲಿ ಕಶ್ಯಪ್ ಪಟೇಲ್ ಪ್ರಮಾಣ ವಚನ
- ಎಫ್‌ಬಿಐನ 9ನೇ ನಿರ್ದೇಶಕರಾಗಿ ಕಾಶ್ ಪಟೇಲ್ ನೇಮಕಗೊಳಿಸಿ ಅಧ್ಯಕ್ಷ ಟ್ರಂಪ್ ಸಹಿ

ಕೊಠಡಿಯಲ್ಲಿ ಯುಎಸ್ ಅಟಾರ್ನಿ ಜನರಲ್ ಪ್ಯಾಮ್ ಬೋಂಡಿ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು.

ಎಫ್‌ಬಿಐನ 9ನೇ ನಿರ್ದೇಶಕರಾಗಿ ಕಾಶ್ ಪಟೇಲ್ ಅವರನ್ನು ನೇಮಕಗೊಳಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಹಿ ಹಾಕಿದ್ದಾರೆ. ಸೆನೆಟ್‌ನಲ್ಲಿ ನಿರ್ದೇಶಕರ ಹುದ್ದೆಗೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಟೇಲ್ 51 ಪರ ಮತ್ತು 49 ವಿರೋಧ ಮತಗಳನ್ನು ಪಡೆದಿದ್ದರು. ಇದುವರೆಗೆ ಎಫ್‌ಬಿಐ ಮುಖ್ಯಸ್ಥರಾಗಿದ್ದ ಕ್ರಿಸ್ಟೋಫರ್ ವ್ರೇ ಅವರ ಜಾಗಕ್ಕೆ ಈಗ ಪಟೇಲ್ ನೇಮಕಗೊಂಡಿದ್ದಾರೆ. ಅಮೆರಿಕದ ಪ್ರತಿಷ್ಠಿತ ಎಫ್‌ಬಿಐನ ಮೊದಲ ಭಾರತೀಯ ಮೂಲದ ನಿರ್ದೇಶಕರಲ್ಲದೆ, ಮೊದಲ ಏಷ್ಯನ್ ಮೂಲದವರು ಎನಿಸಿದ್ದಾರೆ. ಇವರ ಅವಧಿ ಮುಂದಿನ 10 ವರ್ಷಗಳ ಕಾಲ ಇರಲಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಶ್ಯಪ್ ಪಟೇಲ್ ಅವರನ್ನು ಬೆಂಬಲಿಸಿ ಶ್ಲಾಘಿಸಿದರು. 'ನಾನು ಕಶ್ಯಪ್ ಪಟೇಲ್ ಅವರನ್ನು ಪ್ರೀತಿಸಲು ಮತ್ತು ಅವರನ್ನು ಅನುಮೋದಿಸಲು ಕಾರಣವೆಂದರೆ, ಏಜೆಂಟರು ಅವರ ಬಗ್ಗೆ ಹೊಂದಿದ್ದ ಗೌರವ. ಕಶ್ಯಪ್ ಪಟೇಲ್ ಎಫ್‌ಬಿಐ ನಿರ್ದೇಶಕ ಸ್ಥಾನಕ್ಕೆ ಅತ್ಯುತ್ತಮ ವ್ಯಕ್ತಿ. ಅವರು ಕಠಿಣ ಮತ್ತು ಬಲಿಷ್ಠ ವ್ಯಕ್ತಿತ್ವ ಹೊಂದಿದ್ದಾರೆ. ಅವರಿಗೆ ತಮ್ಮದೇ ಆದ ಅಭಿಪ್ರಾಯಗಳಿವೆ' ಎಂದು ಟ್ರಂಪ್ ಬಹಿರಂಗಪಡಿಸಿದ್ದಾರೆ. ಅಮೆರಿಕದ ಮೊದಲ ಫೈಟರ್ ಎಂದು ಬಣ್ಣಿಸಿದ್ದಾರೆ. ಕಾಶ್ ಒಬ್ಬ ಅದ್ಭುತ ವಕೀಲ, ತನಿಖಾಧಿಕಾರಿ ಮತ್ತು ಅಮೆರಿಕ ಫಸ್ಟ್ ಫೈಟರ್. ಭ್ರಷ್ಟಾಚಾರವನ್ನು ಬಹಿರಂಗಪಡಿ ಸಲು, ನ್ಯಾಯವನ್ನು ರಕ್ಷಿಸಲು ತಮ್ಮ ವೃತ್ತಿಬದುಕನ್ನೇ ಮೀಸಲಿಟ್ಟಿದ್ದಾರೆ' ಎಂದು ಡೊನಾಲ್ಡ್ ಟ್ರಂಪ್ ಈ ಹಿಂದೆ ಹೇಳಿದ್ದರು.

**ಕಠಿಣ ಮತ್ತು ಬಲಿಷ್ಠ ವ್ಯಕ್ತಿತ್ವ**

### ಕಶ್ಯಪ್ ಪಟೇಲ್ ಯಾರು?

ಕಶ್ ಪಟೇಲ್ ತಂದೆ - ತಾಯಿ ಗುಜರಾತ್ ಮೂಲದವರು. ನ್ಯೂಯಾರ್ಕ್ ಗಾರ್ಡನ್ ಸಿಟಿಯಲ್ಲಿ 1980ರಲ್ಲಿ ಜನಿಸಿದ ಕಶ್ ಪಟೇಲ್ ಅವರ ಮೂಲ ಹೆಸರು ಕಶ್ಯಪ್ ಪಟೇಲ್, ರಿಚ್ಮಂಡ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಪೂರ್ವ ಅಧ್ಯಯನವನ್ನು ಪೂರ್ಣಗೊಳಿಸಿದ ಅವರು, ಯೂನಿವರ್ಸಿಟಿ ಕಾಲೇಜ್ ಲಂಡನ್‌ನಲ್ಲಿ ಕಾನೂನು ಪದವಿಯನ್ನು ಪಡೆದರು. ಸಾರ್ವಜನಿಕ ವಕೀಲರಾಗಿ ವೃತ್ತಿ ಜೀವನ ಆರಂಭಿಸಿದರು. ಸುಮಾರು ಒಂಬತ್ತು ವರ್ಷಗಳ ಕಾಲ ಮಿಯಾಮಿ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸಿದರು. ಕೊಲೆ, ಮಾದಕವಸ್ತು ಕಳ್ಳಸಾಗಣೆ ಮತ್ತು ಆರ್ಥಿಕ ಅಪರಾಧಗಳು ಸೇರಿದಂತೆ ಹಲವು ಸಂಕೀರ್ಣ ಪ್ರಕರಣಗಳನ್ನು ಕೈಗೆತ್ತಿಕೊಂಡಿದ್ದರು. ನ್ಯಾಯಾಂಗ ಇಲಾಖೆಯ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಕಶ್, ಟ್ರಂಪ್ ಮೀಡಿಯಾ ಮತ್ತು ಟೆಕ್ನಾಲಜಿ ಗ್ರೂಪ್‌ನ ನಿರ್ದೇಶಕರ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

## ಮಾರಿಷಸ್ ರಾಷ್ಟ್ರೀಯ ದಿನಾಚರಣೆಗೆ ಪ್ರಧಾನಿ ಮೋದಿಗೆ ಆಹ್ವಾನ



**ದೇಶಕ್ಕೆ ಒಂದು ಅನನ್ಯ ಅವಕಾಶ**

**ಪೋರ್ಟ್ ಲೂಯಿಸ್:** ಮುಂದಿನ ತಿಂಗಳು ನಡೆಯಲಿರುವ ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಪ್ರಧಾನಿ. ನರೇಂದ್ರ ಮೋದಿ ಅವರು ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಮಾರಿಷಸ್ ಪ್ರಧಾನಿ ನವೀನ್ ರಾಮ್ ಗೂಲಮ್ ಘೋಷಿಸಿದ್ದಾರೆ. ಇಲ್ಲಿನ ರಾಷ್ಟ್ರೀಯ ಅಸೆಂಬ್ಲಿಯನ್ನುದ್ದೇಶಿಸಿ ಮಾತನಾಡಿದ ಮಾರಿಷಸ್ ಪ್ರಧಾನಿ ರಾಮ್ ಗೂಲಮ್, ತಮ್ಮ ಕಠಿಣ ವೇಳಾ ಪಟ್ಟಿಯ ಹೊರತಾಗಿಯೂ ಅಂತಹ ವಿಶಿಷ್ಟ ವ್ಯಕ್ತಿಗೆ ಆತಿಥ್ಯ ವಹಿಸುವುದು ನಮ್ಮ ದೇಶಕ್ಕೆ ನಿಜಕ್ಕೂ ಒಂದು ಅನನ್ಯ ಅವಕಾಶ ಎಂದಿದ್ದಾರೆ.

ಮಾರಿಷಸ್ ತನ್ನ ರಾಷ್ಟ್ರೀಯ ದಿನವನ್ನು ಪ್ರತಿವರ್ಷ ಮಾರ್ಚ್ 12 ರಂದು ಆಚರಿಸುತ್ತದೆ. ಈ ದಿನವು 1968 ರಲ್ಲಿ ಮಾರಿಷಸ್ ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ. ನಮ್ಮ ದೇಶದ ಸ್ವಾತಂತ್ರ್ಯದ 57 ನೇ ವಾರ್ಷಿಕೋತ್ಸವದ ಆಚರಣೆಯ ಹಿನ್ನೆಲೆಯಲ್ಲಿ, ನನ್ನ ಆಹ್ವಾನದ ನಂತರ, ಭಾರತದ ಪ್ರಧಾನಿ ಗೌರವಾನ್ವಿತ ನರೇಂದ್ರ ಮೋದಿ ಅವರು ನಮ್ಮ ರಾಷ್ಟ್ರೀಯ ದಿನಾಚರಣೆಯ ಗೌರವಾನ್ವಿತ ಅತಿಥಿಯಾಗಲು ದಯವಿಟ್ಟು ಒಪ್ಪಿ ಕೊಂಡಿದ್ದಾರೆ ಎಂದು ಸದನಕ್ಕೆ ತಿಳಿಸಲು ನನಗೆ ತುಂಬಾ ಸಂತೋಷವಾಗಿದೆ ಎಂದು ಅವರು ಹೇಳಿದರು.

## ನಕಲು ವಿವಾದ ವಿದ್ಯಾರ್ಥಿ ಹತ್ಯೆ

**ಸಸಾರಾಂ:** ಪರೀಕ್ಷೆಯಲ್ಲಿ ನಕಲು ಮಾಡುವ ಕುರಿತು ವಿದ್ಯಾರ್ಥಿ ಗುಂಪುಗಳ ನಡುವಿನ ಗುಂಡಿನ ಚಕಮಕಿಯಲ್ಲಿ, ಸಸಾರಾಂನಲ್ಲಿ 10 ನೇ ತರಗತಿಯ ವಿದ್ಯಾರ್ಥಿಯನ್ನು ಗುಂಡಿಟ್ಟು ಕೊಲ್ಲಲಾಗಿದೆ.

ವಿದ್ಯಾರ್ಥಿ ಸಾವನ್ನಪ್ಪಿದ ನಂತರ ಆ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದೆ. ಘಟನೆಯ ನಂತರ, ಆಕ್ರೋಶಗೊಂಡ ಜನತೆ ರಸ್ತೆ ತಡೆದು ಪೊಲೀಸ್ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ. ಘಟನೆಯಲ್ಲಿ ವಿದ್ಯಾರ್ಥಿಗಳಲ್ಲಿ ಒಬ್ಬನ ಕಾಲಿಗೆ ಮತ್ತು ಇನ್ನೊಬ್ಬನ ಬೆನ್ನಿಗೆ ಗುಂಡು ತಗುಲಿದೆ. ಮಾಹಿತಿಯ ಪ್ರಕಾರ, ಪರೀಕ್ಷೆಯ ಸಮಯದಲ್ಲಿ ನಕಲು ಮಾಡುವ ಕುರಿತು ಎರಡು ಗುಂಪುಗಳ ನಡುವೆ ಕಲಹ ಏರ್ಪಟ್ಟಿದೆ.

10 ನೇ ತರಗತಿ ಪರೀಕ್ಷೆಯಲ್ಲಿ ನಕಲು ಮಾಡಲು ಅವಕಾಶ ನೀಡದಿರುವ ಬಗ್ಗೆ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಜಗಳ ಮತ್ತು ಗುಂಡಿನ ದಾಳಿ ನಡೆದಿದೆ. ವಿದ್ಯಾರ್ಥಿಗಳು ಪರೀಕ್ಷೆ ಬರೆದು ಹಿಂತಿರುಗುತ್ತಿದ್ದಾಗ ಎದುರಾಳಿ ಗುಂಪಿನವರು ಅವರ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ.



ಬಿಹಾರದ ರೋಹ್ತಾಸ್ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವಿನ ಘರ್ಷಣೆಯಲ್ಲಿ 10 ನೇ ತರಗತಿಯ ವಿದ್ಯಾರ್ಥಿ ಅಮಿತ್ ಕುಮಾರ್ ಮೃತಪಟ್ಟ ವಿದ್ಯಾರ್ಥಿ ಎನ್ನಲಾಗಿದೆ. ಅಪರಿಚಿತ ದುಷ್ಕರ್ಮಿಗಳು 10 ನೇ ತರಗತಿ ವಿದ್ಯಾರ್ಥಿಯ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ ಮತ್ತು ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಸಾರಾಮ್‌ನ ಪರೀಕ್ಷಾ ಕೇಂದ್ರದಲ್ಲಿ ವಾಗ್ವಾದ ನಡೆದಿದ್ದು, ಹೊರಗೆ ಜಗಳ ಇನ್ನಷ್ಟು ಉಲ್ಬಣಗೊಂಡು ಈ ಘಟನೆಗೆ ಕಾರಣವೆನ್ನಲಾಗಿದೆ.

ಪ್ರಕರಣವು ಸಸಾರಂನ ತಾರಾಚಂಡಿ ಧೌಧದ್ ಪೊಲೀಸ್ ಠಾಣೆ ಪ್ರದೇಶದಿಂದ ವರದಿ ಆಗಿದೆ.

ಈ ಘಟನೆಯ ನಂತರ, ಪೊಲೀಸ್ ಆಡಳಿತ ಮತ್ತು ಶಾಲಾ ಆಡಳಿತ ಮಂಡಳಿಯ ಬಗ್ಗೆ ಪ್ರಶ್ನೆಗಳು ಎದ್ದಿವೆ. ಪರೀಕ್ಷೆಯ ಸಮಯದಲ್ಲಿ, ಪರೀಕ್ಷಾ ಕೇಂದ್ರದಿಂದ 200 ಮೀಟರ್ ವ್ಯಾಪ್ತಿಯಲ್ಲಿ ಸೆಕ್ಷನ್ 144 ಜಾರಿಗೊಳಿಸಲಾಗಿದೆ ಪರೀಕ್ಷಾ ಕೇಂದ್ರದ ಸುತ್ತಲೂ ಪೊಲೀಸ್ ಆಡಳಿತ ವಾಹನಗಳು ಇರುತ್ತವೆ.

## ಎಲಾನ್ ಮಸ್ಕ್ ಮಕ್ಕಳ ಕಾಟ..? 145 ವರ್ಷ ಹಳೆಯ ರೆಸಲ್ಯೂಟ್ ಟೇಬಲನ್ನೇ ಚೇಂಜ್ ಮಾಡಿದ ಟ್ರಂಪ್

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ಅಮೆರಿಕದ ಖ್ಯಾತ ಉದ್ಯಮಿ ಡೊನಾಲ್ಡ್ ಟ್ರಂಪ್ ಅಧ್ಯಕ್ಷರ ಕಚೇರಿಯ ಐತಿಹಾಸಿಕ ಆಫೀಸ್ ಟೇಬಲ್ ಅನ್ನು ಬದಲಾಯಿಸಿದ್ದಾರೆ. ಹೌದು.. ವೈಟ್ ಹೌಸ್ ನ ಅಮೆರಿಕ ಅಧ್ಯಕ್ಷರ ಕಚೇರಿಯಲ್ಲಿದ್ದ ರೆಸಲ್ಯೂಟ್ ಡೆಸ್ಕ್ ಅನ್ನು ಡೊನಾಲ್ಡ್ ಟ್ರಂಪ್ ಬದಲಿಸಿದ್ದಾರೆ. ಇದು ಸಾಮಾನ್ಯ ಟೇಬಲ್ ಆಗಿದಿದ್ದರೆ ಸುದ್ದಿಯಾಗುತ್ತಿರಲಿಲ್ಲ.. ಆದರೆ ಅದು ಸುಮಾರು 145 ವರ್ಷಗಳ ಸುದೀರ್ಘ ಇತಿಹಾಸವಿದ್ದ ಟೇಬಲ್ ಅಂತೆ. ಇಷ್ಟಕ್ಕೂ ಅಷ್ಟು ಸುದೀರ್ಘ ಇತಿಹಾಸವಿದ್ದ ಟೇಬಲ್ ಅನ್ನು ಟ್ರಂಪ್ ಬದಲಿಸಲು ಉದ್ಯಮಿ ಎಲಾನ್ ಮಸ್ಕ್ ಮಕ್ಕಳು ಕಾರಣವಂತೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗಳು ಹರಿದಾಡುತ್ತಿವೆ. ಇತ್ತೀಚೆಗೆ ಎಲಾನ್ ಮಸ್ಕ್ ಅಧ್ಯಕ್ಷರ ಕಚೇರಿಗೆ ತಮ್ಮ ಮಕ್ಕಳನ್ನು ಕರೆತಂದಿದ್ದರು.

ಈ ವೇಳೆ ಮಸ್ಕ್ ಅವರ ಮಗ ಟ್ರಂಪ್ ಕುರ್ಚಿ ಪಕ್ಕದಲ್ಲೇ ಕುಳಿತು ಏನೇನೋ ಮಾತನಾಡುತ್ತಿದ್ದ ವಿಡಿಯೋ ವೈರಲ್ ಆಗಿತ್ತು. ಅದೇ ಸಂದರ್ಭದಲ್ಲಿ ಮಸ್ಕ್ ಮಗ ಮೂಗಿಗೆ ಬೆರಳು ಹಾಕಿ ಟೇಬಲ್ ಗೆ ಒರೆಸುತ್ತಿದ್ದನಂತೆ. ಇದೇ ಕಾರಣಕ್ಕೆ ಟ್ರಂಪ್ ಐತಿಹಾಸಿಕ ಟೇಬಲ್ ಅನ್ನೇ ಬದಲಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಅಧ್ಯಕ್ಷರ ಕಚೇರಿಯಲ್ಲಿನ ಟೇಬಲ್ ಬದಲಾವಣೆ ಕುರಿತು ವೈಟ್ ಹೌಸ್ ಅಧಿಕಾರಿಗಳು ಈವರೆಗೂ ಯಾವುದೇ ಸ್ಪಷ್ಟನೆ ನೀಡಿಲ್ಲ. ಆದರೆ ಟ್ರಂಪ್ ಟೇಬಲ್ ಬದಲಾವಣೆಗೂ ಎಲಾನ್ ಮಸ್ಕ್ ಪುತ್ರ ಈ ಕೆಲಸಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ಮೋದಿ ಭೇಟಿ ವೇಳೆ ತಂದೆ ಜೊತೆಯಿದ್ದ ಮಕ್ಕಳು.

**ಟ್ರಂಪ್ ಹೇಳಿದ್ದೇನು?:** ಟೇಬಲ್ ಬದಲಾವಣೆ ವಿಚಾರ ವ್ಯಾಪಕ ಚರ್ಚೆಗೀಡಾಗಿರುವಂತೆಯೇ ಇದೇ ಡೊನಾಲ್ಡ್ ಟ್ರಂಪ್ ಟ್ವೀಟ್ ಮಾಡಿದ್ದು, 'ಅಧ್ಯಕ್ಷರ ಆಯ್ಕೆ ಹಕ್ಕಿನಂತೆ ನಾನು ಮಾಜಿ ಅಧ್ಯಕ್ಷ ಜಾರ್ಜ್ ಹೆಚ್.ಡಬ್ಲ್ಯೂ. ಬುಷ್ ಮತ್ತು ಇತರರು ಬಳಸುತ್ತಿದ್ದ ಡೆಸ್ಕ್ ಅನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದಿದ್ದಾರೆ. ಚುನಾವಣೆಯ ನಂತರ, ಅಧ್ಯಕ್ಷರಿಗೆ 7 ಡೆಸ್ಕ್‌ಗಳಲ್ಲಿ 1 ಆಯ್ಕೆ ಸಿಗುತ್ತದೆ. ಮಾಜಿ ಅಧ್ಯಕ್ಷ ಜಾರ್ಜ್ ಹೆಚ್.ಡಬ್ಲ್ಯೂ. ಬುಷ್ ಮತ್ತು ಇತರರು ಬಳಸುತ್ತಿದ್ದ ಮತ್ತು ಬಹಳ ಪ್ರಸಿದ್ಧವಾಗಿರುವ ಸಿ ಒ ಡೆಸ್ಕ್ ಅನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇದನ್ನು ತಾತ್ಕಾಲಿಕವಾಗಿ ಶ್ವೇತಭವನದಲ್ಲಿ ಸ್ಥಾಪಿಸಲಾಗಿದೆ. ಅಂತೆಯೇ ಈ ಹಿಂದೆ ಇದ್ದ ರೆಸಲ್ಯೂಟ್ ಡೆಸ್ಕ್ ಅನ್ನು ಕೊಂಚ ನವೀಕರಿಸಲಾಗುತ್ತಿದೆ. ಇದು ಬಹಳ ಮುಖ್ಯವಾದ ಕೆಲಸ.



## ಡ್ಯಾನ್ಸರ್ ಮೇಲೆ ಸಾಮೂಹಿಕ ಅತ್ಯಾಚಾರ

**ನವದೆಹಲಿ:** ಇಪ್ಪತ್ತು ವರ್ಷದ ಆರ್ಕೆಸ್ಟ್ರಾ ಡ್ಯಾನ್ಸರ್ ಮೇಲೆ ಮಧ್ಯಪ್ರದೇಶದಲ್ಲಿ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ. ಮಧ್ಯಪ್ರದೇಶದ ಸಿಂಗೌಲಿಯಲ್ಲಿ ಆಘಾತ ಮೂಡಿಸಿದೆ.

ತಡರಾತ್ರಿ ಪ್ರದರ್ಶನ ನೀಡಿ ಮನೆಗೆ ಮರಳುತ್ತಿದ್ದ ಸಂತ್ರಸ್ತೆಯನ್ನು ಬೈಕ್‌ನಲ್ಲಿ ಬಂದ 6 ಮಂದಿ ದುಷ್ಕರ್ಮಿಗಳು ತಡೆದು ಆಕೆಯ ಪ್ರಿಯಕರನ ಮೇಲೆ ಹಲ್ಲೆ ನಡೆಸಿ, ಹತ್ತಿರದ ಕಾಡಿಗೆ ಎಳೆದುಕೊಂಡು ಹೋಗಿ, ಆಕೆಯ ಮೇಲೆ ಪದೇ ಪದೇ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ.

ಆಕೆಯ ದೂರಿನ ಮೇರೆಗೆ ಪೊಲೀಸರು ತನಿಖೆ ನಡೆಸಿದ ನಂತರ ಎಲ್ಲಾ 6 ಆರೋಪಿಗಳನ್ನು ಬಂಧಿಸಲಾಗಿದೆ. ಈ ಘಟನೆ ಮಾಡಾ ಪೊಲೀಸ್ ಠಾಣೆ ವ್ಯಾಪ್ತಿಯ ಶೀತುಲ್ ಗ್ರಾಮದಲ್ಲಿ ನಡೆದಿದೆ. ಅತ್ಯಾಚಾರಕ್ಕೊಳಗಾದ ಮಹಿಳೆ ತನ್ನ ಸಹೋದರಿ ಮತ್ತು ಆರ್ಕೆಸ್ಟ್ರಾದ ಇತರ ಮಹಿಳಾ ಸದಸ್ಯರೊಂದಿಗೆ ಬಹೋರ್ ಸಂಸ್ಕಾರ ಸಮಾರಂಭದಲ್ಲಿ ಡ್ಯಾನ್ಸ್ ಶೋ ನೀಡುತ್ತಿದ್ದರು.

ತಡರಾತ್ರಿ ನಡೆದ ಕಾರ್ಯಕ್ರಮ ಮುಗಿಸಿ ಅವರು ಬೈಕ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ, ಅಡ್ಡ ಹಾಕಿದ ಆರೋಪಿಗಳು ಅತ್ಯಾಚಾರ ನಡೆಸಿದ್ದಾರೆ. ಈ ವೇಳೆ ಆಕೆಯ ಪ್ರಿಯಕರ ಮಧ್ಯಪ್ರವೇಶಿಸಲು ಪ್ರಯತ್ನಿಸಿದಾಗ ಆತನನ್ನು ಥಳಿಸಲಾಗಿದೆ ಎಂದು ರೇವಾ ವಲಯದ ಡಿಐಜಿ ಸಾಕೇತ್ ಪ್ರಕಾಶ್ ಪಾಂಡೆ ಹೇಳಿದ್ದಾರೆ.

ನಂತರ ಅತ್ಯಾಚಾರಿಗಳು ಸಂತ್ರಸ್ತೆಯನ್ನು ಬಲವಂತವಾಗಿ ಅಪಹರಿಸಿ, ಸಖ್ವಾನ್ ಶಿವನ ದೇವಾಲಯದ ಬಳಿಯ ಕಾಡಿಗೆ ಎಳೆದೊಯ್ದರು. ಅಲ್ಲಿ ಅವರು ರಾತ್ರಿಯಿಡೀ ಕ್ರೂರವಾಗಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ.

ಸಾಮೂಹಿಕ ಅತ್ಯಾಚಾರದಿಂದ ಆಘಾತಕ್ಕೊಳಗಾಗಿದ್ದರೂ ಆ ಮಹಿಳೆ ಮನೆಗೆ ತಲುಪಿದ್ದಾರೆ. ಬಳಿಕ ತನ್ನ ಅಕ್ಕನಿಗೆ ವಿಷಯ ತಿಳಿಸಿದ್ದಾರೆ.

ಇಬ್ಬರೂ ಒಟ್ಟಿಗೆ ಪೊಲೀಸ್ ಠಾಣೆಗೆ ದೂರು ನೀಡಲು ಹೋದರು.

ಪೊಲೀಸರು ಕೂಡಲೇ ಪ್ರತಿಕ್ರಿಯಿಸಿ. ಪ್ರಕರಣ ದಾಖಲಿಸಿಕೊಂಡು, ವೈದ್ಯಕೀಯ ಪರೀಕ್ಷೆಗೆ ವ್ಯವಸ್ಥೆ ಮಾಡಿ 6 ಆರೋಪಿಗಳನ್ನು ಬಂಧಿಸಿದರು.

ಆರೋಪಿಗಳನ್ನು ಪ್ರಸ್ತುತ ವಿಚಾರಣೆ ನಡೆಸಲಾಗುತ್ತಿದೆ.



## ಮದ್ಯದಂಗಡಿ ತೆರೆಯಲು ಹೋಗಿ ಕೇಜ್ರಿ ದಾರಿ ತಪ್ಪಿದರು : ಅಣ್ಣಾ ಹಜಾರೆ

**ಮುಂಬೈ:** ದೆಹಲಿ ಮುಖ್ಯಮಂತ್ರಿಯಾಗಿ ಅರವಿಂದ್ ಕೇಜ್ರಿವಾಲ್ ಉತ್ತಮ ಕೆಲಸ ಮಾಡುತ್ತಿದ್ದರು.

ಆದರೆ ಅವರು ಮದ್ಯದಂಗಡಿಗಳನ್ನು ತೆರೆಯಲು ಪ್ರಾರಂಭಿಸಿದರು ಮತ್ತು ಅದರ ಪರಿಣಾಮವಾಗಿ ಜನರ ಕೋಪವನ್ನು ಎದುರಿಸಬೇಕಾಯಿತು ಎಂದು ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಹೇಳಿದ್ದಾರೆ. ರೇಖಾ ಗುಪ್ತಾ ಎಂಬ ಮಹಿಳೆ ರಾಷ್ಟ್ರ ರಾಜಧಾನಿಯ ಹೊಸ ಮುಖ್ಯಮಂತ್ರಿಯಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಅವರ ಶುದ್ಧ ಆಲೋಚನೆಗಳು ಮತ್ತು ಕಾರ್ಯಗಳಿಂದಾಗಿ ಜನರು ಅವರಿಗೆ ಮತ ಚಲಾಯಿಸಿದ್ದಾರೆ ಎಂದು ಹೇಳಿದರು. ಸಿಎಂ ಆಗಿ, ಕೇಜ್ರಿವಾಲ್ ಸಮಾಜಕ್ಕೆ ಮಾದರಿಯಾಗಬೇಕಿತ್ತು ಆದರೆ ದಾರಿ ತಪ್ಪಿದರು ಎಂದು ಆಮ್ ಆದ್ಮ ಪಕ್ಷದ ಹುಟ್ಟಿಗೆ ಕಾರಣವಾದ ಹಜಾರೆ ಅಭಿಪ್ರಾಯಪಟ್ಟರು. ಹಿಂದಿನ ಸಿಎಂ (ಕೇಜ್ರಿವಾಲ್) ಉತ್ತಮ ಕೆಲಸ ಮಾಡುತ್ತಿದ್ದರು ಮತ್ತು ಮೂರು ಬಾರಿ ದೆಹಲಿ ಮುಖ್ಯಮಂತ್ರಿಯಾದರು. ಅವರು ಉತ್ತಮ ಕೆಲಸ ಮಾಡುತ್ತಿದ್ದರಿಂದ ನಾನು (ಅವರ ವಿರುದ್ಧ) ಏನನ್ನೂ ಮಾತನಾಡಲಿಲ್ಲ. ಆದರೆ ನಂತರ, ಅವರು ನಿಧಾನವಾಗಿ ಮದ್ಯದಂಗಡಿಗಳನ್ನು ತೆರೆಯಲು ಮತ್ತು ಪರವಾನಗಿಗಳನ್ನು ನೀಡಲು ಪ್ರಾರಂಭಿಸಿದರು. ನಂತರ ನಾನು ಅಸಮಾಧಾನಗೊಂಡೆ ಎಂದು ಎಎಪಿ ಸರ್ಕಾರದ ವಿವಾದಾತ್ಮಕ ಅಬಕಾರಿ ನೀತಿಯನ್ನು ಉಲ್ಲೇಖಿಸಿ ಹಜಾರೆ ಸುದ್ದಿಗಾರರಿಗೆ ತಿಳಿಸಿದರು.



## ಬಾವಲಿ ಮೂಲಕ ಮನುಷ್ಯರಿಗೆ ತಗುಲುವ ವೈರಾಣು ಪತ್ತೆ

**ಬೀಜಿಂಗ್:** ಕೋವಿಡ್ ಬಳಿಕ ಮತ್ತೊಂದು ಮಹಾಮಾರಿ ಆತಂಕ ಶುರುವಾಗಿದ್ದು, ಕೋವಿಡ್ ವೈರಸ್ ಪತ್ತೆಯಾಗಿದ್ದ ಅದೇ ಚೀನಾದಲ್ಲಿ ಇದೀಗ ಬಾವಲಿ ಮೂಲಕ ಮನಷ್ಯರಿಗೆ ಹರಡುವ HKU5-CoV-2 ಎಂಬ ವೈರಾಣು ಪತ್ತೆಯಾಗಿದೆ.

ಹೌದು.. ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಕಾರಣವಾದ ವೈರಸ್‌ನಂತೆಯೇ, ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ಅಪಾಯವನ್ನು ಹೊಂದಿರುವ ಹೊಸ ಕೊರೊನಾವೈರಸ್ ಚೀನಾದಲ್ಲಿ ಪತ್ತೆಯಾಗಿದೆ.

ಈ ಬಗ್ಗೆ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದ್ದು, HKU5-CoV-2 ಎಂಬ ಹೊಸ ವೈರಸ್ ಅನ್ನು ಬ್ಯಾಟ್ ವುಮನ್ ಎಂದು ಕರೆಯಲ್ಪಡುವ ಪ್ರಸಿದ್ಧ ವಿಜ್ಞಾನಿ ಶಿ ಝೆಂಗ್ಲಿ ನೇತೃತ್ವದ ವೈರಾಲಜಿಸ್ಟ್‌ಗಳ ತಂಡವು ಕಂಡುಹಿಡಿದಿದೆ.

ಈ ಹೊಸ ವೈರಸ್ HKU5-CoV-2 ಗೆ ಹೋಲುತ್ತದೆ ಎಂದು ಚೀನಾದ ಸಂಶೋಧಕರು ಕಂಡುಕೊಂಡಿದ್ದು, ಇದು ಕೂಡ ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಕಾರಣವಾದ ವೈರಸ್ ಎನ್ನಲಾಗಿದೆ. ಇದು ಕೋವಿಡ್ ಮಾಡಿದಂತೆಯೇ ೦ಅಇ2 ಎಂಬ ಮಾನವ ಜೀವಕೋಶ 'ಗಳಿಗೆ ನುಸುಳಬಹುದು ವರದಿಯಲ್ಲಿ ಉಲ್ಲೇಖಿಸಿದೆ. ವುಹಾನ್‌ನಲ್ಲಿ ಸೋರಿಕೆಯಾಗಿದ್ದ ವೈರಸ್ ಇದೇನಾ ಇನ್ನು ಹೊಸ ವೈರಸ್ ಪತ್ತೆ ಬೆನ್ನಲ್ಲೇ ಇದೀಗ ಈ ಹಿಂದೆ ವುಹಾನ್ ಇನ್‌ಸ್ಟಿಟ್ಯೂಟ್‌ನಲ್ಲಿ, ಅಔಗಿಏಆ-19 ಪ್ರಯೋಗಾಲಯದ ಸೋರಿಕೆ ಯಲ್ಲಿ ಇದ್ದ ವೈರಸ್ ಇದೇನಾ ಎಂಬ ಪ್ರಶ್ನೆ ಕೂಡ ಉದ್ಭವವಾಗಿದೆ. ಅಂತೆಯೇ ಈ ವೈರಸ್ ಇದೀಗ ಸೋರಿಕೆ ಸಿದ್ಧಾಂತದ ಕೇಂದ್ರಬಿಂದುವಾಗಿದೆ. ಆದರೆ ಚೀನಾ ಸರ್ಕಾರ ಮಾತ್ರ ಈ ಸೋರಿಕೆ ಸಿದ್ಧಾಂತವನ್ನು ಅಲ್ಲಗಳೆಯುತ್ತಲೇ ಬಂದಿತ್ತು. ಈ ಹೊಸ ವೈರಸ್ ಈ ಹಿಂದೆ ಕೋವಿಡ್-19 ಗೆ ಕಾರಣವಾದ HKU5-CoV-2 ವೈರಸ್‌ನಂತೆಯೇ ಜೀವಕೋಶಗಳ ಮೇಲ್ಮೈ ಪ್ರೋಟೀನ್ ಅನ್ನು ಜೀವಕೋಶಗಳಿಗೆ ನುಸುಳಲು ಬಳಸುವುದರಿಂದ ಅದು ಮನುಷ್ಯರಿಗೆ ಸೋಂಕು ತಗುಲಿಸುವ ಸಾಮರ್ಥ್ಯವನ್ನು ಹೊಂದಿದೆ. ಕಾಡಿನಲ್ಲಿ ನೂರಾರು ಕೊರೊನಾವೈರಸ್‌ಗಳು ಇದ್ದರೂ, ಕೆಲವೇ ಕೆಲವು ಮಾತ್ರ ಮನುಷ್ಯರಿಗೆ ಸೋಂಕು ತಗುಲಬಹುದು.

ಮನುಷ್ಯರಿಗೆ ಸೋಂಕು ತಗುಲುವ ಅಪಾಯವಿದ್ದರೂ, ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ಕುರಿತು ಹೆಚ್ಚಿನ ವಿವರಗಳನ್ನು ಇನ್ನೂ ತನಿಖೆ ಮಾಡಬೇಕಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ. ಚೀನಾದ ಪ್ರಖ್ಯಾತ ವೈರಲಾಜಿಸ್ಟ್ ಹಾಗೂ ವುಹಾನ್ ವೈರಾಲಜಿ ಸಂಸ್ಥೆಯಲ್ಲಿ ತಜ್ಞರಾಗಿದ್ದ ಝೆಂಗಲಿ ಡಬ್ಲ್ಯೂ ಐವಿ ಇದರ ಥಿಯರಿಯನ್ನು ಕೋವಿಡ್ 10 ಉಗಮಕ್ಕೆ ಜೋಡಿಸಿದೆ ಎಂದಿದ್ದು, ಸೋಂಕು ಲ್ಯಾಬ್‌ನ ಸೋರಿಕೆ ಎಂಬ ಆರೋಪವನ್ನು ಮತ್ತೊಮ್ಮೆ ಅಲ್ಲಗಳೆದಿದ್ದಾರೆ.



### ಇಷ್ಟಕ್ಕೂ ಏನಿದು HKU5-CoV-2?

HKU5-CoV-2 ಎಂಬುದು ಮೆರ್ಬೆಕೊವೈರಸ್ ಉಪಜಾತಿಗೆ ಸೇರಿದ ಕೊರೊನಾವೈರಸ್ ಆಗಿದ್ದು, ಇದು ಮಿಡಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್ ಗೆ ಕಾರಣವಾಗುವ ವೈರಸ್ ಅನ್ನು ಸಹ ಒಳಗೊಂಡಿದೆ. ವಿಜ್ಞಾನಿಗಳು ಹೊಸ ವೈರಸ್ ಈ ಹಿಂದಿನ ಕೋವಿಡ್ ವೈರಸ್ ನಂತೆಯೇ ಮಾನವನಿಗೆ ಸೋಂಕಿ ಉಸಿರಾಟ ವ್ಯವಸ್ಥೆ ಮೇಲೆ ಪರಿಣಾಮ ಬೀರಬಲ್ಲದು ಎಂದು ಕಂಡುಹಿಡಿದಿದ್ದಾರೆ, ಇದು HKU5-CoV-2 ಮತ್ತು (ಸಾಮಾನ್ಯ ಶೀತ ವೈರಸ್) ಗೆ ಹೋಲುತ್ತದೆ. ಪ್ರಯೋಗಾಲಯ ಪರೀಕ್ಷೆಯ ಸಮಯದಲ್ಲಿ, ವಿಜ್ಞಾನಿಗಳು ಬಳಸಿದ ಮಿನಿ-ಮಾನವ ಅಂಗ ಮಾದರಿಗಳಲ್ಲಿ HKU5-CoV-2 ಮಾನವ ಜೀವಕೋಶ ಸಂಸ್ಕೃತಿಗಳಿಗೆ ಸೋಂಕು ತಗುಲಿಸಲು ಸಾಧ್ಯವಾಯಿತು ಎಂದು ತಂಡವು ಕಂಡುಹಿಡಿದಿದೆ.

### ಮತ್ತೊಂದು ಸಾಂಕ್ರಾಮಿಕ?

ಇದೇ ವೇಳೆ ನಾವು ಮತ್ತೊಂದು ಸಾಂಕ್ರಾಮಿಕ ರೋಗವನ್ನು ಎದುರಿಸುತ್ತಿರಬಹುದೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಿನ್ನೇಸೋಟ ವಿಶ್ವವಿದ್ಯಾಲಯದ ಸಾಂಕ್ರಾಮಿಕ ರೋಗ ತಜ್ಞ ಡಾ. ಮೈಕೆಲ್ ಓಸ್ಟರ್‌ಹೋಮ್, '2019 ಕ್ಕೆ ಹೋಲಿಸಿದರೆ ಇದೇ ರೀತಿಯ ವೈರಸ್‌ಗಳಿಗೆ ಜನಸಂಖ್ಯೆಯಲ್ಲಿ ಹೆಚ್ಚಿನ ರೋಗನಿರೋಧಕ ಶಕ್ತಿ ಇದೆ. ಇದು ಸಾಂಕ್ರಾಮಿಕ ಅಪಾಯವನ್ನು ಕಡಿಮೆ ಮಾಡಬಹುದು ಎಂದು ಅವರು ಹೇಳಿದರು.

## ಮಿನಿ ನ್ಯೂಸ್

### ವಲಸೆ ಮಕ್ಕಳ ಕಾನೂನು ಸೇವೆ ನಿಲ್ಲಿಸುವ ಆದೇಶ ಹಿಂಪಡೆದ ಟ್ರಂಪ್

**ಮಿಯಾಮಿ:** ಅಮೆರಿಕಕ್ಕೆ ಏಕಾಂಗಿಯಾಗಿ ಆಗಮಿಸುವ ವಲಸೆ ಮಕ್ಕಳಿಗೆ ಸಹಾಯ ಮಾಡುವ ಕಾನೂನು ಗುಂಪುಗಳಿಗೆ ಅವರು ತಮ್ಮ ಕೆಲಸವನ್ನು ನಿಲ್ಲಿಸಬೇಕು ಎಂಬ ಹೇಳಿಕೆಯನ್ನು ವಾಪಸ್ ಪಡೆಯಲಾಗಿದೆ. ಸಾವಿರಾರು ಅನಾಥ ಮಕ್ಕಳಿಗೆ ಕಾನೂನು ಸೇವೆಗಳನ್ನು ಒದಗಿಸುವುದನ್ನು ಪುನರಾರಂಭಿಸಬಹುದು ಎಂದು ಟ್ರಂಪ್ ಆಡಳಿತವು ಗುಂಪುಗಳಿಗೆ ತಿಳಿಸಿದೆ. ಅಕೇಶಿಯಾ ಸೆಂಟರ್ ಫಾರ್ ಜಸ್ಟೀಸ್ ಅವರು ಹಿಮ್ಮುಖಗೊಳಿಸುವ ಬಗ್ಗೆ ಸರ್ಕಾರದಿಂದ ನೋಟಿಸ್ ಪಡೆದಿದ್ದಾರೆ ಎಂದು ಹೇಳಿದರು.

ಪೋಷಕರು ಅಥವಾ ಕಾನೂನುಬದ್ಧ ಪೋಷಕರಿಲ್ಲದೆ ಮೆಕ್ಸಿಕೊದ ಗಡಿಯುದ್ದಕ್ಕೂ ಯುನೈಟೆಡ್ ಸ್ಟೇಟ್ಸ್‌ಗೆ ಆಗಮಿಸಿದ ಮಕ್ಕಳಿಗೆ ಕಾನೂನು ಪ್ರಾತಿನಿಧ್ಯವನ್ನು ಒದಗಿಸುವ ಕಾರ್ಯಕ್ರಮವನ್ನು ಸರ್ಕಾರ ಅಮಾನತುಗೊಳಿಸಿದ ನಂತರ ಈ ನೋಟಿಸ್ ಬಂದಿದೆ. ವಲಸೆ ಮಕ್ಕಳಿಗೆ ನೆರವು ನೀಡುವ ಹಲವಾರು ಸಂಸ್ಥೆಗಳು ಈ ಕ್ರಮವನ್ನು ಟೀಕಿಸಿದ್ದವು ಮತ್ತು ಆ ಸಮಯದಲ್ಲಿ ಅಪ್ರಾಪ್ತ ವಯಸ್ಕರು ಅಪಾಯದಲ್ಲಿದ್ದಾರೆ ಎಂದು ಹೇಳಿದ್ದರು. 200 ಮಿಲಿಯನ್ ಯುಎಸ್‌ಡಿ ಒಪ್ಪಂದವು ಅಕೇಶಿಯಾ ಮತ್ತು ಅದರ ಉಪಗುತ್ತಿಗೆದಾರರಿಗೆ ಸುಮಾರು 26,000 ಮಕ್ಕಳಿಗೆ ಕಾನೂನು ಪ್ರಾತಿನಿಧ್ಯವನ್ನು ಒದಗಿಸಲು ಅನುವು ಮಾಡಿಕೊಡುತ್ತದೆ.



### ಭಾಷೆಗಾಗಿ ಪ್ರಾಣ ಕೊಡಲು ಸಿದ್ಧರಿರುವ ತಮಿಳು ಮಕ್ಕಳ ಜೊತೆ ಆಟವಾಡಬೇಡಿ

**ನವದೆಹಲಿ:** ಭಾಷೆಗಾಗಿ ತಮ್ಮ ಪ್ರಾಣ ಕೊಡಲು ಸಿದ್ಧರಿರುವ ತಮಿಳು ಮಕ್ಕಳ ಜೊತೆ ಆಟವಾಡಬೇಡಿ ಎಂದು ಖ್ಯಾತ ಚಲನಚಿತ್ರ ನಟ ಕಮಲ್ ಹಾಸನ್ ಎಚ್ಚರಿಕೆ ನೀಡಿದ್ದಾರೆ. ತಮಿಳರ ಭಾಷೆಯ ಮಹತ್ವವನ್ನು ಒತ್ತಿಹೇಳಿದ ಅವರು ಅಂತಹ ವಿಷಯಗಳನ್ನು ಲಘುವಾಗಿ ತೆಗೆದುಕೊಳ್ಳದಂತೆ ಎಚ್ಚರಿಕೆ ನೀಡಿದ್ದಾರೆ.

ದಕ್ಷಿಣ ರಾಜ್ಯದಲ್ಲಿ ಕೇಂದ್ರ ಮತ್ತು ಎಂ.ಕೆ.ಸ್ಟಾಲಿನ್ ಅವರ ಡಿಎಂಕೆ ಸರ್ಕಾರದ ನಡುವೆ ನಡೆಯುತ್ತಿರುವ ಭಾಷಾ ವಿವಾದದ ಮಧ್ಯೆ ಅವರ ಹೇಳಿಕೆ ಬಂದಿರುವುದು ವಿಶೇಷವಾಗಿದೆ. ಒಂದು ಭಾಷೆಗಾಗಿ ತಮಿಳರು ಪ್ರಾಣ ಕಳೆದುಕೊಂಡಿದ್ದಾರೆ. ಆ ವಸ್ತುಗಳೊಂದಿಗೆ ಆಟವಾಡಬೇಡಿ. ತಮಿಳರಿಗೆ, ಮಕ್ಕಳಿಗೂ ಸಹ ತಮಗೆ ಯಾವ ಭಾಷೆ ಬೇಕು ಎಂದು ತಿಳಿದಿದೆ. ಅವರಿಗೆ ಯಾವ ಭಾಷೆ ಬೇಕು ಎಂಬುದನ್ನು ಆಯ್ಕೆ ಮಾಡುವ ಜ್ಞಾನವಿದೆ ಎಂದು ಕಮಲ್ ಹಾಸನ್ ತಮ್ಮ ಮಕ್ಕಳ್ ನೀಧಿ ಮೈಯಂ (ಎಂಎನ್‌ಎಂ) ಪಕ್ಷದ 8 ನೇ ಸಂಸ್ಥಾಪನಾ ದಿನದಂದು ಮಾಡಿದ ಭಾಷಣದಲ್ಲಿ ಹೇಳಿದರು.



### ಹಮಾಸ್ ಬಂಡುಕೋರರಿಂದ ಇಸ್ರೇಲಿ ಒತ್ತೆಯಾಳುಗಳ ಬಿಡುಗಡೆ

**ನುಸೈರಾತ್:** ಕದನ ವಿರಾಮ ಒಪ್ಪಂದದ ಭಾಗವಾಗಿ ಹಮಾಸ್ ಬಂಡುಕೋರರು ಮೂವರು ಇಸ್ರೇಲ್ ಒತ್ತೆಯಾಳುಗಳನ್ನು ರೆಡ್ ಕ್ರಾಸ್ ಗೆ ಹಸ್ತಾಂತರಿಸಿದೆ. 20 ವರ್ಷದ ಓಮರ್ ವೆಂಕರ್ಟ್, ಓಮರ್ ಶೆಮ್ ಟೋವ್ ಮತ್ತು ಎಲಿಯಾ ಕೊಹೆನ್ ಅವರನ್ನು ಹಮಸ್ ಹಸ್ತಾಂತರಿಸಿದೆ. ಕೇಂದ್ರ ಪಟ್ಟಣವಾದ ನುಸೈರಾತ್‌ನಲ್ಲಿ ನೂರಾರು ಪ್ಯಾಲೆಸ್ಟೇನಿಯರ ಮುಂಭಾಗ ವೇದಿಕೆಯ ಮೇಲೆ ಮುಖವಾಡ ಧರಿಸಿದ, ಶಸ್ತ್ರಸಜ್ಜಿತ ಹಮಾಸ್ ಬಂಡಕೋರರು ಮೂವರು ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಅವರ ಕುಟುಂಬಸ್ಥರು , ಸ್ನೇಹಿತರು ಘೋಷಣೆ ಕೂಗಿ ಸಂಭ್ರಮ ಪಟ್ಟರು. ಅವರೆಲ್ಲರನ್ನೂ ಅಪಹರಿಸಲಾಗಿತ್ತು. ನಂತರ ಅವರನ್ನು ರೆಡ್ ಕ್ರಾಸ್ ವಾಹನದಲ್ಲಿ ಇಸ್ರೇಲ್‌ಗೆ ಕರೆದೊಯ್ಯಲಾಯಿತು.ಇದಕ್ಕೂ ಮುನ್ನಾ ದಕ್ಷಿಣ ಗಾಜಾ ನಗರವಾದ ರಫಾದಲ್ಲಿ ಇಬ್ಬರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಯಿತು. ಆರನೇ ಒತ್ತೆಯಾಳು 36 ವರ್ಷದ ಹೆಶಮ್ ಅಲ್-ಸಯೀದ್ ಕೂಡ ಶನಿವಾರ ಬಿಡುಗಡೆಯಾಗಲಿದ್ದಾರೆ. ಅಕ್ಟೋಬರ್ 7, 2023 ರಂದು ಗಾಜಾದಲ್ಲಿ ನೋವಾ ಸಂಗೀತ ಉತ್ಸವದಲ್ಲಿಈ ಮೂವರನ್ನು ಹಮಾಸ್ ಹೋರಾಟಗಾರರು ಅಪಹರಿಸಿದ್ದರು.

### ಭಾರತದಲ್ಲಿ ಇಂಧನ ಬೆಲೆ ಇಳಿಕೆ ಸಾಧ್ಯತೆ

**ವಿಜಯವಾಡ:** ಅಮೆರಿಕ ಸೇರಿದಂತೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ತೈಲ ಬರುತ್ತಿರುವುದರಿಂದ ಇಂಧನ ಬೆಲೆಗಳು ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಎಸ್ ಪುರಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪುರಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಹೊಸ ಯುಎಸ್ ಆಡಳಿತದೊಂದಿಗೆ ಭಾರತವು ಸಂಪರ್ಕಗಳನ್ನು ಸ್ಥಾಪಿಸಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ ಅವರು ಇಂಧನ ರಂಗದಲ್ಲಿ ಇಂಡೋ-ಅಮೆರಿಕನ್ ಸಂಬಂಧವು ಗಾಢವಾಗಲಿದೆ ಎಂದು ಹೇಳಿದರು. ಭಾರತವು ಅರ್ಜೆಂಟೀನಾ ಸೇರಿದಂತೆ 40 ದೇಶಗಳಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು ಜಗತ್ತಿನಲ್ಲಿ ಸಾಕಷ್ಟು ತೈಲ ಇರುವುದರಿಂದ, ಕಡಿತವನ್ನು ಜಾರಿಗೆ ತರುತ್ತಿರುವ ತೈಲ ಉತ್ಪಾದಿಸುವ ರಾಷ್ಟ್ರಗಳು ಸಹ ತಮ್ಮ ನಿರ್ಧಾರಗಳನ್ನು ಮರುಪರಿಶೀಲಿಸಲು ಒತ್ತಾಯಿಸಲ್ಪಡುತ್ತವೆ.

ತೈಲ ಖರೀದಿಯ ಡಿ-ಡಾಲರೈಸೇಶನ್ ಎಂದಿಗೂ ಉದ್ದೇಶವಲ್ಲ ಎಂದು ಅವರು ಹೇಳಿದರು.

ಹೆಚ್ಚಿನ ವಹಿವಾಟುಗಳು ಡಾಲರ್‌ಗಳಲ್ಲಿವೆ ಮತ್ತು ಯಾವಾಗಲೂ ಇವೆ ಎಂದು ಒತ್ತಿ ಹೇಳಿದರು. ಯುನೈಟೆಡ್ ಸ್ಟೇಟ್ಸ್ ಒಳಗೆ, ಅವರುಡ್ರಿಲ್, ಬೇಬಿ, ಡ್ರಿಲ್ ಎಂದು ಹೇಳಿದರು. ಇದು ಹೆಚ್ಚು ಕೊರೆಯಲು ಮತ್ತು ಹೆಚ್ಚಿನ ತೈಲವನ್ನು ಹೊರತೆಗೆಯಲು ಸಂಕೇತವಾಗಿದೆ ಎಂದು ಅವರು ಹೇಳಿದರು.



# ಲಾಹೋರ್‌ನಲ್ಲಿ ಮೊಳಗಿತು ಜನ ಗಣ ಮನ!



## ಎಡವಟ್ಟು ಮಾಡಿಕೊಂಡ ಪಿಸಿಬಿ!

ಪಾಕಿಸ್ತಾನದ ಲಾಹೋರ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವೆ ಪಂದ್ಯ ನಡೆಯುತ್ತಿದೆ ಈ ವೇಳೆ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ಯಡವಟ್ಟು ಒಂದನ್ನು ಮಾಡಿಕೊಂಡಿದೆ. 2025 ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಮಹತ್ವದ ಪಂದ್ಯಕ್ಕೆ ಇನ್ನೊಂದು ದಿನ ಸಮಯ ಬಾಕಿ ಉಳಿದಿದೆ. ಆದ್ರೂ ಕೂಡ ಪಾಕಿಸ್ತಾನದ ಕರಾಚಿಯಲ್ಲಿ ಪಂದ್ಯಾವಳಿಗೂ ಮುನ್ನ ಒಂದು ಕುತೂಹಲಕಾರಿಯೊಂದು ಜರುಗಿದೆ. ಪಾಕಿಸ್ತಾನದ ಲಾಹೋರ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವೆ ಪಂದ್ಯ ನಡೆಯುತ್ತಿದೆ ಈ ವೇಳೆ ವಿಶೇಷ ಘಟನೆ ನಡೆದಿದೆ. ಇದರಿಂದ ವಿಶ್ವಕ್ರಿಕೆಟ್‌ನಲ್ಲಿ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ನಗೆ ಪಾಟಲಿಗೀಡಾಗಿದೆ.

ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ಪಂದ್ಯದ ಟಾಸ್‌ನ ಬಳಿಕ ರಾಷ್ಟ್ರಗೀತೆ ಹಾಡುವಾಗ ಪಾಕಿಸ್ತಾನ ಯಡವಟ್ಟು ಮಾಡಿಕೊಂಡಿದೆ. ರಾಷ್ಟ್ರಗೀತೆ ಸಂದರ್ಭದಲ್ಲಿ ಆಸ್ಟ್ರೇಲಿಯಾದ ರಾಷ್ಟ್ರಗೀತೆಯ ಬದಲು ಭಾರತದ ರಾಷ್ಟ್ರಗೀತೆ 'ಜನ ಗಣ ಮನ' ನುಡಿಸಲಾಗಿದೆ. ಈ ತಪ್ಪನ್ನು ಬೇಗನೆ ಸರಿಪಡಿಸಲಾಯಿತಾದರೂ, ಈ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

# ಇಂಗ್ಲಿಸ್ ಸಿಡಿಲಬ್ಬರಕ್ಕೆ ಬೆಚ್ಚಿಬಿದ್ದ ಆಂಗ್ಲರು!

## ದಾಖಲೆಯ ಮೊತ್ತವನ್ನ ಚೇಸ್ ಮಾಡಿ ಚರಿತ್ರೆ ಸೃಷ್ಟಿಸಿದ ಆಸ್ಟ್ರೇಲಿಯಾ



ಮೊದಲು ಬ್ಯಾಟಿಂಗ್ ಮಾಡಿದ್ದ ಆಂಗ್ಲರು 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 351 ರನ್‌ಗಳಿಸಿತ್ತು. ಈ ಮೊತ್ತವನ್ನ ಕಾಂಗರೂ ಪಡೆ 47.3 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ತಲುಪುವ ಮೂಲಕ ಚಾಂಪಿಯನ್ಸ್ ಟ್ರೋಫಿಯಲ್ಲಿ ಶುಭಾರಂಭ ಮಾಡಿತು.

**ಇಂಗ್ಲೆಂಡ್ ವಿರುದ್ಧ ಆಸ್ಟ್ರೇಲಿಯಾಗೆ ಜಯ**

ಚಾಂಪಿಯನ್ಸ್ ಟ್ರೋಫಿಯಲ್ಲಿ ವಿಶ್ವಚಾಂಪಿಯನ್ ಆಸ್ಟ್ರೇಲಿಯಾ ಚರಿತ್ರೆ ಸೃಷ್ಟಿಸಿದೆ. 3 ದಶಕಗಳ ಇತಿಹಾಸದ ಚಾಂಪಿಯನ್ಸ್ ಟ್ರೋಫಿಯಲ್ಲಿ ಗರಿಷ್ಠ ರನ್ ಚೇಸ್ ಮಾಡುವ ಮೂಲಕ ವಿಶ್ವದಾಖಲೆ ಬರೆದಿದೆ. ಇಂಗ್ಲೆಂಡ್ ನೀಡಿದ್ದ 352 ರನ್‌ಗಳ ದಾಖಲೆಯ ಮೊತ್ತವನ್ನು 15 ಎಸೆತಗಳಿರುವಂತೆಯೇ ಚೇಸ್ ಮಾಡಿ ಗೆಲುವು ಸಾಧಿಸಿ ಚರಿತ್ರೆ ಸೃಷ್ಟಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ್ದ ಆಂಗ್ಲರು 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 351 ರನ್‌ಗಳಿಸಿತ್ತು. ಈ ಮೊತ್ತವನ್ನ ಕಾಂಗರೂ ಪಡೆ 47.3 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ತಲುಪುವ ಮೂಲಕ ಚಾಂಪಿಯನ್ಸ್ ಟ್ರೋಫಿಯಲ್ಲಿ ಶುಭಾರಂಭ ಮಾಡಿತು.

**ವಿಶ್ವದಾಖಲೆ ಬರೆದ ಬೆನ್ ಡಕೆಟ್:** ಆಸ್ಟ್ರೇಲಿಯಾ ವಿರುದ್ಧದ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ಬೆನ್ ಡಕೆಟ್ ಅವರು ಅದ್ಭುತವಾದ 165 ರನ್‌ಗಳ ಇನ್ನಿಂಗ್ಸ್ ಆಡಿ ಇಂಗ್ಲೆಂಡ್ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದರು. ಇದು ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲೇ ಅತಿ ಹೆಚ್ಚು ವೈಯಕ್ತಿಕ ರನ್‌ಗಳ ದಾಖಲೆಯಾಗಿದೆ. ಈ ಮೂಲಕ ಡಕೆಟ್, ಜೋ ರೂಟ್ ಅವರ ಹಿಂದಿನ ದಾಖಲೆಯನ್ನು ಮುರಿದು ಹೊಸ ದಾಖಲೆ ನಿರ್ಮಿಸಿದ್ದಾರೆ.

ಪಾಕಿಸ್ತಾನದ ಗಡಾಫಿ ಮೈದಾನದಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಡುವಿನ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ಇಂಗ್ಲೆಂಡ್ ಪರ ಬೆನ್ ಡಕೆಟ್ ಅದ್ಭುತ ಪ್ರದರ್ಶನ ನೀಡಿ ಶತಕದ ಇನ್ನಿಂಗ್ಸ್ ಆಡಿ ಅದ್ಭುತ ಸಾಧನೆ ಮಾಡಿದರು. ಈ ಮೂಲಕ ಚಾಂಪಿಯನ್ಸ್ ಟ್ರೋಫಿಯಲ್ಲಿ ಇಂಗ್ಲೆಂಡ್ ಪರ ಅತಿದೊಡ್ಡ ಇನ್ನಿಂಗ್ಸ್ ಆಡಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು.

ಆಸ್ಟ್ರೇಲಿಯಾ ವಿರುದ್ಧದ ಈ ಪಂದ್ಯದಲ್ಲಿ ಬರೋಬ್ಬರಿ 165 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದ ಬೆನ್ ಡಕೆಟ್, ಜೋ ರೂಟ್ ಅವರನ್ನು ಹಿಂದಿಕ್ಕಿದ್ದಲ್ಲದೆ, ಚಾಂಪಿಯನ್ಸ್ ಟ್ರೋಫಿಯ ಇತಿಹಾಸದಲ್ಲಿ ಅತಿದೊಡ್ಡ ಇನ್ನಿಂಗ್ಸ್ ಆಡಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

# ಭಾರತ ವಿರುದ್ಧ ಪಾಕಿಸ್ತಾನ್ ತಂಡದ್ದೇ ಮೇಲುಗೈ




## ಅಚ್ಚರಿ ಎನಿಸಿದರೂ ಇದುವೇ ಸತ್ಯ..!

ಭಾರತ ಮತ್ತು ಪಾಕಿಸ್ತಾನ್ ತಂಡಗಳು ಏಕದಿನ ಕ್ರಿಕೆಟ್‌ನಲ್ಲಿ ಇದುವರೆಗೆ 135 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಈ ವೇಳೆ ಭಾರತ ತಂಡ ಗೆದ್ದಿರುವುದಕ್ಕಿಂತ ಹೆಚ್ಚಿನ ಪಂದ್ಯಗಳನ್ನು ಪಾಕಿಸ್ತಾನ್ ತಂಡವೇ ಗೆದ್ದಿದೆ. ಅದರಲ್ಲೂ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲೂ ಭಾರತದ ವಿರುದ್ಧ ಪಾಕ್ ಪಡೆ ಹೆಚ್ಚಿನ ಮ್ಯಾಚ್‌ಗಳಲ್ಲಿ ಜಯ ಸಾಧಿಸಿದೆ. ವಿಶ್ವಕ್ರಿಕೆಟ್‌ನ ಮಹಾ ಕದನಕ್ಕಾಗಿ ವೇದಿಕೆ ಸಿದ್ಧವಾಗಿದೆ. ಭಾನುವಾರ (ಫೆ.23) ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯ 5ನೇ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಮುಖಾಮುಖಿಯಾಗಲಿದೆ. ಈ ಹೈವೋಲ್ಟೇಜ್ ಪಂದ್ಯಕ್ಕೆ ದುಬೈ ಅಂತಾರಾಷ್ಟ್ರೀಯ ಸ್ಟೇಡಿಯಂ ಆತಿಥ್ಯವಹಿಸಲಿದೆ. ಈ ಪಂದ್ಯದಲ್ಲಿ ಯಾರು ಗೆಲ್ಲಲಿದ್ದಾರೆ ಎಂಬ ಕುತೂಹಲ ಒಂದೆಡೆಯಾದರೆ, ಅಂಕಿ ಅಂಶಗಳ ಪ್ರಕಾರ ಯಾರದ್ದು ಮೇಲುಗೈ ಎಂಬ ಚರ್ಚೆಗಳು ನಡೆಯುತ್ತಿದೆ. ಇಲ್ಲಿ ಕುತೂಹಲಕಾರಿ ವಿಷಯ ಎಂದರೆ ಟೀಮ್ ಇಂಡಿಯಾ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ ಪಾಕಿಸ್ತಾನ್ ತಂಡದ್ದೇ ಮೇಲುಗೈ ಎಂಬುದು.

**ಪಾಕ್ ಪಡೆಯ ಮೇಲುಗೈ:** ಏಕದಿನ ಕ್ರಿಕೆಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಈವರೆಗೆ 135 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಈ ವೇಳೆ ಟೀಮ್ ಇಂಡಿಯಾ ಗೆದ್ದಿರುವುದು ಕೇವಲ 57 ಮ್ಯಾಚ್‌ಗಳಲ್ಲಿ ಮಾತ್ರ. ಇನ್ನು ಪಾಕಿಸ್ತಾನ್ 73 ಪಂದ್ಯಗಳಲ್ಲಿ ಭಾರತ ತಂಡಕ್ಕೆ ಸೋಲುಣಿಸಿದೆ.

ಇನ್ನು ಐದು ಪಂದ್ಯಗಳು ಫಲಿತಾಂಶರಹಿತವಾಗಿತ್ತು. ಈ ಬಾರಿ ತಟಸ್ಥ ಮೈದಾನದಲ್ಲಿ ಸಾಂಪ್ರದಾಯಿಕ ಎದುರಾಳಿಗಳ ನಡುವಣ ಪಂದ್ಯ ನಡೆಯುತ್ತಿದೆ. ಅಂದರೆ ಇತ್ತ ಭಾರತದಲ್ಲೂ ಅಲ್ಲ, ಅತ್ತ ಪಾಕಿಸ್ತಾನದಲ್ಲೂ ಅಲ್ಲ. ಬದಲಾಗಿ ದುಬೈನಲ್ಲಿ ಪಂದ್ಯ ನಡೆಯುತ್ತಿರುವುದರಿಂದ ತಟಸ್ಥ ಮೈದಾನದಲ್ಲಿ ಅತ್ಯಧಿಕ ಪಂದ್ಯಗಳನ್ನು ಗೆದ್ದವರು ಯಾರು ಎಂಬ ಪ್ರಶ್ನೆ ಮೂಡುವುದು ಸಹಜ.

ಭಾರತ ಮತ್ತು ಪಾಕಿಸ್ತಾನ್ ಆಡಿರುವ 135 ಪಂದ್ಯಗಳಲ್ಲಿ 74 ಮ್ಯಾಚ್‌ಗಳು ತಟಸ್ಥ ಮೈದಾನಗಳಲ್ಲಿ ನಡೆದಿದೆ. ಈ ವೇಳೆ ಪಾಕಿಸ್ತಾನ್ ತಂಡ 40 ಮ್ಯಾಚ್‌ಗಳಲ್ಲಿ ಗೆಲುವು ದಾಖಲಿಸಿದರೆ, ಭಾರತ ತಂಡ ಗೆದ್ದಿರುವುದು 34 ಪಂದ್ಯಗಳಲ್ಲಿ ಮಾತ್ರ. ಇನ್ನು ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಉಭಯ ತಂಡಗಳು 5 ಬಾರಿ ಮುಖಾಮುಖಿಯಾಗಿವೆ. ಈ ವೇಳೆ ಪಾಕಿಸ್ತಾನ್ ತಂಡ 3 ಪಂದ್ಯಗಳಲ್ಲಿ ಜಯ ಸಾಧಿಸಿದರೆ, ಟೀಮ್ ಇಂಡಿಯಾ 2 ಪಂದ್ಯಗಳಲ್ಲಿ ಮಾತ್ರ ಗೆಲುವು ದಾಖಲಿಸಿದೆ.

ಈ ಅಂಕಿ ಅಂಶಗಳ ಪ್ರಕಾರ ಏಕದಿನ ಟೂರ್ನಿಗಳಲ್ಲಿ ಭಾರತದ ವಿರುದ್ಧ ಪಾಕಿಸ್ತಾನ್ ತಂಡ ಮೇಲುಗೈ ಹೊಂದಿರುವುದು ಸ್ಪಷ್ಟ. ಆದರೆ ಕೊನೆಯ ಐದು ಮುಖಾಮುಖಿಯಲ್ಲಿ ಟೀಮ್ ಇಂಡಿಯಾ ಪಾಕ್ ಪಡೆಯನ್ನು ಮಕಾಡೆ ಮಲಗಿಸಿದೆ ಎಂಬುದು ಇಲ್ಲಿ ಉಲ್ಲೇಖಾರ್ಹ.

# ಪಾಕಿಸ್ತಾನದ ವಿರುದ್ಧ ಅಬ್ಬರಿಸಲು ವಿರಾಟ್ ಕೊಹ್ಲಿ ಮಾಸ್ಟರ್ ಪ್ಲಾನ್!

ಐಸಿಸಿ ಪಂದ್ಯಾವಳಿಯಲ್ಲಿ ಮತ್ತೊಮ್ಮೆ ಭಾರತ ಪಾಕಿಸ್ತಾನ ಮುಖಾಮುಖಿಯಾಗಲು ಸಜ್ಜಾಗಿವೆ. ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಒಂದೇ ಗುಂಪಿನಲ್ಲಿ ಆಡುತ್ತಿರುವ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿಯಾಗಲಿವೆ. ಸೆಮಿಫೈನಲ್ ದೃಷ್ಟಿಯಿಂದ ಎರಡೂ ತಂಡಗಳಿಗೂ ಇದು ಮಹತ್ವದ ಪಂದ್ಯವಾಗಿದ್ದು ಗೆಲ್ಲಲೇಬೇಕಾದ ಒತ್ತಡದಲ್ಲಿವೆ. ಸಾಂಪ್ರದಾಯಿಕ ಎದುರಾಳಿಯನ್ನು ಮಣಿಸಲು ಭಾರತ ಕಠಿಣ ಅಭ್ಯಾಸ ನಡೆಸುತ್ತಿದೆ. 2017ರ ಫೈನಲ್‌ನಲ್ಲಿ ಭಾರತ ಪಾಕಿಸ್ತಾನದ ವಿರುದ್ಧ ಸೋಲನುಭವಿಸುವ ಮೂಲಕ ಪ್ರಶಸ್ತಿ ಗೆಲುವಿನ ಕನಸು ಭಗ್ನವಾಗಿತ್ತು. ಅಂದಿನ ಸೋಲಿಗೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿದ್ದು, ಪಾಕಿಸ್ತಾನವನ್ನು ಪಂದ್ಯಾವಳಿಯಿಂದಲೇ ಹೊರ ಹಾಕಬಹುದಾಗಿದೆ. ವಿರಾಟ್ ಕೊಹ್ಲಿ ಭರ್ಜರಿ ಸಿದ್ಧತೆ ಪಾಕಿಸ್ತಾನದ ವಿರುದ್ಧದ ಪಂದ್ಯ ಎಂದರೆ ವಿರಾಟ್ ಕೊಹ್ಲಿ ಯಾವಾಗಲೂ ಭಾರತದ ನೆಚ್ಚಿನ ಬ್ಯಾಟರ್ ಆಗಿದ್ದಾರೆ. 2022ರ ಟಿ20 ವಿಶ್ವಕಪ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಇನ್ನಿಂಗ್ಸ್ ಸಾರ್ವಕಾಲಿಕ ಶ್ರೇಷ್ಠ ಇನ್ನಿಂಗ್ಸ್‌ಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಸೋಲಿನ ಅಂಚಿಗೆ ಭಾರತವನ್ನು ಪವಾಡ ಎನ್ನುವಂತೆ ಗೆಲ್ಲಿಸಿದ್ದರು ವಿರಾಟ್ ಕೊಹ್ಲಿ. ಉತ್ತಮ ಫಾರ್ಮ್‌ನಲ್ಲಿ ಇಲ್ಲದೇ ಇದ್ದರು ಪಾಕಿಸ್ತಾನ ಎಂದಾಗ ಕೊಹ್ಲಿ ನಿರೀಕ್ಷೆಗೂ ಮೀರಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಬಾಂಗ್ಲಾದೇಶದ ವಿರುದ್ಧ 22 ರನ್ ಗಳಿಸಿ ಔಟಾಗಿರುವ ವಿರಾಟ್ ಕೊಹ್ಲಿ ಪಾಕಿಸ್ತಾನದ ವಿರುದ್ಧ ಉತ್ತಮ ಪ್ರದರ್ಶನ ನೀಡಲು ವಿಶೇಷವಾಗಿ ಸಿದ್ಧತೆ ನಡೆಸುತ್ತಿದ್ದಾರೆ. ಎಲ್ಲಾ ಆಟಗಾರರಿಗಿಂತ 3 ಗಂಟೆಗಳು ಮುಂಚಿತವಾಗಿ ಅವರು ಬ್ಯಾಟಿಂಗ್ ಅಭ್ಯಾಸ ನಡೆಸಲು ಹಾಜರಾಗುತ್ತಿದ್ದಾರೆ. ಕೊಹ್ಲಿ 3 ಗಂಟೆಗೆ ಮುಂಚಿತವಾಗಿ ಅಭ್ಯಾಸಕ್ಕೆ ಆಗಮಿಸಿದ್ದಾರೆ. ಯುಎಇ ಕ್ರಿಕೆಟ್ ತಂಡದ ಪ್ರಮುಖ ಬೌಲರ್‌ಗಳನ್ನು ತನಗೆ ಬೌಲಿಂಗ್ ಮಾಡುವಂತೆ ಕೊಹ್ಲಿ ಮನವಿ ಮಾಡಿದ್ದು, ಬ್ಯಾಟಿಂಗ್ ಅಭ್ಯಾಸ ನಡೆಸಿದ್ದಾರೆ. ಸಹಾಯಕ ಕೋಚ್ ಅಭಿಷೇಕ್ ನಾಯರ್ ಕೂಡ ಕೊಹ್ಲಿ ಬ್ಯಾಟಿಂಗ್ ಅಭ್ಯಾಸ ನಡೆಸಲು ಸಹಾಯ ಮಾಡಿದ್ದಾರೆ. ವಿರಾಟ್ ಕೊಹ್ಲಿ ಸದ್ಯ ಉತ್ತಮ ಫಾರ್ಮ್‌ನಲ್ಲಿ ಇಲ್ಲದೇ ಹೋದರೂ ಭಾರತ ತಂಡ ಕಷ್ಟದ ಪರಿಸ್ಥಿತಿಯಲ್ಲಿದ್ದಾಗ ನೆರವಾಗುವ ಸಾಮರ್ಥ್ಯ ಅವರಲ್ಲಿದೆ. ಇಷ್ಟು ದಿನ ತಮ್ಮ ಬ್ಯಾಟಿಂಗ್ ವೈಫಲ್ಯಕ್ಕೆ ಟೀಕೆಗಳನ್ನು ಎದುರಿಸಿರುವ ವಿರಾಟ್ ಕೊಹ್ಲಿಗೆ ತಮ್ಮ ಬ್ಯಾಟ್‌ನಿಂದಲೇ ಉತ್ತರ ಕೊಡುವ ಅವಕಾಶ ಸಿಕ್ಕಿದೆ. ಪಾಕಿಸ್ತಾನದ ವಿರುದ್ಧ ಕೊಹ್ಲಿ ಏನಾದರೂ ದೊಡ್ಡ ಇನ್ನಿಂಗ್ಸ್ ಆಡಿದರೆ ಅವರು ಮತ್ತೊಮ್ಮೆ ಭಾರತೀಯ ಕ್ರಿಕೆಟ್ ಅಭಿಮಾನಿಗಳ ಪಾಲಿಗೆ ಕಿಂಗ್ ಆಗಲಿದ್ದಾರೆ. ರೋಹಿತ್ ಶರ್ಮಾ, ಕೆಎಲ್ ರಾಹುಲ್ ಬಾಂಗ್ಲಾದೇಶ ವಿರುದ್ಧ ಉತ್ತಮ ರನ್ ಗಳಿಸುವ ಮೂಲಕ ಫಾರ್ಮ್‌ಗೆ ಮರಳಿದ್ದಾರೆ. ಶುಭಮನ್ ಗಿಲ್ ಶತಕ ಗಳಿಸಿದ್ದಾರೆ. ಭಾರತದ ಬೌಲಿಂಗ್ ಕೂಡ ಬಲಿಷ್ಠವಾಗಿದ್ದು ಪಾಕಿಸ್ತಾನವನ್ನು ಕಟ್ಟಿಹಾಕಲು ಸಜ್ಜಾಗಿದ್ದಾರೆ.

## ಉತ್ತಮ ಪ್ರದರ್ಶನ ನೀಡಲು ವಿಶೇಷವಾಗಿ ಸಿದ್ಧತೆ




# ರಾಮಾಯಣ ಸಿನಿಮಾಗೆ ಶೂಟಿಂಗ್ ಆರಂಭಿಸಿದ ಯಶ್



ಅಕ್ಸಾ ಬೀಚ್‌ನಲ್ಲಿ 'ರಾಮಾಯಣ' ಸಿನಿಮಾದ ಶೂಟಿಂಗ್ ಮಾಡಲಾಗುತ್ತಿದೆ. 'ರಾಕಿಂಗ್ ಸ್ಟಾರ್' ಯಶ್ ಅವರು ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ರಣಬೀರ್ ಕಪೂರ್, ಸಾಯಿ ಪಲ್ಲವಿ ಮುಂತಾದವರು ಈ ಸಿನಿಮಾದ ಪಾತ್ರವರ್ಗದಲ್ಲಿ ಇದ್ದಾರೆ.

ಯಶ್ ಅವರು 'ಟಾಕ್ಸಿಕ್' ಸಿನಿಮಾದ ಕೆಲಸಗಳ ಜೊತೆಗೆ 'ರಾಮಾಯಣ' ಸಿನಿಮಾಗೂ ಡೇಟ್ಸ್ ನೀಡಿದ್ದಾರೆ. ನಟ ಯಶ್ ಅವರಿಗೆ ಇರುವ ಡಿಮ್ಯಾಂಡ್ ಅಷ್ಟಿಷ್ಟಲ್ಲ. ಕನ್ನಡ ಚಿತ್ರರಂಗ ಮಾತ್ರವಲ್ಲದೇ ಬಾಲಿವುಡ್‌ನಲ್ಲಿ ಕೂಡ ಅವರಿಗೆ ಸಖತ್ ಬೇಡಿಕೆ ಇದೆ. 'ರಾಮಾಯಣ' ಸಿನಿಮಾದಲ್ಲಿ ಅವರು ರಾವಣನ ಪಾತ್ರ ಮಾಡುತ್ತಿದ್ದಾರೆ. ಈ ಸಿನಿಮಾದ ಶೂಟಿಂಗ್ ಬಗ್ಗೆ ಈಗ ಮಾಹಿತಿ ಸಿಕ್ಕಿದೆ. ಯಶ್ ಅವರು ಯಾವಾಗ ಈ ಚಿತ್ರದ ಶೂಟಿಂಗ್‌ನಲ್ಲಿ ಭಾಗಿಯಾಗಲಿದ್ದಾರೆ ಎಂದು ಕೇಳುತ್ತಿದ್ದವರಿಗೆ ಇದು ಎಗ್ಸೈಟಿಂಗ್ ನ್ಯೂಸ್. ಈಗಾಗಲೇ ಯಶ್ ಅವರು 'ರಾಮಾಯಣ' ಸಿನಿಮಾದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಮುಂಬೈನಲ್ಲಿ ಅದ್ದೂರಿಯಾಗಿ ಚಿತ್ರೀಕರಣ ನಡೆಯುತ್ತಿದೆ. ಯಶ್ ಅವರು ಇಷ್ಟು ದಿನ 'ಟಾಕ್ಸಿಕ್' ಸಿನಿಮಾದ ಕೆಲಸಗಳಲ್ಲಿ ಬ್ಯುಸಿ ಆಗಿದ್ದರು. ಅದರ ನಡುವೆ ಬಿಡುವು ಮಾಡಿಕೊಂಡು ಮುಂಬೈಗೆ ತೆರಳಿದ್ದಾರೆ. ಅಲ್ಲಿ ಫೆಬ್ರವರಿ 21ರಿಂದಲೇ 'ರಾಮಾಯಣ' ಸಿನಿಮಾದ ಚಿತ್ರೀಕರಣ ದಲ್ಲಿ ಅವರು ಭಾಗಿ ಆಗಿದ್ದಾರೆ. 2 ದಿನಗಳ ಕಾಲ ಕಾಸ್ಟ್ಯೂಮ್ ಟೆಸ್ಟ್ ಮಾಡಲಾಗಿದೆ.

ಬಳಿಕ ಯುದ್ಧದ ದೃಶ್ಯಗಳ ಚಿತ್ರೀಕರಣ ಮಾಡಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿ ಆಗಿದೆ.

ಬಾಲಿವುಡ್‌ನ 'ರಾಮಾಯಣ' ಸಿನಿಮಾಗೆ ನಿತೇಶ್ ತಿವಾರಿ ಅವರು ನಿರ್ದೇಶನ ಮಾಡುತ್ತಿದ್ದಾರೆ. ರಣಬೀರ್ ಕಪೂರ್ ಅವರು ರಾಮನ ಪಾತ್ರ ಮಾಡುತ್ತಿದ್ದಾರೆ. ನಟಿ ಸಾಯಿ ಪಲ್ಲವಿ ಅವರಿಗೆ ಸೀತೆಯ ಪಾತ್ರ ನೀಡಲಾಗಿದೆ. ಬಹುತಾರಾಗಣದ ಈ ಸಿನಿಮಾದ ಮೇಲೆ ಬಹಳ ನಿರೀಕ್ಷೆ ಇದೆ. ವರದಿಗಳ ಪ್ರಕಾರ ರಣಬೀರ್ ಕಪೂರ್ ಅವರು ಈಗಾಗಲೇ ತಮ್ಮ ಪಾತ್ರಕ್ಕೆ ಶೇಕಡ 90ರಷ್ಟು ಚಿತ್ರೀಕರಣವನ್ನು ಮುಗಿಸಿದ್ದಾರೆ.

ಈ ಸಿನಿಮಾದ ನಿರ್ಮಾಣದಲ್ಲೂ ಯಶ್ ಅವರು ಪಾಲುದಾರಿಕೆ ಹೊಂದಿದ್ದಾರೆ. ಹಾಗಾಗಿ ಅವರಿಗೆ ಈ ಪ್ರಾಜೆಕ್ಟ್ ತುಂಬ ಮಹತ್ವದ್ದಾಗಿದೆ.

# ರಾಮ್ ಚರಣ್ ಮನೆಯಲ್ಲಿ ಇದೆ 15 ಕುದುರೆ



ಮೆಗಾಸ್ಟಾರ್ ಚಿರಂಜೀವಿ ಪುತ್ರ, ಪ್ಯಾನ್ ಇಂಡಿಯಾ ಸ್ಟಾರ್ ರಾಮ್ ಚರಣ್ ಅವರಿಗೆ ಸಿನಿಮಾಗಳ ಜೊತೆಗೆ ಪ್ರಾಣಿಗಳ ಮೇಲೂ ವಿಶೇಷ ಪ್ರೀತಿ. ರಾಮ್ ಚರಣ್ ಒಂದು ಶ್ವಾನವನ್ನು ಸಾಕಿದ್ದು, ತಮ್ಮದೇ ಕುಟುಂಬದವರಂತೆ ಕಾಣುತ್ತಾರೆ. ಅದರ ಜೊತೆಗೆ ಸುಮಾರು 25 ಕುದುರೆಗಳನ್ನು ರಾಮ್ ಚರಣ್ ಸಾಕಿದ್ದಾರೆ. ರಾಮ್ ಚರಣ್ ಅವರು ಹೀರೋ ಆಗಿ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ. ಅವರಿಗೆ ದೊಡ್ಡ ಮಟ್ಟದ ಜನಪ್ರಿಯತೆ ಇದೆ. ಅವರು ಸಾಮಾಜಿಕ ಕೆಲಸಗಳ ಮೂಲಕವೂ ಗುರುತಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಅವರಿಗೆ ಪ್ರಾಣಿಗಳ ಬಗ್ಗೆ ವಿಶೇಷ ಪ್ರೀತಿ ಇದೆ. ಇದನ್ನು ಅವರು ಅನೇಕ ಕಡೆಗಳಲ್ಲಿ ಹೇಳಿಕೊಂಡಿದ್ದರು. ಈ ಕಾರಣದಿಂದಲೇ ಅವರ ಮನೆಯಲ್ಲಿ ಒಂದಲ್ಲ-ಎರಡಲ್ಲ ಬರೋಬ್ಬರಿ 15 ಕುದುರೆಗಳು ಇವೆ. ಈ ವಿಚಾರ ಕೇಳಿ ಫ್ಯಾನ್ಸ್ ಅಚ್ಚರಿ ಹೊರಹಾಕಿದ್ದಾರೆ. ರಾಮ್ ಚರಣ್ ಸಿನಿಮಾಗಳಲ್ಲಿ ಪ್ರಾಣಿಗಳನ್ನು ಬಳಕೆ ಮಾಡುತ್ತಾರೆ. ಅದರಲ್ಲೂ ಕುದುರೆಗಳನ್ನು ಓಡಿಸೋದು ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಅವರು ಶ್ವಾನ ಸಾಕಿದ್ದು, ಕುಟುಂಬದಲ್ಲಿ ಒಂದು ಎಂಬಂತೆ ಅದನ್ನು ನೋಡಿಕೊಳ್ಳುತ್ತಾ ಇದ್ದಾರೆ.

ವಿದೇಶಿ ಟ್ರಿಪ್ಗೆ ಆ ಶ್ವಾನವನ್ನು ಕರೆದುಕೊಂಡೇ ಹೋಗುತ್ತಾರೆ. ಈಗ ಮಗಳಿಗೂ ಇದೇ ಬಾಂಡ್ ಬೆಳೆಯುವಂತೆ ಅವರು ನೋಡಿಕೊಳ್ಳುತ್ತಿದ್ದಾರೆ. 'ಮಗಧೀರ' ಸಿನಿಮಾದಲ್ಲಿ ಕುದುರೆ ಒಂದು ಬರುತ್ತದೆ. ಈ ಕುದುರೆಯನ್ನು ರಾಮ್ ಚರಣ್ ಓಡಿಸುತ್ತಾರೆ. ಈ ಕುದುರೆಯನ್ನು ಅವರು ಮನೆಯಲ್ಲಿ ತೆಗೆದುಕೊಂಡು ಹೋಗಿ ಸಾಕಿದ್ದಾರೆ ಎಂಬ ವಿಚಾರ ಗೊತ್ತೇ! ಹೌದು, ರಾಮ್ ಚರಣ್ ಅವರು ಶೂಟ್ ಮುಗಿದ ಬಳಿಕ ಅದನ್ನು ಮನೆಗೆ ತೆಗೆದುಕೊಂಡು ಹೋಗಿದ್ದಾರೆ. 'ಮಗಧೀರ ಸಿನಿಮಾದಲ್ಲಿ ಬಾದ್ಶಾ ಕುದುರೆಯನ್ನು ಬಳಸಲಾಗಿತ್ತು.

ಶೂಟಿಂಗ್ ಮುಗಿದ ಬಳಿಕ ಅದನ್ನು ನಾನು ಮನೆಗೆ ತೆಗೆದುಕೊಂಡು ಹೋದೆ. ಅದನ್ನು ಫಾರ್ಮ್‌ನಲ್ಲಿ ಇಟ್ಟಿದ್ದೇನೆ. ಅದಕ್ಕೆ ಇತ್ತೀಚೆಗೆ ಮರಿ ಹುಟ್ಟಿದೆ. ನಾನು ಅದನ್ನು ಮಗಳಿಗೆ ಗಿಫ್ಟ್ ಆಗಿ ನೀಡಿದ್ದೇನೆ. ಅವಳಿಗೂ ಈ ಬಗ್ಗೆ ಪ್ಯಾಷನ್ ಬೆಳೆಯಲಿ. ನನ್ನ ಫಾರ್ಮ್ನಲ್ಲಿ 15 ಕುದುರೆಗಳು ಇವೆ. ನನಗೆ ಪ್ರಾಣಿ ಪ್ರೀತಿ. ಅವುಗಳು ನನ್ನ ಹೃದಯಕ್ಕೆ ಹತ್ತಿರ' ಎಂದಿದ್ದರು ಅವರು. ರಾಮ್ ಚರಣ್ ನಟನೆಯ 'ಗೇಮ್ ಚೇಂಜರ್' ಸಿನಿಮಾ ಸಾಧಾರಣ ಹಿಟ್ ಎನಿಸಿಕೊಂಡಿದೆ. ಈ ಸಿನಿಮಾ ದೊಡ್ಡ ಮಟ್ಟದಲ್ಲಿ ಗಳಿಕೆ ಮಾಡಿಲ್ಲ. ಒಟಿಟಿಯಲ್ಲೂ ಚಿತ್ರ ರಿಲೀಸ್ ಆಗಿದೆ ಸದ್ಯ, ರಾಮ್ ಚರಣ್ ಅವರು ಬುಚ್ಚಿ ಬಾಬು ನಿರ್ದೇಶನದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಶೂಟ್ ಶೀಘ್ರವೇ ಆರಂಭ ಆಗಲಿದೆ.

# 'ವಾಲಿ' ಸಿನಿಮಾ ವೇಳೆ ಕಣ್ಣೀರು ಹಾಕಿದ್ದ ಸುದೀಪ್



## 'ವಾಲಿ' ಸಿನಿಮಾ 2001ರಲ್ಲಿ ರಿಲೀಸ್

ಸುದೀಪ್ ಚಿತ್ರರಂಗಕ್ಕೆ ಬಂದ ಹೊಸದರಲ್ಲಿ ಪರಿಸ್ಥಿತಿ ಹೀಗೆ ಇರಲಿಲ್ಲ. 'ವಾಲಿ' ಸಿನಿಮಾ ಬಿಡುಗಡೆ ಸಂದರ್ಭದಲ್ಲಿ ನಡೆದ ಘಟನೆಯನ್ನು ಸುದೀಪ್ ಮಿತ್ರ ಅರುಣ್ ಸಾಗರ್ ನೆನಪು ಮಾಡಿಕೊಂಡಿದ್ದಾರೆ. ಚಿತ್ರರಂಗ ಎಲ್ಲಾರನ್ನೂ ಹೂವಿನ ಹಾಸಿಗೆ ಹಾಸಿ ಸ್ವಾಗತಿಸುವುದಿಲ್ಲ. ಈ ರೀತಿ ಚಿತ್ರರಂಗಕ್ಕೆ ಬರುವವರು ಕಷ್ಟ ಎದುರಿಸಿಯೇ ಎದುರಿಸುತ್ತಾರೆ. ಅವರಿಗೆ ಯಶಸ್ಸು ಸಿಕ್ಕ ಬಳಿಕವೇ ಅವರನ್ನು ಎಲ್ಲಾರೂ ಕೊಂಡಾಡಲು ಬಯಸುತ್ತಾರೆ. ಖ್ಯಾತಿ ಸಿಕ್ಕಾಗ ಸೆಲ್ಫಿ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ಅರುಣ್ ಸಾಗರ್ ಅವರು ಮಾತನಾಡಿದ್ದರು. ಕಿಚ್ಚ ಸುದೀಪ್ ಅವರ ಪರಿಸ್ಥಿತಿ ಯಾವ ರೀತಿಯಲ್ಲಿ ಇತ್ತು ಎಂಬುದನ್ನು ವಿವರಿಸಿದ್ದರು. ಸುದೀಪ್ ಅವರ ತಂದೆ ಸಂಜೀವ್ ಅವರು ಚಿತ್ರರಂಗದಲ್ಲಿ ತೊಡಗಿಕೊಂಡವರಲ್ಲ.

ಆದರೆ, ಅವರು ತಮ್ಮದೇ ಹೋಟೆಲ್ ಉದ್ಯಮ ಹೊಂದಿದ್ದರು. ಇದಕ್ಕೆ ಚಿತ್ರರಂಗದವರು ಬರುತ್ತಿದ್ದರು. ಈ ಕಾರಣದಿಂದ ಅವರಿಗೆ ಚಿತ್ರರಂಗದ ಜೊತೆ ಒಳ್ಳೆಯ ಒಡನಾಟ ಬೆಳೆದಿತ್ತು. ಸುದೀಪ್ ಅವರಿಗೆ ಸಿನಿಮಾ ಬಗ್ಗೆ ಆಸಕ್ತಿ ಬೆಳೆಯಲು ಇದು ಕೂಡ ಕಾರಣ ಆಯಿತು ಎನ್ನಬಹುದು. ಆದರೆ, ಸಿನಿಮಾ ರಂಗದ ಜರ್ನಿ ಮಾತ್ರ ಅಷ್ಟು ಸುಲಭದಲ್ಲಿ ಇರಲೇ ಇಲ್ಲ. 1997ರಲ್ಲಿ 'ತಾಯವ್ವ' ಹೆಸರಿನ ಸಿನಿಮಾನ ಸುದೀಪ್ ಮಾಡಿದರು. ನಂತರ 'ಪ್ರತ್ಯರ್ಥ' ಹೆಸರಿನ ಸಿನಿಮಾ ಮಾಡಿದರು. 'ಸ್ಪರ್ಶ', 'ಹುಚ್ಚ' ರೀತಿಯ ಸಿನಿಮಾಗಳಲ್ಲಿ ಅವರು ನಟಿಸಿದರು. ಹುಚ್ಚ ಸಿನಿಮಾ ಹಿಟ್ ಆಗಿ ಅವರಿಗೆ ಸಾಕಷ್ಟು ಖ್ಯಾತಿ ನೀಡಿತು ಆದಾಗ್ಯೂ, ಸುದೀಪ್ ಕಷ್ಟಪಡೋದು ಇದ್ದೇ ಇತ್ತು. 'ವಾಲಿ' ಸಿನಿಮಾ 2001ರಲ್ಲಿ ರಿಲೀಸ್ ಆಯಿತು. ಈ ಚಿತ್ರದ ಆಡಿಯೋ ಲಾಂಚ್ ವೇಳೆ ಎದುರಾದ ಸಮಸ್ಯೆ ಏನು ಎಂದು ಅವರ ಆಪ್ತ ಅರುಣ್ ಸಾಗರ್ ಅವರು ಹೇಳಿಕೊಂಡಿದ್ದರು.

# ಪೂನಂ ಚುಂಬಿಸಲು ಯುವಕನಿಂದ ಯತ್ನ



ಬಾಲಿವುಡ್ ನಟಿ ಪೂನಂ ಪಾಂಡೆ ಸಾಮಾಜಿಕ ಜಾಲತಾಣಗಳಲ್ಲಿ ಆಗಾಗ ಸುದ್ದಿಯಲ್ಲಿರುತ್ತಾರೆ. ಈಗ ಅವರ ಮತ್ತೊಂದು ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಈ ವೈರಲ್ ವಿಡಿಯೋದಲ್ಲಿ, ಅಭಿಮಾನಿಯೊಬ್ಬರು ಪೂನಂ ಪಾಂಡೆಗೆ ಮುತ್ತಿಡಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಪೂನಂ ಪಾಂಡೆ ಅವರ ಈ ವಿಡಿಯೋ ಬಗ್ಗೆ ಕೆಲವು ಸಾಮಾಜಿಕ ಮಾಧ್ಯಮ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. ಅದೇ ಸಮಯದಲ್ಲಿ, ಅನೇಕ ಸಾಮಾಜಿಕ ಮಾಧ್ಯಮ ಬಳಕೆದಾರರು ಪೂನಂ ಪಾಂಡೆಯನ್ನು ಟ್ರೋಲ್ ಮಾಡುತ್ತಿದ್ದಾರೆ. ಈ ವಿಡಿಯೋ ಸ್ಕ್ರಿಪ್ಟ್ ಮಾಡಲಾಗಿದೆ ಎಂದು ಜನರು ಹೇಳುತ್ತಾರೆ. ಪೂನಂ ಪಾಂಡೆ ಅವರ ಈ ವಿಡಿಯೋವನ್ನು ವೈರಲ್ ಭಯಾನಿ ಅವರ ಇನ್‌ಸ್ಟಾಗ್ರಾಮ್ ಪುಟದಲ್ಲಿ ಪೋಸ್ಟ್ ಮಾಡಲಾಗಿದೆ. ಈ ವಿಡಿಯೋದಲ್ಲಿ ಪೂನಂ ಪಾಂಡೆ ಕೆಂಪು ಬಣ್ಣದ ಡ್ರೆಸ್ ಧರಿಸಿ ನಿಂತಿರುವುದನ್ನು ನೀವು ನೋಡಬಹುದು. ಅವರ ಹಿಂದಿನಿಂದ ಒಬ್ಬ ವ್ಯಕ್ತಿ ಬರುತ್ತಾನೆ. ಆ ವ್ಯಕ್ತಿಯನ್ನು ನೋಡಿದ ನಂತರ ಪೂನಂ ಸ್ವಲ್ಪ ಆಘಾತಕ್ಕೊಳಗಾಗುತ್ತಾಳೆ. ಇದಾದ ನಂತರ, ಆ ವ್ಯಕ್ತಿ ತನ್ನ ಫೋನ್ ತೆಗೆದು ಸೆಲ್ಫಿ ತೆಗೆದುಕೊಳ್ಳಲು ಪ್ರಾರಂಭಿಸುತ್ತಾನೆ.

# ಹಾಲಿವುಡ್ ಸಿನೆಮಾದಲ್ಲಿ ಸಲ್ಮಾನ್ ಖಾನ್



## ಶೂಟಿಂಗ್ ವಿಡಿಯೋ ಲೀಕ್!

2021ರ ಅರ್ಜೆಂಟೈನಾದ ಸೆವೆನ್ ಡಾಗ್ಸ್ ಸಿನೆಮಾದ ರಿಮೇಕ್ ಸೌದಿ ಅರೇಬಿಯಾದಲ್ಲಿ ನಡೆಯುತ್ತಿದ್ದು, ಬಾಲಿವುಡ್ ನಟ ಸಲ್ಮಾನ್ ಖಾನ್ ಆಟೋ ಡ್ರೈವರ್ ಪಾತ್ರದಲ್ಲಿ ಕಾಣಿಸಿಕೊಂಡಿರುವ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗುತ್ತಿದೆ. ಸಲ್ಮಾನ್ ಖಾನ್ ಫಸ್ಟ್ ಲುಕ್ ಆನ್‌ಲೈನ್‌ನಲ್ಲಿ ವೈರಲ್ ಆಗ್ತಿದ್ದಂತೆ, ಆಟೋ ಡ್ರೈವರ್ ವೇಷ ಧರಿಸಿರುವ ಹಲವಾರು ವಿಡಿಯೊಗಳು ವೈರಲ್ ಆಗುತ್ತಿವೆ. ಶೂಟಿಂಗ್‌ನಲ್ಲಿ ಸಲ್ಮಾನ್ ಖಾನ್ ಜೊತೆ ಸ್ನೇಹಿತ ಮತ್ತು ನಟ ಸಂಜಯ್ ದತ್ ಇದ್ದರು. ಈ ವಿಡಿಯೋದಲ್ಲಿ ಸಲ್ಮಾನ್ ಖಾನ್ ಕಂದು ಬಣ್ಣದ ಶರ್ಟ್‌ನೊಂದಿಗೆ ಚೆಕ್ಸ್ ಶರ್ಟ್, ಮ್ಯಾಚಿಂಗ್ ಪ್ಯಾಂಟ್ ಮತ್ತು ಕೂಲಿಂಗ್ ಗ್ಲಾಸ್ ಧರಿಸಿ, ಆಟೋ ರಿಕ್ಷಾದ ಮೇಲೆ ಪೋಸ್ ಕೊಟ್ಟಿದ್ದಾರೆ. ಸಂಜಯ್ ದತ್ ನೀಲಿ ಸೂಟ್ ಧರಿಸಿದ್ದಾರೆ. ಇನ್ನೊಂದು ವಿಡಿಯೋದಲ್ಲಿ ಸಲ್ಮಾನ್ ಖಾನ್ ಭಾರೀ ಭದ್ರತೆಯ ನಡುವೆ ಶೂಟಿಂಗ್ ಸ್ಥಳಕ್ಕೆ ಆಗಮಿಸುತ್ತಿರುವುದು ಸೆರೆಯಾಗಿದೆ. ದುಬೈನಲ್ಲಿ ನಿರ್ಮಿಸಲಾದ ಬೃಹತ್ ಸೆಟ್ ಮುಂಬೈನ ಧಾರಾವಿ ಸ್ಲಮ್‌ನ್ನು ಹೋಲುವಂತೆ ನಿರ್ಮಿಸಲಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966